ಕನ್ನಡ ಪುಸ್ತಕ ಸಂಸ್ಕೃತಿ : ಕಾವ್ಯಾಲಯ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ನಿಬಂಧ

ಸಂಶೋಧನಾ ಅಭ್ಯರ್ಥಿ
ಸಾಧ್ವಿರಾಣಿ ಬಿ. ಎಂ.

ಮಾರ್ಗದರ್ಶಕ
ಡಾ. ಕೆ.ಸಿ. ಶಿವಾರೆಡ್ಡಿ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳ್ಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

೨೦೦೯

791

ದೃಢೀಕರಣ ಪತ್ರ

ಸಾಧ್ವಿರಾಣಿ ಬಿ.ಎಂ. ಅವರು **"ಕನ್ನಡ ಪುಸ್ತಕ ಸಂಸ್ಕೃತಿ – ಕಾವ್ಯಾಲಯ"** ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಳಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಹಂಪಿ [illegible]

ದಿನಾಂಕ: 06.10.2009

ಶಿವಾರೆಡ್ಡಿ ಕೆ.ಸಿ.

ಡಾ. ಕೆ.ಸಿ.ಶಿವಾರೆಡ್ಡಿ

791

ದೃಢೀಕರಣ ಪತ್ರ

"ಕನ್ನಡ ಪುಸ್ತಕ ಸಂಸ್ಕೃತಿ : ಕಾವ್ಯಾಲಯ"ಎಂಬ ಶೀರ್ಷಿಕೆಯ ಪ್ರಬಂಧವನ್ನು ಡಾ. ಕೆ. ಸಿ. ಶಿವಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಎಂ. ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಈ ಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗೆ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಕುಪ್ಪಳ್ಳಿ

ದಿನಾಂಕ : 04.10.08

Sadvi Rani B.M

ಸಾದ್ವಿರಾಣಿ ಬಿ. ಎಂ.

ಸಂಶೋಧನ ಅಭ್ಯರ್ಥಿ

ಕುವೆಂಪು, ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳ್ಳಿ

ಪರಿವಿಡಿ

ಅಧ್ಯಾಯ-೧
ಪ್ರಸ್ತಾವನೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ :

ಯುರೋಪಿನ ಕೈಗಾರಿಕಾ ಕ್ರಾಂತಿಯ ನಂತರ ಪ್ರಪಂಚದಾದ್ಯಂತ ಸಾಕಷ್ಟು ಕ್ರಾಂತಿಕಾರಕ ಬದಲಾವಣೆಗಳು ಉಂಟಾದವು. ಯಂತ್ರಗಳಿಗೆ ಸಂಬಂಧಿಸಿದಂತೆ ಹೊಸ ಹೊಸ ಆವಿಷ್ಕಾರಗಳು ನಡೆದವು. ಮುದ್ರಣ ಕಲೆ ಕೂಡ ಈ ಕ್ರಾಂತಿಯ ಕೊಡುಗೆಯೇ ಆಗಿದೆ. ಭಾರತವನ್ನು ಬ್ರಿಟಿಷರು ವಸಾಹತುವನ್ನಾಗಿಸಿಕೊಂಡ ನಂತರ ಆಧುನಿಕ ಶಿಕ್ಷಣ ಪದ್ಧತಿ, ಮಿಶನರಿಗಳ ಆಗಮನ, ಸಂಶೋಧನೆ, ಮುದ್ರಣ ವ್ಯವಸ್ಥೆ ಇತ್ಯಾದಿಗಳು ಭಾರತವನ್ನು ಪ್ರವೇಶಿಸಿದವು. ಇವುಗಳ ಆಗಮನದಿಂದ ಜನರ ಮನಸ್ಸಿನಲ್ಲಿ ಶತಶತಮಾನಗಳಿಂದ ಬೇರುಬಿಟ್ಟಿದ್ದ ವಿಚಾರಗಳು ಹೊಸ ರೂಪವನ್ನು ಪಡೆದುಕೊಂಡವು. 'ಶತಮಾನಗಳಿಂದ ವಿದ್ಯೆ, ಅಕ್ಷರ, ಸಂಸ್ಕೃತಿ ಎಂಬುದನ್ನು ಮೂಸಿ ಕೂಡನೋಡದೆ ಇರುವ ಮನೆತನಗಳಿಂದ ಬಂದ ಮಕ್ಕಳು ಇಂದು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ'[೧]

ಬ್ರಿಟಿಷ್ ಬೈಬಲನ್ನು ಭಾರತೀಯ ಭಾಷೆಗಳಿಗೆ ಅನುವಾದಿಸಿ, ಕ್ರೈಸ್ತಧರ್ಮವನ್ನು ಪ್ರಚಾರ ಮಾಡುವ ಉದ್ದೇಶದಿಂದ ಮುದ್ರಣ ಯಂತ್ರಗಳನ್ನು ಆಮದು ಮಾಡಿಕೊಂಡರು. ಈ ಹಿನ್ನೆಲೆಯಲ್ಲಿ ಆಮದಾದ ಯಂತ್ರಗಳು ಮುಂದೆ ಇಂಗ್ಲೀಷ್ ಕೃತಿಗಳ, ಸಂಶೋಧಿಸಲ್ಪಟ್ಟ ಕೃತಿಗಳ ಮುದ್ರಣವನ್ನು ಕೈಗೊಂಡವು. ಕ್ರಮೇಣ ಈ ಮುದ್ರಣ ವ್ಯವಸ್ಥೆಯು ಭಿನ್ನ ಭಿನ್ನ ಆಯಾಮಗಳನ್ನು ಪಡೆದುಕೊಂಡಿತು. ವೈಯಕ್ತಿಕವಾಗಿ, ಖಾಸಗಿಯಾಗಿ, ಸರ್ಕಾರದ ನೇತೃತ್ವದಲ್ಲಿ ಪ್ರಕಟಣೆಗಳಾಗ ತೊಡಗಿದವು.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಜ್ಞಾನಪ್ರಸಾರ ಕಾರ್ಯದಲ್ಲಿ ಲೇಖಕರ ಪಾತ್ರ ಪ್ರಮುಖವಾದದ್ದು. ಹಾಗೆಯೇ ಪ್ರಕಾಶಕರ ಪಾತ್ರ ಕೂಡ ಅಷ್ಟೇ ಮಹತ್ವದ್ದಾಗಿದೆ. ಪ್ರಕಟಣೆಗೆ ಸಂಬಂಧಿಸಿದ ಉದ್ಯೋಗ, 'ಪ್ರಕಟನೋದ್ಯಮ' ಅಥವಾ 'ಪ್ರಕಾಶನ' ಕೃತಿಗಳನ್ನು ಪರಿಶೀಲಿಸಿ, ಪರಿಷ್ಕರಿಸಿ ಪುಸ್ತಕ ರೂಪದಲ್ಲಿ ಅಚ್ಚುಹಾಕಿಸಿ, ಅವುಗಳು ಸುಲಭವಾಗಿ ಎಲ್ಲರಿಗೂ ದೊರೆಯುವಂತೆ ಮಾಡುವುದು ಪ್ರಕಾಶಕರ ಕೆಲಸ. ಪ್ರಕಾಶಕರಲ್ಲಿ ಹಲವಾರು ಬಗೆಯ ಪ್ರಕಾಶಕರಿದ್ದಾರೆ. ಎಲ್ಲರ ಉದ್ದೇಶವೂ ಕೃತಿಗಳನ್ನು ಅಚ್ಚುಹಾಕಿಸುವುದೇ ಆಗಿದೆ. ಆದರೆ ಅವರು ಅನುಸರಿಸುವ ನೀತಿಗಳು ಒಂದೊಂದು ಬಗೆ. ಪ್ರಕಾಶಕರ ಅಭಿರುಚಿ, ವ್ಯಕ್ತಿತ್ವಕ್ಕೆ

ಅನುಗುಣವಾಗಿ ಕೃತಿಗಳು ಅಚ್ಚಾಗುತ್ತವೆ. ಅನೇಕ ಜವಾಬ್ದಾರಿಗಳನ್ನು ಹೊತ್ತು ಯಶಸ್ವಿಯಾಗುವುದು ಅವರ ಗುರಿ. ಇಂತಹ ಸವಾಲುಗಳ ನಡುವೆ ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಸಂಸ್ಥೆಗಳಲ್ಲಿ 'ಕಾವ್ಯಾಲಯ'ವು ಒಂದು. 'ಸಾಹಿತ್ಯ' ಎಂಬ ಪದವನ್ನು ವಿಶ್ಲೇಷಿಸುವಾಗ ಕೆಲವೊಂದು ವ್ಯಾಖ್ಯಾನಗಳ ಮಿತಿಯಲ್ಲಿ ಗಮನಿಸಲಾಗುತ್ತದೆ. ಆದರೆ 'ಸಾಹಿತ್ಯ' ಎಂಬ ಪದವನ್ನು ಆ ನಿಟ್ಟಿನಲ್ಲಿ ಮಾತ್ರ ಗಮನಿಸದೆ ವಿಶಾಲವಾದ ದೃಷ್ಟಿಕೋನದಲ್ಲಿ ನೋಡಬೇಕು. ಅಂದರೆ 'ಸಂಸ್ಥೆ' ಎಂಬ ಅರ್ಥದಲ್ಲಿ ಸಾಹಿತ್ಯವನ್ನು ನೋಡಿದಾಗ ಒಂದು ಕೃತಿಗೆ ಕೃತಿಗಾರನಷ್ಟೇ ಮುಖ್ಯವಾಗದೆ, ಪ್ರಕಾಶನಗಳು, ಪ್ರಕಾಶಕರು ಕೂಡ ಮುಖ್ಯರಾಗುತ್ತಾರೆ. ನವೋದಯ ಸಂದರ್ಭದಲ್ಲಿ ಮಹತ್ವದ ಕೃತಿಗಳನ್ನು ಸಾಹಿತ್ಯಲೋಕಕ್ಕೆ ಪರಿಚಯಿಸಿದಂತಹ ಹೆಗ್ಗಳಿಕೆ ಮೈಸೂರಿನ 'ಕಾವ್ಯಾಲಯ' ಪ್ರಕಾಶನದ್ದು.

ಕಾವ್ಯಾಲಯ ಸಾಹಿತ್ಯದ ಬೆಳವಣಿಗೆಗೆ ಒತ್ತಾಸೆಯನ್ನು ನೀಡಿ, ಲೇಖಕರಿಗೆ ಅನುಕೂಲವಾಗುವ ರೀತಿ ನಿಯಮಾವಳಿಗಳನ್ನು ರೂಪಿಸಿಕೊಂಡು ಹೇಗೆ ಕಾರ್ಯನಿರ್ವಹಿಸಿತು ಎಂಬುದನ್ನು ಈ ಅಧ್ಯಯನದ ಮುಖೇನ ಕಂಡುಕೊಳ್ಳಲಾಗುವುದು. ನಮ್ಮ ಸಂದರ್ಭಕ್ಕೆ ಅನುಗುಣವಾಗಿ ಪ್ರಕಾಶನದ ನೀತಿನಿಯಮಗಳು ರೂಪುಗೊಂಡಿದ್ದವು ಎಂಬುದಕ್ಕೆ ಅಗತ್ಯವಾದ ಆಧಾರಗಳನ್ನು ಶೋಧಿಸಿಕೊಂಡು ಅಧ್ಯಯನಕ್ಕೆ ತೊಡಗಿಸಲಾಗುವುದು. ಎಷ್ಟೋ ಬಾರಿ ಪ್ರಕಟಣೆಗಾಗಿ ಕಳುಹಿಸಿರುವ ಕೃತಿಗಳನ್ನು ತಿರಸ್ಕರಿಸಿರುವ, ಅರೆಕೊರೆಗಳನ್ನು ಸರಿಪಡಿಸಿರುವ, ಲೇಖಕರಿಗೆ ಆರ್ಥಿಕ, ಮಾನಸಿಕ ಸ್ಥೈರ್ಯವನ್ನು ತುಂಬಿರುವ ಅನೇಕ ಉದಾಹರಣೆಗಳು ಆಧಾರ ಸಮೇತ ದೊರಕಿವೆ. ಯಾವ ಯಾವ ಸಂದರ್ಭದಲ್ಲಿ ಈ ಬಗೆಯ ಜವಾಬ್ದಾರಿಗಳನ್ನು ಪ್ರಕಾಶಕರು ವಹಿಸಿಕೊಳ್ಳುತ್ತಿದ್ದರು. ಎಂಬುದನ್ನು ತಿಳಿಯುವ ಪ್ರಯತ್ನ ಮುಂದಿನ ಅಧ್ಯಾಯಗಳಲ್ಲಿ ಮಾಡಲಾಗುತ್ತದೆ. ಕಾವ್ಯಾಲಯ ಇದುವರೆಗೂ ಪ್ರಕಟಿಸಿದಂತಹ ವಿಭಿನ್ನ ಪ್ರಕಾರಗಳ ಕೃತಿಗಳನ್ನು ಪರಿಶೀಲಿಸಿ, ಅವರ ಧ್ಯೇಯಗಳೇನು? ಪ್ರಕಟಣೆಯ ಹಿಂದಿನ ಉದ್ದೇಶವೇನು? ಎಂಬುದನ್ನು ಗುರುತಿಸುವುದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಕನ್ನಡ ಭಾಷೆಯ ದೀರ್ಘವಾದ ಇತಿಹಾಸವನ್ನು ಹೊಂದಿರುವಂತಹ ಪ್ರಮುಖ ಭಾಷೆಗಳಲ್ಲಿ ಒಂದಾಗಿದೆ. ಇದರ ಕನ್ನಡ ಭಾಷೆಯ ಸಾಹಿತ್ಯ ರಚನೆ ಕೂಡ ಒಂದು ಮಹತ್ವದ ಪರಂಪರೆಯನ್ನು ಹೊಂದಿರುವಂತಹದ್ದು. ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದಿ ರಚನೆಯಾದಂತಹ ಸಾಹಿತ್ಯದ ಮಾದರಿಗಳನ್ನು ಗಮನಿಸಿದಾಗ ಕೆಲವೊಂದು ಅಂಶಗಳು ಸ್ಪಷ್ಟವಾಗುತ್ತವೆ. ಅವುಗಳಲ್ಲಿ ಸೂಕ್ಷ್ಮವಾದ ಬೆಳವಣಿಗೆಯನ್ನು ಗುರುತಿಸಬಹುದು. ಪ್ರಾರಂಭದಲ್ಲಿ ಹಸ್ತಪ್ರತಿ, ತಾಳೆಗರಿ, ಶಾಸನ, ಕಡತಗಳಲ್ಲಿ ಸಾಹಿತ್ಯವೆಂಬ ಜ್ಞಾನ ಹುದುಗಿರುತ್ತಿತ್ತು. ಹೀಗೆ ಇದ್ದಂತಹ ಜ್ಞಾನಭಂಡಾರವನ್ನು ಯಾವ ರೀತಿಯಲ್ಲಿ ಸಂರಕ್ಷಿಸುವುದು? ಸಮಕಾಲೀನ ಸಂದರ್ಭದ ಅಗತ್ಯಗಳನ್ನು ಹೇಗೆ ಪೂರೈಸುವುದು? ಅವುಗಳನ್ನು ಮುಂದಿನ ತಲೆಮಾರಿಗೆ

ಹೇಗೆ ರವಾನಿಸುವುದು? ಎಂಬ ತೀರ್ಮಾನಗಳ ಹಿನ್ನೆಲೆಯಲ್ಲಿ ಪ್ರಕಾಶನಗಳು ಹುಟ್ಟಿಕೊಂಡವು. ತಲೆಮಾರುಗಳಿಂದ ಮಾನವನ ಚರಿತ್ರೆ, ಅನುಭವಗಳು, ವಿಚಾರಗಳು ಪುಸ್ತಕ ಮಾಧ್ಯಮದ ಮೂಲಕವೇ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ಸಾಹಿತ್ಯವನ್ನು ದಾಖಲೆಯನ್ನಾಗಿ ಇಡುವ ಪ್ರಯತ್ನದಲ್ಲಿ ಕಾವ್ಯಾಲಯ ಕೈಗೊಂಡ ಕ್ರಮಗಳೇನು? ಪ್ರಕಟಣೆಯ ಕ್ರಮಗಳು ಯಶಸ್ವಿಯಾದವೇ? ಅವುಗಳನ್ನು ಇತರ ಪ್ರಕಾಶಕರು ಅನುಸರಿಸಿದರೆ? ಎಂಬಂತಹ ವಿಚಾರಗಳನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲು ಉದ್ದೇಶಿಸಲಾಗಿದೆ. ಇಂದಿನ ಯಂತ್ರ ಉಧ್ಯಮ ಪಾಶ್ಚಾತ್ಯ ದೇಶಗಳಲ್ಲಿ ನಡೆದ ವೈಜ್ಞಾನಿಕ ಮತ್ತು ಕೈಗಾರಿಕಾ ಕ್ರಾಂತಿಯ ಫಲ. ಅಧುನಿಕ ಯುಗದ ಆರ್ಥಿಕತೆಯಲ್ಲಿ ಯಂತ್ರಗಳ ಪಾತ್ರ ಮಹತ್ವದ್ದಾಗಿದೆ. 'ಕೈಗಾರಿಕಾ ಕ್ರಾಂತಿಯ ಪರಿಣಾಮ ಭಾರತವನ್ನು ತಲುಪುವ ಮೊದಲು ಈ ನಾಡಿನಲ್ಲಿಯೂ ಸಹ ಬಹು ಹಿಂದಿನ ಕಾಲದಿಂದಲೂ ತಿಗರಿ, ಮಗ್ಗ, ಕುಲುಮೆಗಳಂತಹ ಬಹು ಸರಳವಾದ ಯಂತ್ರಗಳು ಬಳಕೆಯಲ್ಲಿದ್ದು, ಅವುಗಳ ಉಪಯೋಗ ಚಿಕ್ಕ ಗೃಹ ಉದ್ಯಮಗಳಿಗೆ ಸೀಮಿತವಾಗಿತ್ತು' [೨]

ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದಾಗಿ ಮುದ್ರಣ ವ್ಯವಸ್ಥೆ, ಪ್ರಕಟಣಾ ಮಾದರಿಗಳು ಹುಟ್ಟಿಕೊಂಡವು. ಪ್ರಕಾಶನದ ಇತಿಹಾಸವನ್ನು ಗಮನಿಸಿದಾಗ ಕ್ರೈಸ್ತಮತ ಪ್ರಚಾರದ ಉದ್ದೇಶವನ್ನು ಇಟ್ಟುಕೊಂಡು ಸ್ಥಾಪನೆಯಾದಂತಹ ಮಿಶನರಿ ಸಂಸ್ಥೆಗಳೇ ನಮ್ಮ ನಾಡಿನ ಮೊದಲ ಪ್ರಕಾಶಕರು ಎಂಬುದು ಸ್ಪಷ್ಟವಾದ ವಿಚಾರ. ಇದನ್ನು ಕಾಲಕ್ರಮೇಣ ದೇಶಿಯರು ಅನುಕರಣೆ ಮಾಡತೊಡಗಿದರು. ಕೂಡಲಿ ಚಿದಂಬರಂ ಅವರೇ ಹೇಳುವಂತೆ "ದೇಶಿಯರಲ್ಲಿ ಪ್ರಕಟಣೆಗೆ ತೊಡಗಿದವರು ಪ್ರಾಯಶಃ ಶೆಟ್ಟರು ಅವರು ತಮ್ಮ 'ಸ್ವಕೀಯ ಮುದ್ರಾಕ್ಷರ ಶಾಲೆ' ಗಳಲ್ಲಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಮೊದಲಾದ ಪ್ರಚಲಿತ ಕಾವ್ಯಗಳನ್ನು ಪ್ರಕಟಿಸಿದರು. "[೩] ಈ ಹೇಳಿಕೆಯನ್ನು ಇಟ್ಟುಕೊಂಡು ಇದರ ಜೊತೆಗೇನೆ ಪೂರಕವಾದ ಇತರ ವಿಚಾರಗಳನ್ನು ಪರಾಮರ್ಶಿಸುವ, ವಿವೇಚಿಸುವ ಆಧಾರ ಸಮೇತ ಒಪ್ಪಿಕೊಳ್ಳುವ ಪ್ರಯತ್ನವನ್ನು ಮುಂದಿನ ಅಧ್ಯಾಯಗಳಲ್ಲಿ ಮಾಡಲಾಗುತ್ತದೆ. ಇತರ ಪ್ರಕಾಶನಗಳಂತೆ ಕಾವ್ಯಾಲಯವು ಭಿನ್ನವಾದ ಧೋರಣೆಗಳನ್ನು, ಉದ್ದೇಶಗಳನ್ನು ಇಟ್ಟುಕೊಂಡು ಸ್ಥಾಪನೆಯಾದುದು ಎಂಬ ಮಾತನ್ನು ಆಧಾರ ಸಹಿತ ಒಪ್ಪಿಕೊಳ್ಳಬಹುದು. ಇವುಗಳನ್ನಿಟ್ಟುಕೊಂಡು ಎಷ್ಟರಮಟ್ಟಿಗೆ ಕಾವ್ಯಾಲಯ ಯಶಸ್ವಿಯಾಯಿತು? ಎಂದು ತಿಳಿಯುವುದು ಅಧ್ಯಯನದ ಮತ್ತೊಂದು ಹೆಜ್ಜೆಯಾಗಿದೆ.

ಕೂಡಲಿ ಚಿದಂಬರಂ ಅವರೇ ಹೇಳುವಂತೆ "ಈಗ ಕನ್ನಡನಾಡಿನಲ್ಲಿ ಹಲವಾರು ಪ್ರಕಾಶಕರಿದ್ದಾರೆ. ಅವರ ಕಾರ್ಯನೀತಿ ಒಬ್ಬೊಬ್ಬರದು ಒಂದು ಬಗೆ, ವ್ಯಾಪಾರ ನೀತಿ ಒಂದೊಂದು ತೆರ. ಪ್ರಕಾಶನದ ಅಭಿರುಚಿಗೆ ಅನುಸಾರವಾಗಿ, ವ್ಯಕ್ತಿತ್ವಕ್ಕೆ ಅನುಗುಣವಾಗಿ ಅವನ ಸಂಸ್ಥೆಯಿಂದ ಗ್ರಂಥಗಳು ಪ್ರಕಟವಾಗುತ್ತವೆ ಎಂದು ಸಾಮಾನ್ಯವಾಗಿ ಹೇಳಬಹುದು.

ಪುಸ್ತಕಗಳ ಅಚ್ಚುಕಟ್ಟಿನಲ್ಲಿ ಸಂಸ್ಥೆ ಸಂಸ್ಥೆಗೆ ವ್ಯತ್ಯಾಸ ತೋರುವುದು ಸಹಜ". ಈ ಹೇಳಿಕೆಯಂತೆ ವ್ಯತ್ಯಾಸಗಳ ನೆಲೆಗಳು ಯಾವ ಬಗೆಯವು? ಎಂಬುದನ್ನು ಅಧ್ಯಯನದ ಮೂಲಕ ತಿಳಿಯಲಾಗುತ್ತದೆ. ಚಿಂತನಶೀಲ ಪ್ರತಿಭೆಗಳು ಈ ಸಂಸ್ಥೆಯ ಬೆನ್ನೆಲುಬಾಗಿ ಕಾರ್ಯನಿರ್ವಹಿಸಿರುವ, ಉತ್ತಮ ಕೃತಿಗಳು ಉತ್ತಮ ರೀತಿಯಲ್ಲಿ ಪ್ರಕಟಗೊಂಡಿರುವ ಪುರಾವೆಗಳು ಅಧ್ಯಯನದ ಸಂದರ್ಭದಲ್ಲಿ ಶೋಧಿಸಿಕೊಂಡು ಇವುಗಳನ್ನು ಪರಿಶೀಲನೆಗೆ ಒಳಪಡಿಸಲಾಗುತ್ತದೆ.

ಕಾವ್ಯಾಲಯ ತನ್ನ ಹೆಸರನ್ನು ಅಂದಿನಿಂದ ಇಂದಿನವರೆಗೂ ಸಮಾನವಾಗಿ ಕಾಯ್ದುಕೊಳ್ಳುವಲ್ಲಿ ಹೇಗೆ ಯಶಸ್ವಿಯಾಗಿದೆ? ಪ್ರಕಟವಾದ ಕೃತಿಗಳು ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡಿದ್ದವು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಕಾವ್ಯಾಲಯ ಕನ್ನಡ ಪುಸ್ತಕ ಪ್ರಪಂಚಕ್ಕೆ ಪುಸ್ತಕ ಸಂಸ್ಕೃತಿಗೆ ನೀಡಿದ ಕಾಣಿಕೆ ಯಾವ ಬಗೆಯದು? ಪ್ರಕಟಣೆಗೆ ಕಾವ್ಯಾಲಯ ತೋರಿದ ಆಸಕ್ತಿ ಯಾವ ರೀತಿಯದು? ಎಂಬ ವಿಚಾರಗಳನ್ನು ಅಧ್ಯಯನದ ಮೂಲಕ ತಿಳಿಯುವ ಪ್ರಯತ್ನವಿದೆ. ಪ್ರಕಟಣೆಗೆ ಕೈಗೊಂಡ ಪ್ರತಿಯೊಂದು ನಿರ್ಣಯಗಳು ಕೂಡ ಓದುಗನ ಜ್ಞಾನಶಾಖೆಯನ್ನು ವಿಸ್ತರಿಸುವಂತವುಗಳಾಗಿವೆ. ಇವುಗಳೆಲ್ಲವನ್ನೂ ಗ್ರಹಿಸುವ ಪ್ರಯತ್ನ ಈ ಅಧ್ಯಯನದ ಉದ್ದೇಶವಾಗಿದೆ. ಓದುವಿಕೆ ಕೇವಲ ಲೇಖಕರ ಬರವಣಿಗೆಯ ಕಡೆಗೆ ಮಾತ್ರ ಕೇಂದ್ರಿಕರಿಸಬಾರದು. ಅದರಾಚೆಗೂ ಜ್ಞಾನದೃಷ್ಟಿಯನ್ನು ವಿಸ್ತರಿಸುವ ಪ್ರಯತ್ನ ಮಾಡಬೇಕು. ಅಂದರೆ, ಪ್ರಕಾಶಕರ, ಕಲಾವಿದರ ಪ್ರತಿಭೆ, ಶ್ರಮದ ಕಡೆಗೂ ದೃಷ್ಟಿ ಹಾಯಿಸಬೇಕು. ಕೆಲವೊಮ್ಮೆ ಬಹುಜನರಿಗೆ ಇದು ಮುಖ್ಯವಾಗಿರುವುದೇ ಇಲ್ಲ. ಒಂದು ಕೃತಿಯಲ್ಲಿ ಕೇವಲ ಒಳಗೆ ಪ್ರಸ್ತಾಪವಾದ ವಿಷಯಗಳು ಮಾತ್ರ ಮುಖ್ಯವಲ್ಲ. ಅದಕ್ಕೆ ಹೊರತಾಗಿಯೂ ತನ್ನದೇ ಆದ ಪರಂಪರೆಯನ್ನು ರೂಢಿಸಿಕೊಂಡು, ಲೇಖಕರನ್ನು ಪ್ರೋತ್ಸಾಹಿಸುತ್ತಾ, ಅವರ ಕೃತಿಗಳನ್ನು ಪ್ರಕಾಶಿಸುವ ಜವಾಬ್ದಾರಿಯನ್ನು ಹೊತ್ತಿರುವ ಸಂಸ್ಥೆಗಳಿವೆ. ಅವುಗಳ ಜವಾಬ್ದಾರಿಗಳೇನು? ಮಾರ್ಗಗಳೇನು? ಈ ಬಗೆಯ ಓದು ಏಕೆ ಮುಖ್ಯವಾಗುತ್ತದೆ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಪ್ರಸ್ತುತ ಅಧ್ಯಯನದ ಮುಖ್ಯ ನೆಲೆಯಾಗಿದೆ.

ಪ್ರಸ್ತುತದಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ 'ಕನ್ನಡ ಪುಸ್ತಕ ಸಂಸ್ಕೃತಿ - ಕಾವ್ಯಾಲಯ' ಎಂಬ ವಿಷಯವು ಕಾವ್ಯಾಲಯ ಆರಂಭವಾದಾಗಿನಿಂದ ಇಂದಿನವರೆಗೂ ಪ್ರಕಟವಾದ ಕೃತಿಗಳ ಕೆಲವೊಂದು ಪ್ರಕಾರಗಳನ್ನು ಪರಾಮರ್ಶಿಸುವುದು. ಈ ಅಧ್ಯಯನದ ವ್ಯಾಪ್ತಿ ಮತ್ತು ಮಿತಿಗಳಿಗೆ ಒಳಪಡುತ್ತದೆ. ಕಾದಂಬರಿ, ಕವನಸಂಕಲನ, ಕಥೆ, ನಾಟಕ, ಆತ್ಮಚರಿತ್ರೆ, ಜೀವನಚರಿತ್ರೆ, ವಿಮರ್ಶೆ, ಅನುವಾದಿತ ಕೃತಿಗಳು, ಮಕ್ಕಳ ಸಾಹಿತ್ಯ, ವಯಸ್ಕರ ಶಿಕ್ಷಣದ ಪುಸ್ತಕಗಳು - ಹೀಗೆ ಹಲವು ಪ್ರಕಾರಗಳನ್ನು ಪ್ರಕಟಿಸಿದ ಉದ್ದೇಶ ಅದರ ಹಿಂದೆ ಇದ್ದಂತಹ ಪ್ರಕಾಶನದ ಆಸಕ್ತಿಯೇನು? ಎಂಬುದನ್ನು ತಿಳಿಯುವ ಪ್ರಯತ್ನವು ಈ ನನ್ನ ಅಧ್ಯಯನದ ವ್ಯಾಪ್ತಿಯೊಳಗೆ ಸೇರುತ್ತದೆ.

ಕಾವ್ಯಾಲಯದ ಇತಿಹಾಸವನ್ನು ಕೂಡ ಅಧ್ಯಯನಕ್ಕೆ ಗುರಿಪಡಿಸಲಾಗುವುದು. ಕಾವ್ಯಾಲಯ ಸ್ಥಾಪನೆಯಾದ ಉದ್ದೇಶವನ್ನು ಮತ್ತು ಅದರ ಸಾಧಕ ಬಾಧಕಗಳನ್ನು ಸಂಗ್ರಹವಾಗಿ ತಿಳಿಸಲಾಗುತ್ತದೆ. ರಚನೆ, ಮುದ್ರಣ, ಪ್ರಕಟಣೆ ಇವುಗಳು ಪಾಶ್ಚಾತ್ಯರ ಸಂದರ್ಭದಲ್ಲಿ ಮತ್ತು ಭಾರತದ ಸಂದರ್ಭದಲ್ಲಿ ಭಿನ್ನವಾದ ಆಯಾಮಗಳನ್ನು ಪಡೆದುಕೊಂಡಿರುವ ವಿಚಾರಗಳು ಮಾಹಿತಿ ಸಂಗ್ರಹಣೆಯ ಸಂದರ್ಭದಲ್ಲಿ ತಿಳಿದುಬಂದಿದೆ. ಅವುಗಳು ಬೆಳೆದು ಬಂದ ಹಾದಿ ಯಾವುದು? ಬೆಳವಣಿಗೆಯ ಹಂತವನ್ನು ಯಾವಾಗ ಪಡೆದುಕೊಂಡವು? ಎಂಬ ವಿಚಾರಗಳನ್ನು ಈ ಅಧ್ಯಯನದಲ್ಲಿ ಪರಿಶೀಲಿಸಲಾಗುತ್ತದೆ. ಮೊದಲು ಪ್ರಕಟಣೆ ಎಂಬುದು ಪ್ರೀತಿ, ವಿಶ್ವಾಸ, ನಂಬಿಕೆ ಇವುಗಳ ನಡುವೆ ನಡೆಯುತ್ತಿದ್ದು, ಕಾಲಕ್ರಮೇಣ ನ್ಯಾಯ, ನೀತಿ, ಕರ್ತವ್ಯ, ಹೊಣೆ ಇವುಗಳನ್ನು ಅರಿಯದೆ ಪುಸ್ತಕ ಉದ್ಯಮವು ವ್ಯವಹಾರಕ್ಕೆ ಇಳಿದುದು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಕಾನೂನಾತ್ಮಕ ಒಪ್ಪಂದಗಳು ಅಗತ್ಯವಾಗುತ್ತವೆ. ಇವುಗಳನ್ನು ಕೂಡ ಈ ಪ್ರಬಂಧದ ಮಿತಿಯಲ್ಲಿ ಸಂಗ್ರಹಿಸಲಾಗುತ್ತದೆ.

ಪುಸ್ತಕದ ಆಕಾರ, ಕಾಗದ ಬಳಕೆ ಪ್ರತಿಯೊಂದಕ್ಕೂ ನಿಯಮವನ್ನು ರೂಪಿಸಲಾಗುತ್ತದೆ. ಈ ಮೂಲಕ ಅವ್ಯವಹಾರ ಕಡಿಮೆ ಮಾಡಲು ಯತ್ನಿಸಲಾಗುತ್ತಿದೆ. ಸರ್ಕಾರದ ಈ ಎಲ್ಲಾ ನೀತಿನಿಯಮಗಳು ಇಲ್ಲದ ಕಾಲದಲ್ಲಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಉತ್ತಮ ಸಾಹಿತ್ಯ ಪ್ರಕಟಣೆ ಹಾಗೂ ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸಿ ಸಾಹಿತ್ಯ ಸೇವೆಯನ್ನು ಮಾಡಿದ ಉದಾಹರಣೆಗಳು ಇವೆ. ಅಂತಹ ಹಿನ್ನೆಲೆಯನ್ನು ಹೊಂದಿರುವ ಮೈಸೂರಿನ ಕಾವ್ಯಾಲಯದ ಚಟುವಟಿಕೆಗಳನ್ನು ಪರಾಮರ್ಶಿಸುವುದು ಈ ಅಧ್ಯಯನದ ಹಿನ್ನೆಲೆಯಾಗಿದೆ. ಪ್ರಕಾಶಕರು ಲೇಖಕರೊಂದಿಗೆ ಪತ್ರ ವ್ಯವಹಾರಗಳನ್ನು ಹೊಂದಿದ್ದರು ಎಂಬುದಕ್ಕೆ ದಾಖಲೆಗಳಿವೆ. ಅವರು ನಡೆಸಿದ ಪತ್ರ ಸಂವಾದಗಳನ್ನು ಗಮನಿಸಿ, ಪ್ರಕಾಶನದವರು ಯಾವ ಯಾವ ಲೇಖಕರೊಂದಿಗೆ ಸಂಬಂಧವನ್ನು ಇಟ್ಟುಕೊಂಡರು? ಆ ಸಂಬಂಧ ಕೇವಲ ಮುದ್ರಣದ ವಿಷಯಕ್ಕಾಗಿಯೇ? ಅಥವಾ ಇನ್ಯಾವುದೋ ಮಹತ್ತರವಾದ ವಿಚಾರಕ್ಕಾಗಿಯೋ? ಎಂಬುದನ್ನು ಪರಿಶೀಲಿಸಿ ಅಧ್ಯಯನಕ್ಕೆ ಗುರಿಪಡಿಸಲಾಗುತ್ತದೆ.

ಹಾಗೆಯೇ ಕಾವ್ಯಾಲಯ ರಾಷ್ಟ್ರಮಟ್ಟದಲ್ಲಿಯೂ ಬೇರೆ ಬೇರೆ ಪ್ರಕಾಶಕರೊಂದಿಗೆ ಸಂಬಂಧವನ್ನು ಹೊಂದಿತ್ತು ಎಂಬ ಮಾಹಿತಿಯ ಹಿನ್ನೆಲೆಯಲ್ಲಿ ಈ ಸಂಬಂಧದ ಉದ್ದೇಶವೇನು? ಅಂತರರಾಷ್ಟ್ರೀಯ ಪ್ರಕಾಶಕರೊಂದಿಗೆ ಇವರು ಆಮದು ಮಾಡಿಕೊಳ್ಳುತ್ತಿದ್ದಂತಹ ವಿಚಾರಗಳೇನು? ನಡೆಸುತ್ತಿದ್ದಂತಹ ಚರ್ಚೆಗಳೇನು? ಎಂಬುದನ್ನೂ ಅಧ್ಯಯನಕ್ಕೆ ಗುರಿಪಡಿಸಲಾಗುವುದು.

ಮುದ್ರಣ ಯಂತ್ರಗಳ ಬಗೆಗೆ ಮಾಹಿತಿಗಳನ್ನು ಸಂಗ್ರಹಿಸುವಾಗ ತಳೆದ ನಿಲುವುಗಳನ್ನು ಪರಾಮರ್ಶಿಸಿ ಅಧ್ಯಯನಕ್ಕೊಳಪಡಿಸಲಾಗುವುದು. ಕೃತಿಗಳನ್ನು ಮುದ್ರಿಸುವಾಗ, ಪ್ರಕಟಿಸುವಾಗ ಪ್ರತಿಯೊಂದು ವಿಚಾರಗಳೂ ಮುಖ್ಯವಾಗುತ್ತವೆ. ಕೆಲವೊಮ್ಮೆ ಕೃತಿಯ ಮುಖಪುಟಗಳನ್ನು ಅಂದವಾಗಿ ಮುದ್ರಿಸಬೇಕಾದ ಅವಶ್ಯಕತೆ ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಖಪುಟ ಮತ್ತು ಕಲಾಕೃತಿಗಳನ್ನು ಮುದ್ರಿಸುವಾಗ ಕಾವ್ಯಾಲಯ ಅನುಸರಿಸಿದ ಮಾರ್ಗಗಳಾವುವು ಎಂಬುದನ್ನು ಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ.

ಮಕ್ಕಳ ಸಾಹಿತ್ಯದ ಪ್ರಕಟಣೆಗೆ ವಿಶೇಷ ಕಾಳಜಿ ವಹಿಸಿದ್ದರು ಎಂಬುದು ಅವರ ಪ್ರಕಟಣೆಗಳನ್ನು ಗಮನಿಸಿದಾಗ ತಿಳಿದುಬರುವ ವಿಚಾರವಾಗಿದೆ. ಅದರ ಹಿಂದಿನ ಉದ್ದೇಶವೇನು? ಕಲಾಕೃತಿಗಳನ್ನು ಮುದ್ರಿಸುವಾಗ ಅವರ ಶ್ರಮವೇನು? ಎಂಬ ವಿಚಾರಗಳ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲಾಗುವುದು. ಕೃತಿಗಳಿಗೆ ಸಂಬಂಧಿಸಿದಂತೆ ಮುನ್ನುಡಿ, ಹಿನ್ನುಡಿ, ಅರಿಕೆ ಬಗೆಗೆ ತಳೆದ ಆಸಕ್ತಿಗಳು ಗಮನಾರ್ಹವಾದುದು. ಕಾವ್ಯಾಲಯದಿಂದ ಪ್ರಕಟಗೊಂಡ ಕೃತಿಗಳಲ್ಲಿ ಮುನ್ನುಡಿ, ಹಿನ್ನುಡಿ, ಅರಿಕೆ ಸಾಹಿತ್ಯವನ್ನು ಕುರಿತಂತೆಯೇ ಒಂದು ಪ್ರಬಂಧವನ್ನು ರಚನೆ ಮಾಡಲು ಸಾಧ್ಯವಿದೆ. ಮುಖ್ಯವೆನಿಸಿದ ಕೃತಿಗಳ ಅರಿಕೆ, ಮುನ್ನುಡಿಯನ್ನು ಆಯ್ಕೆ ಮಾಡಿಕೊಂಡು ಕೆಲವೊಂದನ್ನು ಇಲ್ಲಿ ಅಧ್ಯಯನದ ವ್ಯಾಪ್ತಿಯೊಳಗೆ ಸೇರಿಸಿಕೊಳ್ಳಲಾಗಿದೆ.

"ಪುಸ್ತಕಗಳಿಗೆ ವೈವಿಧ್ಯಮಯವಾದ ಅಂತರಂಗಗಳಿವೆ. ಅವೆಲ್ಲವನ್ನು ಓದುಗರು ಪುರಸ್ಕರಿಸುತ್ತಾರೋ, ಇಲ್ಲವೋ ಎಂಬುದು ಬೇರೆ ಪ್ರಶ್ನೆ ಆದರೆ ಅವೆಲ್ಲವನ್ನೂ ಪರಿಚಯಿಸಿಕೊಳ್ಳುವುದು ಆರೋಗ್ಯಕರ"[8] ಕೃತಿಯನ್ನು ಓದಿದ ಓದುಗನ ಕಡೆಗೆ ಪ್ರಕಾಶನದವರು ಗಮನ ನೀಡುತ್ತಿದ್ದರು. ಎಂಬ ವಿಚಾರ ಕೃತಿಗಳನ್ನು ನೋಡಿದ ಕೂಡಲೇ ತಿಳಿಯುವಂತಹದ್ದು. ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ವಿಮರ್ಶ ಬರಹಗಳನ್ನು ಸಂಗ್ರಹಿಸಿ, ಮುಂದಿನ ಪ್ರಕಟಣೆಗಳಲ್ಲಿ ಸೇರಿಸುತ್ತಿದ್ದರು. ಯಾಕೆ ಈ ಮಾರ್ಗ ಅನುಸರಿಸಿದರು? ಉದ್ದೇಶವೇನು? ಈ ಎಲ್ಲಾ ವಿಚಾರಗಳನ್ನು ಬರಹದ ನೆಲೆಯಲ್ಲಿ ತರಲಾಗುತ್ತದೆ. ಇತರ ಭಾಷೆಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವಾಗ ಮೂಲ ಪ್ರಕಾಶಕರ, ಲೇಖಕರ,ಅನುವಾದಕರ ನಡುವೆ ಅನೇಕ ಒಪ್ಪಂದಗಳಾಗುವುದು ಸಹಜ. ಈ ಬಗೆಯ ಒಪ್ಪಂದಗಳನ್ನು ಸಮಗ್ರವಾಗಿ ಗ್ರಹಿಸಿ ನಿಯಮಾವಳಿಗಳನ್ನು ತಿಳಿಸುವ ಹಾಗೆಯೇ, ಮುದ್ರಣದ ಹಕ್ಕುಗಳ ಬಗ್ಗೆ ಹಲವು ವಿಚಾರಗಳನ್ನು ವರದಿಯ ವ್ಯಾಪ್ತಿಯೊಳಗೆ ಸೇರಿಸಿಕೊಳ್ಳಲಾಗುತ್ತದೆ.

ಈ ಎಲ್ಲಾ ಬಗೆಯಲ್ಲಿ ಕಾರ್ಯನಿರ್ವಹಿಸಿದ ಕಾವ್ಯಾಲಯದ ಬಗೆಗೆ ಅಧ್ಯಯನ ನಡೆಸುವುದು ಪ್ರಸ್ತುತ ಸಂದರ್ಭದಲ್ಲಿ ಸಾಹಿತ್ಯಿಕ ಅಗತ್ಯವೆಂದು ತಿಳಿಯಬಹುದು. ಕಾವ್ಯಾಲಯ ಅಧ್ಯಯನಕಾರರಿಗೆ ಮಹಾಪ್ರಬಂಧವನ್ನು ರಚಿಸಲು ಸಾಧ್ಯವಾಗುವಷ್ಟು ಮಾಹಿತಿಯನ್ನು ಒದಗಿಸುತ್ತದೆ. ಆದರೆ ನನ್ನ ಕಾಲ, ಉದ್ದೇಶ, ಮಿತಿಗಳ ಸೃಷ್ಟಿಯಲ್ಲಿ ಇದು ಸಾಧ್ಯವಿಲ್ಲ. ಆದ್ದರಿಂದ ಮುಖ್ಯವಾದ, ಹೇಳಲೇಬೇಕೆನಿಸುವ ವಿಷಯಗಳನ್ನು ಸಂಕ್ಷಿಪ್ತವಾಗಿ ಅಧ್ಯಯನಕ್ಕೆ ಗುರಿಪಡಿಸಲು ನಿರ್ಧರಿಸಿದ್ದೇನೆ.

ಅಡಿಟಿಪ್ಪಣಿಗಳು :

೧. ಶಿವಾರೆಡ್ಡಿ ಕೆ.ಸಿ., (ಸಂ) ಕುವೆಂಪು ಸಮಗ್ರ ಗದ್ಯ, ಸಂಪುಟ - ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪುಟ-೧೨೫.

೨. ನಾಯಕ ಹಾ.ಮಾ. (ಸಂ). ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯, ಪುಟ-೧೨೦೬.

೩. ಕೂಡಲಿ ಚಿದಂಬರಂ (ಲೇ) ಕನ್ನಡದಲ್ಲಿ ಗ್ರಂಥೋದ್ಯಮ ಅಥವಾ ಪ್ರಕಾಶನ. ಕರ್ಮವೀರ, ದೀಪಾವಳಿ ಸಂಚಿಕೆ, ೧೯೫೮, ಪುಟ-೧೪

೪. ಕೂಡಲಿ ಚಿದಂಬರಂ, (ಲೇ) 'ಕನ್ನಡದಲ್ಲಿ ಗ್ರಂಥೋದ್ಯಮ ಅಥವಾ ಪ್ರಕಾಶನ' ಕರ್ಮವೀರ, ದೀಪಾವಳಿ ಸಂಚಿಕೆ, ೧೯೫೮, ಪುಟ - ೧೪

೫. ಕರ್ನಾಟಕ ಪುಸ್ತಕ ನೀತಿ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೮

ಅಧ್ಯಾಯ-೨

ಪುಸ್ತಕೋದ್ಯಮದ ಹಿನ್ನೆಲೆ - ಮುನ್ನೆಲೆ

ಪೀಠಿಕೆ:

ತಾಳೆಗರಿಗಳ ಮೇಲೆ, ಶಿಲೆಗಳ ಮೇಲೆ, ತಾಮ್ರಗಳ ಮೇಲೆ ಮೂಡಿರುತ್ತಿದ್ದ ಲಿಪಿಯನ್ನು ಕಾಗದದ ತೆಕ್ಕೆಯೊಳಗೆ ಇರಿಸುವ ಪ್ರಯತ್ನ ಪ್ರಾರಂಭವಾಗಿದ್ದು ಯುರೋಪಿನ ಕೈಗಾರಿಕಾಕ್ರಾಂತಿಯ ನಂತರ. ರಚನೆಯೇ ಬಹು ಆಯಾಸದ ಕೆಲಸ ಎಂದುಕೊಳ್ಳುತ್ತಿರುವ ವ್ಯಕ್ತಿಗಳಿಗೆ ಅದಕ್ಕಿಂತಲೂ ಮಹತ್ವವಾದ, ಕಠಿಣವಾದ ಕೆಲಸ ಇದೆ ಎಂಬುದು ಪ್ರಕಾಶಕರ ಜವಾಬ್ದಾರಿಯನ್ನು ಅರಿತಾಗ ಮಾತ್ರ ಸ್ಪಷ್ಟವಾಗುವಂತಹದು. ಕಾಲಕ್ರಮೇಣ ಬರವಣಿಗೆ ಭಿನ್ನ ಭಿನ್ನ ಆಯಾಯಮಗಳನ್ನು ಪಡೆದುಕೊಂಡಿತು. ಮುದ್ರಣ, ಸಂಪಾದನೆ, ಜೋಡಣೆ ಯಾವುದೇ ಆಗಿರಬಹುದು, ಅದು ಹೊಸ ಬೆಳವಣಿಗೆಯನ್ನು ಪಡೆದುಕೊಂಡಿತು. ಕೃತಿಯ ರಚನೆಗೆ ಪ್ರತಿಭೆ, ಅಂತಃ ಸತ್ತ್ವ, ಬೌದ್ಧಿಕ ಕ್ರಿಯೆ ಎಷ್ಟು ಅಗತ್ಯವೋ, ಪುಸ್ತಕ ಪ್ರಕಟಣೆ, ಸಂಗ್ರಹ, ಮಾರಾಟ, ಓದುಗಾರಿಕೆ ಇಂತಹ ಅಂಶಗಳು ಕೂಡ ಅಷ್ಟೇ ಮಹತ್ವ ಪಡೆಯತೊಡಗಿದವು. ಭಿನ್ನ ಭಿನ್ನ ಆಲೋಚನೆ, ಧೋರಣೆಗಳನ್ನು ಹೊಂದಿರುವಂತಹ ಅನೇಕ ಪ್ರಕಾಶನಗಳು ಬೆಳಕಿಗೆ ಬರತೊಡಗಿದವು.

ಭಾರತದ ಸಂದರ್ಭದಲ್ಲಿ

ಸಾಹಿತ್ಯ ಸೃಷ್ಟಿಗೆ ಮೂಲಕಾರಣ ಧರ್ಮ ಧರ್ಮದ ಪ್ರಭಾವದಿಂದಲೇ ಸಾಮಾನ್ಯವಾಗಿ ಎಲ್ಲಾ ಭಾಷೆಯ ಸಾಹಿತ್ಯ ಹುಟ್ಟಿಕೊಂಡಿದ್ದು. ಭಾರತೀಯ ಸಾಹಿತ್ಯವನ್ನು ಪರಿಶೀಲಿಸಿದಾಗ ಈ ಸತ್ಯ ತಿಳಿಯುತ್ತದೆ. ವೇದಗಳ ಕಾಲದಿಂದಲೂ ಧಾರ್ಮಿಕ ಚಟುವಟಿಕೆಗಳ ಹಿನ್ನೆಲೆಯಲ್ಲಿಯೇ ಪ್ರಾಚೀನ ಸಾಹಿತ್ಯ ಬೆಳೆದು ಬಂದಿತು ಹಾಗೆಯೇ ಗ್ರೀಕ್ ಸಾಹಿತ್ಯವು ಡಯಾನಿಸಿಸ್ ದೇವತೆಯನ್ನು ಸಂತೃಪ್ತಿ ಪಡಿಸುವ ಉದ್ದೇಶದ ಹಿನ್ನೆಲೆಯಲ್ಲಿ ರಚನೆಯಾಯಿತು. ಹೀಗೆ ಸೃಷ್ಟಿಯಾದ ಸಾಹಿತ್ಯವನ್ನು ರಕ್ಷಿಸುವ ಕೆಲಸ ಜವಾಬ್ದಾರಿಯುತವಾದುದು ಮತ್ತು ಅಗತ್ಯವಾದುದು. ಸಾಹಿತ್ಯದ ರಚನಾ ಕಾರ್ಯ ಇಮ್ಮಡಿಯಾದಂತೆ ಅದನ್ನು ರಕ್ಷಿಸುವ ಹೊಣೆಗಾರಿಕೆ ಜನರ ಮೇಲೆ ಬಿದ್ದಿತು. ಬರವಣಿಗೆಯ ಕಲ್ಪನೆ ಇನ್ನೂ ಮೂಡದಿದ್ದಾಗ ಸಾಹಿತ್ಯದ ಸಾರವನ್ನು ಸ್ವಲ್ಪವೂ ಕೆಡದಂತೆ ಬಾಯಿಂದ ಬಾಯಿಗೆ ಹರಿಸಿ ಕಾಪಾಡುವ ಪ್ರಯತ್ನ ಮಾಡಿದರು. ನಂತರ ತಾಳೆಗರಿ, ತಾಮ್ರ, ಶಿಲೆಗಳ ಮೇಲೆ ಬರಹ ಮೂಡಿಸಿದರು. ಕಾಲಾನಂತರ ಪಾಶ್ಚಾತ್ಯರು ಕಾಗದದ ಮೇಲೆ ಅಚ್ಚು ಮಾಡಿಸಿ, ಸಂಪಾದನೆ ಮಾಡಿ, ಕೃತಿಗಳ ರೂಪದಲ್ಲಿ ಹೊರತರುವ ಕಾರ್ಯಗಳನ್ನು ನಡೆಸಿದರು. ಸಾಹಿತ್ಯ ನೆನಪಿನ ಶಕ್ತಿಯಲ್ಲಿ ಸಂಗ್ರಹವಾಗುತ್ತಿದ್ದಾಗ, ಬೌದ್ಧಿಕ ಸಾಧನ ಬಳಕೆಗೆ ಬರುತ್ತಿತ್ತೇ ವಿನಃ ಬೇರೆ ಉಪಕರಣಗಳ ಅಗತ್ಯವಿರಲಿಲ್ಲ. ಕ್ರಮೇಣ

[illegible]

[illegible]

[illegible]

[illegible]

[illegible]

ಬರವಣಿಗೆಯ ಮೂಲಕ ಪ್ರಸಾರ ಮಾಡುವ ಯೋಚನೆ ಪ್ರಾರಂಭವಾದಾಗ ಹಲವಾರು ಗೊಂದಲಗಳು ಸೃಷ್ಟಿಯಾಗತೊಡಗಿದವು. ಅದುವರೆಗೂ ರಾಜಾಶ್ರಯ ಪಡೆದಿದ್ದ ಸಾಹಿತ್ಯ ಕ್ರಮೇಣ ಪ್ರಕಾಶಕರ ಮುಂದಾಳತ್ವದಲ್ಲಿ ಕೃತಿಗಳ ರೂಪ ಪಡೆಯತೊಡಗಿತು. ಸಾಹಿತ್ಯದ ರಚನೆಗೆ ಪ್ರೇರಣೆಗಳಿರುವಂತೆ ಸಾಹಿತ್ಯ ಸಂಪಾದನೆಗೆ, ಸಾಹಿತ್ಯ ಸಂರಕ್ಷಣೆಗೆ, ಸಾಹಿತ್ಯ ಪ್ರಸಾರಕ್ಕೆ ಕೂಡ ಪ್ರೇರಣೆ ಇರುತ್ತದೆ. ಇತಿಹಾಸ ಎಂಬುದು ಗತಕಾಲದ ಘಟನೆಗಳನ್ನು ನಿರೂಪಿಸುತ್ತದೆ. ಸಾಹಿತ್ಯ ಎಂಬುದು ಜಗತ್ತಿನ ಪ್ರತಿ ಅಂಶಗಳನ್ನೂ ಶತಶತಮಾನಗಳಾದಿಯಾಗಿ ತನ್ನ ತೆಕ್ಕೆಯಲ್ಲಿ ಹುದುಗಿರಿಸಿಕೊಂಡಿದೆ. ಇಂತಹವುಗಳನ್ನು ದಾಖಲೆಯಾಗಿ ಇಡುವ ಕೆಲಸ ಮುಖ್ಯವಾದುದು. ಇದು ಎಂತಹ ಮಹತ್ವದ ಕೆಲಸಕ್ಕೂ ಕಡಿಮೆಯಲ್ಲವೆಂಬುದು ವಾಸ್ತವ. ಒಂದು ಧರ್ಮದ, ದೇಶದ, ಜನಾಂಗದ ಸಂಸ್ಕೃತಿ, ನಾಗರೀಕತೆ ಇತ್ಯಾದಿಗಳನ್ನೊಳಗೊಂಡಿರುವ ಕಡತವೇ ಸಾಹಿತ್ಯ ಎಂದರೆ ತಪ್ಪಾಗುವುದಿಲ್ಲ. ಈ ಕಾರಣಕ್ಕಾಗಿಯೇ ಪುಸ್ತಕಗಳ ಪ್ರಕಟಣೆ ಅಥವಾ ಪ್ರಕಾಶನದ ಕಾರ್ಯ ಮಹತ್ವವಾದುದಾಗಿದೆ.

ಬರವಣಿಗೆಗೂ ಮೊದಲು ಮೌಖಿಕ ಸಾಹಿತ್ಯ ಅಸ್ತಿತ್ವ ಪಡೆದುಕೊಂಡಿತ್ತು. ವೇದಗಳು ಮೌಖಿಕ ಪರಂಪರೆಯ ಮೂಲಕವೇ ತಲೆಮಾರಿನಿಂದ ತಲೆಮಾರಿನವರೆಗೆ ಹರಿದುಬರುತ್ತಿದ್ದವು. ನಾಗರಿಕತೆ ಬೆಳೆದಂತೆಲ್ಲಾ ಸಂಸ್ಕೃತ, ಪಾಲಿ, ಪಾಕೃತ ಭಾಷೆಯ ಸಾಹಿತ್ಯವನ್ನು ಬರವಣಿಗೆ ಮೂಲಕ ದಾಖಲಿಸುವ ಕೆಲಸವನ್ನು ಮಠಗಳು, ಧಾರ್ಮಿಕ ಸಂಸ್ಥೆಗಳು ಮಾಡುತ್ತಿದ್ದವು. ಮಹತ್ವದ ಕೃತಿಗಳು ಆ ಕಾಲದಲ್ಲೇ ರಚನೆಯಾಗುತ್ತಿದ್ದವು. ರಾಜಾಶ್ರಯದ ಮೂಲಕ ಅವುಗಳನ್ನು ಜನರಿಗೆ ತಲುಪಿಸುತ್ತಿದ್ದರು. ಒಟ್ಟಾರೆ ಧರ್ಮ ಮತ್ತು ಆಶ್ರಯದ ಹಿಡಿತದೊಳಗೆ ಸಾಹಿತ್ಯ ರಚನೆಯಾಗಿ ಆ ಮೂಲಕವೇ ಪ್ರಚಾರ ಪಡೆದುಕೊಳ್ಳುತ್ತಿತ್ತು ಎಂದರೆ ತಪ್ಪಾಗಲಿಕ್ಕಿಲ್ಲ. ಲಿಪಿ ಎಂಬುದು ಬಳಕೆಗೆ ಬಂದಿರುವುದೇ ವಿಭಿನ್ನವಾಗಿ ಮನದ ಭಾವನೆಗಳಿಗೆ ರೂಪ ಕೊಡುವ ಸಲುವಾಗಿ ಪ್ರಕೃತಿಯನ್ನು ಬಳಸಿಕೊಂಡು ಆ ಮೂಲಕ ಅಭಿವ್ಯಕ್ತಿ ನೀಡುತ್ತಿದ್ದರು. ನಾಗರಿಕತೆ ಬೆಳೆದಂತೆ ಅಭಿವ್ಯಕ್ತಿಯೇ ಲಿಪಿಯಾಗಿ ಮಾರ್ಪಾಡಾಗತೊಡಗಿತು. ಬರವಣಿಗೆ ಅಸ್ತಿತ್ವಕ್ಕೆ ಬಂದ ಮೇಲೆ ಸಾಹಿತ್ಯದ ಚರಿತ್ರೆ ತಿರುವನ್ನು ಪಡೆದುಕೊಂಡಿತು. ಶಿಲೆಗಳ ಮೇಲೆ, ತಾಮ್ರಗಳ ಮೇಲೆ, ಎಲೆಗಳ ಮೇಲೆ ಲಿಪಿ ಮೂಡಿಸಲಾಗುತ್ತಿತ್ತು. ಜೋಳದ ಪಾಳಿಯ ಕೃತಿಗಳು, ವಿಡಂಬನಾ ಕೃತಿಗಳು, ಧಾರ್ಮಿಕ ಕೃತಿಗಳು ರಚನೆಯಾಗತೊಡಗಿರವು ಮುದ್ರಣ ಚಾಲ್ತಿಗೆ ಬರುವವರೆಗೂ ಇವುಗಳೇ ನಮಗೆ ದಾಖಲೆಯನ್ನು ಒದಗಿಸುತ್ತಿದ್ದವು. ಸಿಂಗರಿಸಿದ ತಾಳೆಗರಿಗಳ ಕಟ್ಟುಗಳೇ ಗ್ರಂಥ ನಿಧಿ ಯಾಗಿದ್ದವು. ಗ್ರಂಥಗಳನ್ನು ಪ್ರತಿ ಮಾಡಿಸಿ ದೂರ ದೂರದವರೆಗೆ ತಲುಪಿಸುತ್ತಿದ್ದರು. ಈ ಮೂಲಕ ಜ್ಞಾನಪ್ರಸಾರದ ಕಾರ್ಯವನ್ನು ಕೈಗೊಳ್ಳುತ್ತಿದ್ದರು.

ಇಂದಿಗೂ ಪ್ರಾಚೀನ ಶಾಸನಗಳು, ತಾಳೆಗರಿ, ಕಡತಗಳು, ಆಕರ ಗ್ರಂಥಗಳಂತೆ ಕೆಲಸ ಮಾಡುತ್ತವೆ. ಶತಮಾನಗಳ ದಾಖಲೆಗಳನ್ನು ಒದಗಿಸುತ್ತವೆ. ವಿದೇಶಿ ಆಕ್ರಮಣಗಳು ಪ್ರಾರಂಭವಾದಾಗ ಸಾಹಿತ್ಯ ರಕ್ಷಣೆ ಬಹಳ ಕಷ್ಟವಾಗತೊಡಗಿತು. ಎಷ್ಟೋ ಅಮೂಲ್ಯ ಶಾಸನಗಳು, ತಾಳೆಗರಿಗಳು ನಾಶವಾಗತೊಡಗಿದವು. ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆ ಬ್ರಿಟಿಷರು ಅಪಾರ ಸಾಹಿತ್ಯ ರಾಶಿಯನ್ನು ನೋಡಿ, ಅವುಗಳನ್ನು ಸಂಶೋಧಿಸಿ, ರಕ್ಷಿಸುವ ವಿಧಾನವನ್ನು ಹುಡುಕಲಾರಂಭಿಸತೊಡಗಿದರು. ನಂತರ ಭಾರತದಲ್ಲಿ ಪುಸ್ತಕೋದ್ಯಮ ಹೊಸ ತಿರುವನ್ನು ಪಡೆದುಕೊಂಡಿತು. ಶಿಕ್ಷಣ ಪದ್ಧತಿ, ಮಿಷನರಿಗಳ ಆಗಮನ, ಮುದ್ರಣ ಯಂತ್ರಗಳ ಬಳಕೆ ಪುಸ್ತಕೋದ್ಯಮದ ಮೇಲೆ ಮಹತ್ವದ ಪರಿಣಾಮ ಬೀರಿತು. ಭಾರತೀಯ ಜನರಲ್ಲಿ ಹೊಸ ವಿಚಾರಗಳನ್ನು ಮೂಡಿಸಬೇಕು ಹಳೆಯ ಮೂಢನಂಬಿಕೆಗಳನ್ನು ಹೋಗಲಾಡಿಸಬೇಕೆಂಬ ಉದ್ದೇಶದಿಂದ ಪ್ರಯತ್ನಗಳು ಆರಂಭವಾಗತೊಡಗಿದವು. ಪಾಶ್ಚಾತ್ಯ ದೇಶಗಳು ಹೊಸ ಹೊಸ ಮಾದರಿಗಳನ್ನು ಅನುಸರಿಸಲು ಮೊದಲುಮಾಡಿದವು ಬೈಬಲನ್ನು ಕನ್ನಡಕ್ಕೆ ಅನುವಾದಿಸಿ ಜನರಲ್ಲಿ ಕ್ರೈಸ್ತಧರ್ಮದ ಆಚರಣೆಗಳನ್ನು ಅನುಸರಿಸುವಂತೆ ಪ್ರೇರೆಪಿಸತೊಡಗಿದರು. ಬೈಬಲನ್ನು ಕನ್ನಡದಲ್ಲೇ ಮುದ್ರಿಸಿ ಜನರಿಗೆ ಅರಿವು ಉಂಟು ಮಾಡುವ ಅನಿವಾರ್ಯತೆ ಬಂದಾಗ ಮುದ್ರಣಕ್ಕೆ ಅಗತ್ಯವಾದ ತಯಾರಿಗಳನ್ನು ನಡೆಸುತ್ತಿದ್ದರು. ವಸಾಹತುಶಾಹಿಯ ಸಂದರ್ಭದಲ್ಲಿ ಮತಪ್ರಚಾರದ ಉದ್ದೇಶವನ್ನು ಇಟ್ಟುಕೊಂಡಿದ್ದಾಗ ಬ್ರಿಟಿಷರು ಕೆಲವೊಂದು ಭಾರತೀಯ ವಿಚಾರಗಳ ಆಕರ್ಷಣೆಗೊಳಗಾದರು. ಭಾರತದ ಅಪಾರ ಸಾಹಿತ್ಯರಾಶಿಯನ್ನು ಅವಲೋಕಿಸಿ, ಅದಕ್ಕೆ ಅಗತ್ಯವಾದ ದಾಖಲೆಗಳನ್ನು ಸಂಶೋಧಿಸಿ ಅದರ ಮಹತ್ವವನ್ನು ಭಾರತೀಯರಿಗೆ ತಿಳಿಸುವ ವಿಚಾರಗಳು ಕಂಡುಬರುತ್ತವೆ.

ಧರ್ಮ ಪ್ರಚಾರಕ್ಕಾಗಿ ಬಂದವರು ಸಂಶೋಧನೆ ಕಾರ್ಯದಲ್ಲಿ ಕೈ ಹಾಕತೊಡಗಿದರು. ಈ ಮಾದರಿಯ ಕೆಲಸವನ್ನು ಭಾರತೀಯರು ಕೂಡ ಅನುಸರಿಸತೊಡಗಿದರು. ಹೊಸ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದ ನಂತರ ಮಕ್ಕಳಿಗೆ ಪಠ್ಯ ಒದಗಿಸುವ ಕಾರ್ಯಕ್ಕೆ ಮುಂದಾದರು. ಮೊದಮೊದಲು ಕೈಯಲ್ಲೇ ಬರೆದು ಹಂಚತೊಡಗಿದರು. ಕ್ರಮೇಣ ಇದು ಕಷ್ಟಕರವಾದಾಗ ಮುದ್ರಣ ಯಂತ್ರಗಳನ್ನು ಆಮದು ಮಾಡಿಕೊಂಡು, ಅಚ್ಚು ಮೊಳೆಯನ್ನು ಕಂಡುಹಿಡಿದು ಹೊಸಕ್ರಾಂತಿಯನ್ನು ಉಂಟುಮಾಡಿದ ವಿಚಾರಗಳು ತಿಳಿದುಬರುತ್ತವೆ. ಇಂಗ್ಲೀಷ್ ಭಾಷೆಯ ಕೃತಿಗಳು ಭಾರತೀಯ ಭಾಷೆಗಳಿಗೆ ಅನುವಾದಗೊಂಡು ಭಿನ್ನವಾದ ಸಾಹಿತ್ಯ ರಚನೆಗೆ ಪ್ರೇರಣೆ ನೀಡತೊಡಗಿದವು. "ಬಹಳ ಕಾಲ ಸಾಹಿತ್ಯ ಧಾರ್ಮಿಕ ಮಠಗಳ ಸ್ವತ್ತಾಗಿದ್ದು, ಪುಸ್ತಕಗಳನ್ನು ಪ್ರತಿಮಾಡುವ ಲಿಪಿಕಾರರಿರುತ್ತಿದ್ದರು. ಈ ಪ್ರತಿಕಾರರು ಬರೆಯುವಾಗ ಕೈತಪ್ಪಿನಿಂದಲೋ, ತಪ್ಪು ಗ್ರಹಿಕೆಯಿಂದಲೋ ಕೆಲವು ದೋಷಗಳು ಸಹಜವಾಗಿಯೇ ಉಂಟಾಗುತ್ತಿದ್ದವು. ಅಷ್ಟೇ ಅಲ್ಲದೆ ಕೆಲವೊಮ್ಮೆ ಪ್ರತಿಕಾರರು ಬುದ್ಧಿ ಪೂರ್ವಕವಾಗಿಯೇ ತಿದ್ದುಪಡಿ ಮಾಡಿರಲೂ ಬಹುದು. ಇದರಿಂದಾಗಿ ಕೃತಿಗಳ ಮೂಲ

ಸ್ವರೂಪವೇ ಬದಲಾಗುವ ಸಾಧ್ಯತೆಗಳಿರುತ್ತವೆ."೧ ಈ ಎಲ್ಲಾ ಸಮಸ್ಯೆಗಳಿಗೆ ಮುಕ್ತಿ ದೊರಕಿದುದು ಮುದ್ರಣ ಯಂತ್ರಗಳ ಆಗಮನದಿಂದ.

ವಿದೇಶಿ ಸಂದರ್ಭ

ಕೈಗಾರಿಕಾ ಕ್ರಾಂತಿಯ ನಂತರ ವಿಜ್ಞಾನ, ತಂತ್ರಜ್ಞಾನದಲ್ಲಿ ಸಾಕಷ್ಟು ಬೆಳವಣಿಗೆ ಯಾಯಿತು. ಈ ಕಾರಣದಿಂದಾಗಿ ವೈವಿಧ್ಯಮಯ ಕೃತಿಗಳು ಸಾಕಷ್ಟು ಬೆಳಕಿಗೆ ಬಂದವು. ಕೃತಿಗಳು ಒಳಗೊಂಡ ವಿಚಾರಗಳಿಂದ, ಮುದ್ರಣದಲ್ಲಿನ ವೈವಿಧ್ಯಮಯ ರೂಪಗಳಿಂದ ಇದನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಈ ಮೂಲಕ ಜ್ಞಾನದ ಪುನರುತ್ಥಾನವನ್ನು ಗುರುತಿಸಬಹುದು.

"...........ಕಾಲ ಉರುಳುತ್ತಾ ಹೋದಂತೆಲ್ಲಾ, ಕೈಗಾರಿಕಾಭಿವೃದ್ಧಿ ಹೆಚ್ಚುತ್ತಾ ಹೋದಂತೆಲ್ಲಾ ಜ್ಞಾನ ವಿಜ್ಞಾನಗಳು ಮತ್ತು ತಂತ್ರಜ್ಞಾನ ಪ್ರಸರಿಸುತ್ತಾ ಹೋದಂತೆಲ್ಲಾ ಪುಸ್ತಕಗಳ ಬಳಕೆ ವೈವಿಧ್ಯಮಯವಾಗಿ ಪ್ರಪಂಚದಾದ್ಯಂತ ಹೆಚ್ಚುತ್ತಾ ಹೋಯಿತು. ಜ್ಞಾನದ ಪುನರುತ್ಥಾನ ಮತ್ತು ಯುರೋಪಿನ ಕೈಗಾರಿಕಾ ಕ್ರಾಂತಿ ದೊಡ್ಡ ಪ್ರಮಾಣದಲ್ಲಿ ಇಡೀ ಪ್ರಪಂಚದ ನಕ್ಷೆಯನ್ನೇ ಬದಲಾಯಿಸಲು ಸಮರ್ಥವಾಯಿತು. ಕಾಗದ ಮತ್ತು ಮುದ್ರಣ ಯಂತ್ರಗಳ ಆವಿಷ್ಕಾರ ಹಾಗೂ ಮುದ್ರಣ ಕಲೆ ವಿಕಾಸಗೊಂಡು ಹೊಸ ಸಾರಿಗೆ ಮತ್ತು ಸಂವಹನ ಸಂಪರ್ಕಗಳ ನೆರವಿನಿಂದ ಪ್ರಪಂಚವೇ ಒಂದು ಏಕೀಕೃತ ಘಟಕವಾಗುತ್ತಾ ಹೋದಂತೆಲ್ಲ ಪುಸ್ತಕ ಪ್ರಕಾಶನ ಒಂದು ಉದ್ಯಮವಾಗಿ ಬೆಳೆಯಲಾರಂಭಿಸಿತು........"೨

ಪ್ರಾರಂಭದಲ್ಲಿ ಬರವಣಿಗೆಗೆ ಸಂಬಂಧಿಸಿದಂತೆ ಒಂದೊಂದು ದೇಶದವರು ಒಂದೊಂದು ಸಾಮಗ್ರಿಯನ್ನು ಬಳಸುತ್ತಿದ್ದರು. ಉದಾಹರಣೆಗೆ ಭಾರತದವರು ತಾಳೆಗರಿಯನ್ನು, ಚೀನಾದವರು ಬಿದಿರನ್ನು, ಮೆಸಪೊಟೋಮಿಯದವರು ಜೇಡಿಮಣ್ಣನ್ನು ಸಾಧನವನ್ನಾಗಿ ಬಳಸಿಕೊಂಡರು ಪ್ರಾರಂಭದಲ್ಲಿ ಎಲ್ಲರೂ ಬರವಣಿಗೆಗೆ ಸಾಮಗ್ರಿಯನ್ನು ಒದಗಿಸಿಕೊಳ್ಳುತ್ತಿದ್ದರೆ ಹೊರತು ಅವುಗಳನ್ನು ಕಾಯ್ದರಿಸಿಕೊಳ್ಳುವ ವಿಚಾರ ಮಾಡುತ್ತಿರಲಿಲ್ಲ ಎಂಬುದು ತಿಳಿದುಬರುತ್ತದೆ.

".......ಮೊದಲು ಕಾಗದವನ್ನು ಕಂಡುಹಿಡಿದವರು ಚೀನಾದೇಶದವರು. 'ಕೈಲುನ್' ಎಂಬಾತ ಕ್ರಿ.ಶ.೧೦೫ರಲ್ಲಿ ಕಂಡುಹಿಡಿದನು. ಅದರ ತಯಾರಿಕೆ ಮಾತ್ರ ವಿಭಿನ್ನವಾಗಿತ್ತು, ಚಿಂದಿಯನ್ನು ನೆನೆಸಿ ಉಪ್ಪು ನೇರಳೆ, ತೊಗಟೆ, ದಟ್ಟಿಕಾಯಿ, ಹಳೆಯ ಚಪ್ಪಲಿ ಚೂರುಗಳನ್ನು ಸೇರಿಸಿ ತಯಾರಿಸಿದನು. ನಂತರ ಯುರೋಪ್, ಅರಬ್, ಸ್ಪೇನ್ ಮುಂತಾದ ಕಡೆಗೆ ಈ

ಮಾದರಿ ಹರಡಿತು. ಈಜಿಪ್ಟ್‌ನವರು ನೈಲ್ ನದಿಯ ಜೌಗು ಮಣ್ಣಿನಲ್ಲಿ ಬೆಳೆಯುತ್ತಿದ್ದ ಗಿಡದ ತೊಗಟೆಯನ್ನು ಬಳಸುತ್ತಿದ್ದರು. ಅವರ ಪುಸ್ತಕಗಳು ಸುರುಳಿಯಾಕಾರದಲ್ಲಿ ಇರುತ್ತಿದ್ದವು.....".

ಹೀಗೆ ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಬರವಣಿಗೆ ಸಾಮಗ್ರಿಯನ್ನು ಬಳಕೆಗೆ ತರತೊಡಗಿದರು.

ಚೀನಾದೇಶದವರು ಅನೇಕ ವರ್ಷಗಳ ಕಾಲ ಕಾಗದದ ತಯಾರಿಕೆಯ ಗುಟ್ಟನ್ನು ಕಾಪಾಡಿಕೊಂಡು ಬಂದರು. ಆದರೆ ಕ್ರಮೇಣ ಅದರ ಬಳಕೆಯು ಪ್ರಚಾರವಾಗತೊಡಗಿತು. ಯುರೋಪಿನಲ್ಲಿ ೧೧ನೇ ಶತಮಾನದ ನಂತರ ಕಾಗದದ ಉಪಯೋಗ ಬಳಕೆಗೆ ಬರತೊಡಗಿತು. ಹಾಗೆಯೇ ಪ್ರಕಾಶನ, ಮಾರಾಟ ಚಟುವಟಿಕೆಗಳು ೧೪೪೦ರ ನಂತರ ಪ್ರಾರಂಭವಾಯಿತೆನ್ನಬಹುದು. ಮೊದಲು ಅಚ್ಚು ಹಾಕುತ್ತಿದ್ದವರೇ ಸಂಪಾದಿಸಿ , ಪ್ರಕಟಿಸಿ ನೇರವಾಗಿ ಓದುಗರಿಗೆ ಮಾರಾಟ ಮಾಡುತ್ತಿದ್ದರು. "ಇಂಗ್ಲೆಂಡ್‌ನಲ್ಲಿ ವಿಲಿಯಂ ಕ್ಯಾಕ್ಸ್‌ಟನ್ ತನ್ನ ಅಚ್ಚುಕೂಟವನ್ನು ೧೪೭೬ರಲ್ಲಿ ಸ್ಥಾಪಿಸಿ ಮೊದಲ ಬಾರಿಗೆ ಇಂಗ್ಲೆಂಡ್ ಭಾಷೆಯಲ್ಲಿ ಪುಸ್ತಕಗಳನ್ನು ಹೊರತರಲು ಆರಂಭಿಸಿದನು. ಹಾಗೆಯೇ ಜರ್ಮನಿಯಲ್ಲಿ ಇನ್ನೊಬ್ಬ 'ಜ್ಯಹಾನ್ ಫ್ರೊಬನ್' ಎಂಬುವವನು ತನ್ನ ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿ ಉತ್ತಮ ಅಭಿರುಚಿ, ಕಲಾವಂತಿಕೆ, ನಿರ್ದಿಷ್ಟ ಅಳತೆ, ಆಕಾರಗಳ ಪುಸ್ತಕಗಳನ್ನು ಹೊರತರುವಲ್ಲಿ ಪ್ರಖ್ಯಾತನೆನಿಸಿದನು."[೪] ಆನಂತರ ಅನೇಕರು ಪ್ರಕಾಶನ ಸಂಸ್ಥೆಗಳನ್ನು ಪ್ರಾರಂಭಿಸಿದರು. ಆಧುನಿಕ ಪ್ರಕಾಶನೋದ್ಯಮ ೧೮ನೇ ಶತಮಾನದಲ್ಲಿ ಪ್ರಾರಂಭವಾಯಿತೆನ್ನಬಹುದು. ಕ್ರಾಂತಿಕಾರಿ ಬದಲಾವಣೆಗಳು ಕಾಣಿಸಿಕೊಳ್ಳತೊಡಗಿಡವು. ಮೊದಲು ಕಾಗದದ ರಟ್ಟನೇ ಹೊಂದಿರುತ್ತಿದ್ದಂತಹ ಪುಸ್ತಕಗಳು ಕ್ರಮೇಣ ದಪ್ಪರಟ್ಟಿನ ಬಳಕೆಯನ್ನು ಹೆಚ್ಚಿಸಿಕೊಳ್ಳತೊಡಗಿದವು ೨೦ನೇ ಶತಮಾನದಿಂದ ಈಚೆಗೆ ಪ್ರಕಾಶನೋದ್ಯಮ ವಿಸ್ತಾರದ ಹರವನ್ನು ಪಡೆದುಕೊಂಡು ಬೆಳೆಯತೊಡಗಿತು. ಮುದ್ರಣ ಕಲೆಗಳಲ್ಲಿ ಕೂಡ ಅನೇಕ ಬದಲಾವಣೆಗಳು ಕಾಣಿಸಿಕೊಂಡವು. ಜರ್ಮನಿಯ 'ಗುಟನ್ ಬರ್ಗ್ ಜಾಹನ್' ಚಲಿಸುವ ಮುದ್ರಣ ಯಂತ್ರವನ್ನು ೧೪೩೭ ರಲ್ಲಿ ಕಂಡುಹಿಡಿದ ಮೇಲೆ ಹೊಸ ತಿರುವನ್ನು ಪಡೆದುಕೊಂಡಿತೆನ್ನಬಹುದು. ಮುದ್ರಣಕ್ಕೆ ಬೇಕಾದ ಹೊಸ ಹೊಸ ಅಕ್ಷರಗಳ ನಿರ್ಮಾಣ ಕಾರ್ಯ ಪ್ರಾರಂಭವಾಗತೊಡಗಿತು. ಹಾಗೆಯೇ ರಟ್ಟು ಕಟ್ಟುವ ಸಂದರ್ಭದಲ್ಲಿ ಚರ್ಮ, ಬಟ್ಟೆಯನ್ನು ಬಳಸಲಾಗುತ್ತಿತ್ತೆಂದು ತಿಳಿದುಬರುತ್ತದೆ. ಮೊದಮೊದಲು ಕೈಯಿಂದಲೇ ರಟ್ಟನ್ನು ಕಟ್ಟಲಾಗುತ್ತಿತ್ತು. ಕ್ರಮೇಣ ಯಂತ್ರಗಳ ಮೂಲಕ ಕಟ್ಟಲು ಪ್ರಾರಂಭಿಸಿದರು.

ರೋಮ್ ಸಾಮ್ರಾಜ್ಯಶಾಹಿ ಸಂದರ್ಭದಲ್ಲಿ ಪುಸ್ತಕ ವ್ಯಾಪಾರಿಗಳೇ ಪ್ರಕಾಶಕರಾಗಿದ್ದರೆನ್ನಬಹುದು. ಇವರೇ ಓದುಗರಿಗೂ ಲೇಖಕರಿಗೂ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸತೊಡಗಿದರು. ಈ ಸಂದರ್ಭದಲ್ಲಿ ಅವ್ಯವಹಾರಗಳು ಸಹಜವಾಗಿಯೇ ಪ್ರಾರಂಭವಾದವು. ಹಾಗೆಯೇ ಪುಸ್ತಕಗಳನ್ನು ಪ್ರಚಾರ ಮಾಡುವಾಗ ಕೂಡ, ಗಟ್ಟಿಯಾಗಿ ಓದಿ

ಹೇಳುತ್ತಾ ಹೋಗುತ್ತಿದ್ದರಂತೆ. ಕಾಲಾನಂತರ ಈ ಎಲ್ಲಾ ಮಾರ್ಗಗಳು ಗುಣಮಟ್ಟವನ್ನು ಕಳೆದುಕೊಂಡು ಕಳಪೆಯಾಗತೊಡಗಿದವು.

ಸಾಹಿತ್ಯ ಎಂಬುದು ಒಂದು ಕಾಲಕ್ಕೆ ಬೇರೊಬ್ಬರನ್ನು ಸಂತೋಷಪಡಿಸಲು ರಚನೆಯಾಗುತ್ತಿತ್ತು. ಅದನ್ನು ಅನೇಕ ಜನರಿಗೆ ತಲುಪಿಸುವ ಉದ್ದೇಶದಿಂದ ರಾಜಾಶ್ರಯಗಳು ವಿಭಿನ್ನ ಮಾರ್ಗಗಳನ್ನು ಹುಡುಕಿಕೊಂಡವು. ಕಾಲಕ್ರಮೇಣ ಆ ಮಾರ್ಗದ ಜೊತೆ ಜೊತೆಯಾಗಿ ಹಾಗೆಯೇ ಭಿನ್ನವಾಗಿ ಲೌಕಿಕ ಪ್ರಯೋಜಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಕಾಶಕರು ಬೆಳಕಿಗೆ ಬರತೊಡಗಿದರು. ಇದನ್ನು ಅನೇಕರು ವಾಣಿಜ್ಯೀಕರಣದ ದೃಷ್ಟಿಯ ಮೂಲಕ 'ಉದ್ಯಮ' ಅಥವಾ 'ಕೈಗಾರಿಕೆ' ಎಂದು ಕರೆದರು. ಈ ಮೂಲಕ ಪುಸ್ತಕಗಳನ್ನು ಉತ್ಪನ್ನಗಳೆಂದು ಪರಿಗಣಿಸಲಾಯಿತು. ಈ ಎಲ್ಲಾ ವಿಚಾರಗಳ ಜೊತೆಗೆ ಇನ್ನೂ ಹಲವಾರು ಅಪವಾದಗಳನ್ನು ಎದುರಿಸಿ ತನ್ನದೇ ಆದ ಛಾಪನ್ನು ಮೂಡಿಸುವುದು ಪ್ರಕಾಶನದ ಬಹುದೊಡ್ಡ ಜವಾಬ್ದಾರಿಯಾಗಿತ್ತು.

ಅಚ್ಚಿನ ಕಲೆ ಜ್ಞಾನ ಪ್ರಸಾರದಲ್ಲಿ ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿತು. ಧಾರ್ಮಿಕ ಪುಸ್ತಕಗಳ ಪ್ರಸಾರದಿಂದ ಮೊದಲುಗೊಂಡ ಗ್ರಂಥ ಪ್ರಚಾರ ಕಾಲಾನಂತರ ಮನೋರಂಜಕ ಹಾಗೂ ಜ್ಞಾನವರ್ಧಕ ಸಾಹಿತ್ಯ ಕೃತಿಗಳಿಗೆ ವಿಸ್ತರಿಸಿತು. ಮಧ್ಯಯುಗದ ನಂತರ ಬೆಳೆದು ಬಂದ ಪತ್ರಿಕಾ ಹೊಸ ಕೊಡುಗೆಗಳನ್ನು ನೀಡಿತು. ಕ್ರಾಂತಿ ಜ್ಞಾನ ಪ್ರಸಾರ ಕ್ಷೇತ್ರದಲ್ಲಿ ಪತ್ರಿಕೆಗಳು ಒಂದು ಬಗೆಯ ಅನನ್ಯ ಸಾಧನಗಳು ಸಹೃದಯರಿಗೂ ಸಾಹಿತ್ಯಕ್ಕೂ ಬೆಸುಗೆ ನೀಡುವ ಮಹತ್ತರ ಕೆಲಸ ಆರಂಭಿಸಿದವು. ವಿಜ್ಞಾನದ ಆವಿಷ್ಕಾರಗಳಂತೆಯೇ ಈ ಮುದ್ರಣ ಆವಿಷ್ಕಾರ ಕೂಡ ಮೈಲಿಗಲ್ಲು.

ಪುಸ್ತಕಗಳ ಬೆಳವಣಿಗೆ ಹೆಚ್ಚಿದಂತೆ ಪ್ರಕಾಶಕರ, ಮಾರಾಟಗಾರರ ಸಂಖ್ಯೆ ಹೆಚ್ಚತೊಡಗಿತು. ಈ ವಹಿವಾಟನ್ನು ನಿಯಂತ್ರಿಸಲು ಇಂಗ್ಲೆಂಡ್‌ನಲ್ಲಿ 'ಗ್ರಂಥ ಸ್ವಾಮ್ಯ ಕಾಯ್ದೆ' ಯನ್ನು (Copyright Act) ೧೭೦೮ರಲ್ಲಿ ಜಾರಿಗೆ ತರಲಾಯಿತು. ಈ ಬಗೆಯ ಕಾಯ್ದೆಯನ್ನು ಫ್ರಾನ್ಸ್, ಜರ್ಮನಿ ದೇಶಗಳು ಕೂಡ ಜಾರಿಗೆ ತಂದವು. ೧೮೮೬ರಲ್ಲಿ ಗ್ರಂಥ ಸ್ವಾಮ್ಯ ಕಾಯ್ದೆಯ ವಿಚಾರವಾಗಿ ಒಂದು ಅಂತರಾಷ್ಟ್ರೀಯ ಒಪ್ಪಂದ ಮಾಡಿಕೊಳ್ಳಲಾಯಿತು. "ಪುಸ್ತಕಗಳ ಸಂಖ್ಯೆ ಹೆಚ್ಚಿದಂತೆಲ್ಲಾ ಗುಣಮಟ್ಟದ ಬಗ್ಗೆ ಯಾರೂ ಗಮನಹರಿಸಿರಲಿಲ್ಲ ಎಂಬ ಅಪವಾದದ ಹಿನ್ನೆಲೆಯಲ್ಲಿ 'ವಿಲಿಯಂ ಗುಲ್‌ಮರ್' ಎಂಬಾತ ಈ ಪ್ರಯತ್ನಕ್ಕೆ ಕೈಹಾಕಿದನು ಎಂಬ ವಿಷಯ ತಿಳಿದುಬರುತ್ತದೆ. 'ಷೇಕ್ಸ್‌ಪಿಯರ್ ಮುದ್ರಣಾಲಯ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ೧೮೦೩ರಲ್ಲಿ ಷೇಕ್ಸ್‌ಪಿಯರ್‌ನ ನಾಟಕಗಳನ್ನು ಅಚ್ಚುಹಾಕಿಸ ತೊಡಗಿದನು. ಇದಾದನಂತರ ಪುಸ್ತಕ ಪ್ರಕಟಣೆಯು ವಿಕಾಸವಾಗಿ ಗುಣಮಟ್ಟವನ್ನು ಸಾಧಿಸಿತು."[೫] ಮೊದಲು ಯುರೋಪಿನಲ್ಲಿ ಪುಸ್ತಕ ಕೂಟಗಳನ್ನು ಏರ್ಪಡಿಸಿಕೊಂಡು

ಓದುವ ಹವ್ಯಾಸ ಬೆಳೆಸಿಕೊಳ್ಳಲಾರಂಭಿಸಿದರು. ಇಂತಹ ಪುಸ್ತಕ ಕೂಟಗಳೇ ಮುಂದೆ ಬೆಳೆದು ದೊಡ್ಡ ಪ್ರಕಾಶನ ಸಂಸ್ಥೆಗಳಾಗತೊಡಗಿದ್ದವು.

ಪ್ರಕಾಶಕರ ಸಂಖ್ಯೆ, ಸಾಧನೆ ಪ್ರಪಂಚದಾದ್ಯಂತ ಹೆಚ್ಚಾದಂತೆ ಅವರನ್ನು ನಿಯಂತ್ರಿಸುವ, ಹಿತಾಸಕ್ತಿಗಳನ್ನು ಕಾಪಾಡುವ ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಈ ಕಾರಣಕ್ಕಾಗಿಯೇ ವಿಶ್ವಮಟ್ಟದಲ್ಲಿ ೧೮೬೬ರಲ್ಲಿ ಪ್ಯಾರಿಸ್ ನಗರದಲ್ಲಿ 'International publishers Association' (IPA) ಸ್ಥಾಪಿಸಲಾಯಿತು. ಇದರ ಮಾನ್ಯತಾ ಸಂಸ್ಥೆಯಾಗಿ ಭಾರತದಲ್ಲಿ ಕೂಡ 'ಭಾರತೀಯ ಪ್ರಕಾಶಕರ ಸಂಘ'(FIP) ಸ್ಥಾಪನೆಯಾಯಿತು. ಈ ಸಂಸ್ಥೆ ಓದುವ, ಪ್ರಕಟಿಸುವ, ಮೂಲಭೂತ ಹಕ್ಕುಗಳನ್ನು ಕಾಪಾಡುವುದೇ ಅಲ್ಲದೆ, ಲೇಖಕರ ಹಾಗೂ ಪ್ರಕಾಶಕರ ಹಿತಾಸಕ್ತಿಗಳನ್ನು ಕಾಪಾಡುವ ಗುರಿಯನ್ನು ಹೊಂದಿತ್ತು. ಭಾರತದಲ್ಲಿ ಬೈಬಲನ್ನು ಅನುವಾದಿಸಿ ಮುದ್ರಿಸುವ ಉದ್ದೇಶದಿಂದ ಹುಟ್ಟಿಕೊಂಡ ಮುದ್ರಣ ವ್ಯವಸ್ಥೆಯನ್ನು, ಮೊದ ಮೊದಲು ಜನರು ಅನಾಸಕ್ತಿಯಿಂದ ನೋಡತೊಡಗಿದರು. ಹೊಸ ಬಗೆಯ ಶಿಕ್ಷಣ ಪದ್ಧತಿಯಿಂದಾಗಿ ಹೊಸ ಹೊಸ ಪುಸ್ತಕಗಳ ಅಗತ್ಯತೆ ಕಂಡುಬಂದಾಗ ಭಾರತೀಯರು ಇದನ್ನು ಒಪ್ಪಿಕೊಳ್ಳತೊಡಗಿದರು. ಪ್ರಾರಂಭದಲ್ಲಿ ಬ್ರಿಟಿಷ್ ಪ್ರಕಾಶಕರೇ ಇದನ್ನು ಪೂರೈಸುತ್ತಿದ್ದರೂ ಕ್ರಮೇಣ ಭಾರತೀಯರೂ ಈ ಕೆಲಸಕ್ಕೆ ಕೈ ಹಾಕತೊಡಗಿದರು.

೧೯೫೦ರ ವೇಳೆಗೆ 'ಮುಂಬೈ' ಭಾರತೀಯ ಪ್ರಕಾಶನದ ಪ್ರಮುಖ ಕೇಂದ್ರವೆನಿಸಿಕೊಳ್ಳ ತೊಡಗಿತು. ಹಿಂದ್ ಕಿತಾಬ್, ತಾರಾ ಪುರೆವಾಲಾ, ಕುತುಬ್ ಪಬ್ಲಿಷರ್ಸ್, ಭಾರತೀಯ ವಿದ್ಯಾಭವನ ಇವುಗಳು ಗ್ರಂಥ ಲೋಕಕ್ಕೆ ಅಪಾರ ಕೊಡುಗೆ ನೀಡಿ ಜನಮನ್ನಣೆ ಗಳಿಸಲಾರಂಭಿಸಿದವು. ಸರಕಾರಿ ಕ್ಷೇತ್ರದ ಪ್ರಕಟಣೆಗಳು ಸರ್ಕಾರಿ ಸಾಹಿತ್ಯಕ್ಕೆ, ಖಾಸಗಿ ಕ್ಷೇತ್ರದ ಪ್ರಕಟಣೆಗಳು ಪಠ್ಯಪುಸ್ತಕಗಳಿಗೆ ಮಾತ್ರ ಸೀಮಿತವಾಗಿ ಬಳಕೆಯಾಗುತ್ತಿದ್ದವು. ಪಾಶ್ಚಾತ್ಯ ರಾಷ್ಟ್ರಗಳ ಕೃತಿಗಳ ನಡುವೆ ಭಾರತೀಯ ಕೃತಿಗಳು ಕಳಪೆಯಾಗಿ ಕಾಣಲಾರಂಭಿಸಿದವು. ಈ ಎಲ್ಲಾ ಅನಾನುಕೂಲತೆಗಳ ನಡುವೆ ಸಮನ್ವಯ ಸಾಧಿಸಲೋಸುಗವೆಂಬಂತೆ 'ಸಹಕಾರಿ ಪುಸ್ತಕ ಪ್ರಕಾಶನ' ಅಸ್ತಿತ್ವಕ್ಕೆ ಬಂದಿತು. ಇದರಿಂದಾಗಿ ಅನೇಕ ಅನುಕೂಲತೆಯ ಪರಿಣಾಮಗಳು ಉಂಟಾಗತೊಡಗಿದವು. ಈ ಬೆಳವಣಿಗೆ ಹೇಗೆ ಮುಂದುವರಿಯಿತೆಂದರೆ "ಪ್ರತಿವರ್ಷ ಪ್ರಕಟವಾಗುವ ಗ್ರಂಥಗಳ ಸಂಖ್ಯೆಯ ದೃಷ್ಟಿಯಿಂದ ಭಾರತವು ತೃತೀಯ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಪುಸ್ತಕ ಉತ್ಪಾದಿಸುವ ದೇಶವಾಗಿದ್ದು ಹಾಗೂ ವಿಶ್ವದ ಮಟ್ಟದಲ್ಲಿ ಹತ್ತನೇ ಸ್ಥಾನದಲ್ಲಿದೆ ಎಂದು ಗಮನಿಸಲಾಗಿದೆ."[೬]

ಕನ್ನಡದ ಸಂದರ್ಭದಲ್ಲಿ

ಮುದ್ರಣ ಉಪಯೋಗ ಪಾಶ್ಚಾತ್ಯ ದೇಶಗಳಲ್ಲಿ ೧೪೫೭ರ ವೇಳೆಗೆ ಆರಂಭವಾದರೂ ಅದು ಕನ್ನಡ ಭಾಷೆಗೆ ಲಭ್ಯವಾದದ್ದು ೧೮೧೭ರಲ್ಲಿ ಕ್ರೈಸ್ತ ಮತ ಪ್ರಚಾರಕನಾಗಿದ್ದ 'ವಿಲಿಯಂ ಕೇರಿ' ಎಂಬುವವನು ತನ್ನ 'History of Karnat Language' ಎಂಬ ಕೃತಿಗೆ ಕನ್ನಡದ ಮೊಳೆಗಳನ್ನು ಮೊದಲು ಬಳಸಿದ್ದನು. ನಂತರ ಜೈಮಿನಿ ಭಾರತ, ಬಸವ ಪುರಾಣ, ಗಾದೆಗಳು ಮುಂತಾದ ಕೃತಿಗಳನ್ನು ಕಲ್ಲಚ್ಚಿನ ಮೂಲಕ ಹೊರತರುವ ಪ್ರಯತ್ನ ಮಾಡಲಾಯಿತು. ಆರ್.ಎಫ್.ರೆಟ್ಟಿಲ್, ರೈಸ್ ಅಂತಹ ವಿದ್ವಾಂಸರು ಪ್ರತಿಗಳನ್ನು ಪರಿಷ್ಕರಿಸಿ, ಸಂಪಾದನೆ ಮಾಡಿ ಕೃತಿಗಳನ್ನು ಉತ್ತಮ ರೀತಿಯಲ್ಲಿ ಸಂಪಾದಿಸತೊಡಗಿದರು.

ಮದ್ರಾಸ್ ಮತ್ತು ಬಳ್ಳಾರಿಗಳಲ್ಲಿ ಕನ್ನಡ ಗ್ರಂಥ ರಚನೆ ಹಾಗೂ ಮುದ್ರಣ ಕಾರ್ಯಗಳು ನಡೆಯತೊಡಗಿದವು. ಜಾನ್ ಮೆಕೆರಲ್ ಎಂಬುವವನು 'A Grammer of the Karnataka Language' ಎಂಬ ಕೃತಿಯನ್ನು ೧೮೨೦ ರಲ್ಲಿ ಪೋರ್ಟ್‌ಸೆಂಟ್ ಜಾರ್ಜ್ ಕಾಲೇಜಿನ ಮುದ್ರಣಾಲಯದಿಂದ ಹೊರತಂದನೆನ್ನಲಾಗಿದೆ. ೧೮೨೭ ರಿಂದ ಕನ್ನಡ ಗ್ರಂಥಗಳ ನಿಯಮಿತವಾದ ಮುದ್ರಣ ಆರಂಭವಾಗತೊಡಗಿತು. ವೆಸ್ಲೆಯನರು ತಮ್ಮ ಮತಾಚಾರ ಹಾಗೂ ಶಿಕ್ಷಣ ಚಟುವಟಿಕೆಗಳಿಗಾಗಿ ೧೮೪೦ ರಲ್ಲಿ ಪ್ರತ್ಯೇಕ ಮುದ್ರಣಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ೧೯ನೇ ಶತಮಾನದಲ್ಲಿ ವೆಸ್ಲೆಯನ್ ಪ್ರೆಸ್ ಉಚ್ಛ್ರಾಯ ಸ್ಥಿತಿ ತಲುಪಿತು. ೧೮೯೦ ರಲ್ಲಿ ಖಾಸಗಿ ವ್ಯಕ್ತಿಯೊಬ್ಬರಿಂದ ಮೈಸೂರಲ್ಲಿ ಸ್ಥಾಪನೆಯಾಯಿತು. ಬಾಶೆಲ್ ಮಿಷನ್ ಪ್ರೆಸ್, ಕೊಡಿಯಾಲ ಬೈಲ್ ಪ್ರೆಸ್, ಜ್ಞಾನಭೋಧಕ ಪ್ರೆಸ್, ವಿಚಾರ ದರ್ಪಣ ಪ್ರೆಸ್ ಹೀಗೆ ಹಲವು ಮುದ್ರಣಾಲಯಗಳು ಕನ್ನಡ ಪ್ರಕಾಶನೋದ್ಯಮಕ್ಕೆ ಹೊಸದಾರಿ ತೋರಿದವು. ಪ್ರಕಾಶನದ ಕರ್ತವ್ಯಗಳನ್ನು ಅರಿತು ಉತ್ತಮವಾಗಿ ಕಾರ್ಯನಿರ್ವಹಿಸಿದಂತಹ ಪ್ರಕಾಶನ ಸಂಸ್ಥೆಗಳು ನಮ್ಮ ಕಣ್ಣ ಮುಂದಿವೆ. ಲೇಖಕರ ನಡುವೆ ಒಳ್ಳೆಯ ಬಾಂಧವ್ಯವನ್ನು ಹೊಂದಿ. ಅವರನ್ನು ಪ್ರೋತ್ಸಾಹಿಸುತ್ತಾ, ಸಾಹಿತ್ಯದ ಬೆಳವಣಿಗೆಗೆ ಕಾರಣಕರ್ತರಾದ ಪ್ರಕಾಶಕರು ಹಲವರಿದ್ದಾರೆ. ಅವರಿಂದ ಸ್ಥಾಪನೆಯಾದ, ಹೆಸರಿಸಲೇ ಬೇಕಾದ ಸಂಸ್ಥೆಗಳೆಂದರೆ ಧಾರವಾಡದ ಸಮಾಜ ಪುಸ್ತಕಾಲಯ, ಮನೋಹರ ಗ್ರಂಥಮಾಲೆ, ಬೆಂಗಳೂರಿನ ಐ.ಬಿ.ಹೆಚ್. ಪ್ರಕಾಶನ, ನವಕರ್ನಾಟಕ ಪ್ರಕಾಶ, ಮೈಸೂರಿನ ಕಾವ್ಯಾಲಯ, ಡಿ.ವಿ.ಕೆ. ಮೂರ್ತಿ, ಗೀತಾ ಬುಕ್ ಹೌಸ್ ಇತ್ಯಾದಿ.

ಈ ವೈಜ್ಞಾನಿಕಯುಗ ಮನುಷ್ಯನ ಎಲ್ಲಾ ಬಯಕೆಗಳನ್ನು ಈಡೇರಿಸುವ ಪ್ರಯತ್ನ ಮಾಡುತ್ತಿರುತ್ತದೆ. ಮಾನವನ ಮನಸ್ಸು ಯಾವ ಯಾವ ಬಗೆಯಲ್ಲಿ ಇರುತ್ತದೆಯೋ, ಅಷ್ಟೇ ವೈವಿಧ್ಯಮಯವಾದ ಪುಸ್ತಕಗಳು ಇವೆ. ಆದರೆ ಪುಸ್ತಕದಲ್ಲಿ

ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಣ್ಣ ಅಳುಕಿದೆ. ಮಾಧ್ಯಮಗಳ ಅತಿಯಾದ ಬೆಳವಣಿಗೆಯಿಂದಾಗಿ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ. ಓದುಗ ವರ್ಗವೇ ಮರೆಯಾಗಿದೆ. ಮಾಧ್ಯಮಗಳು ಎಷ್ಟೇ ಆಕ್ರಮಣಶಾಲಿ ಯತ್ನಗಳನ್ನು ನಡೆಸಿದರೂ ಕಡ ಪುಸ್ತಕಗಳ ಸ್ಥಾನವನ್ನು ಆಕ್ರಮಿಸಲು ಸಾಧ್ಯವಿಲ್ಲ. ಪುಸ್ತಕಗಳು ನೀಡುವ ಅನುಭವವೇ ಭಿನ್ನ. ಅದು ವರ್ಣನಾತೀತ.

ಅಡಿಟಿಪ್ಪಣಿಗಳು :

೧) ಬಿ.ಎಸ್.ಸಣ್ಣಯ್ಯ, ಲೇ.ಕನ್ನಡದಲ್ಲಿ ಗ್ರಂಥ ಸಂಪಾದನೆ, ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ, ಸಂಪುಟ-೧, ಮೈಸೂರು ವಿಶ್ವವಿದ್ಯಾನಿಲಯ, ದ್ವಿಮು ೨೦೦೫, ಪುಟ-೨೬೯

೨) ಮಾಧವ ಎನ್.ರಟ್ಟೀಹಳ್ಳಿ, ಕನ್ನಡ ಗ್ರಂಥೋದ್ಯಮ, ಒಂದು ಇತಿಹಾಸಿಕ ಅಧ್ಯಯನ, ಸಾ.ವಿ.ಜಿ ಪಬ್ಲಿಕೇಷನ್ಸ್ ಬೆಂಗಳೂರು, ೨೦೦೫, ಪುಟ-೧೨

೩) ಮಾಧವ ಎನ್.ರಟ್ಟೀಹಳ್ಳಿ, ಕನ್ನಡ ಗ್ರಂಥೋದ್ಯಮ- ಒಂದು ಐತಿಹಾಸಿಕ ಅಧ್ಯಯನ ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೫, ಪುಟ-೩೬

೪) ನರಸಣ್ಣ, ಹೆಚ್, ಮುದ್ರಣ ಸಮೀಕ್ಷೆ, ಮೈಸೂರು ವಿ.ವಿ., ಪುಟ-೧೩

೫) ಮಾಧವ ಎಸ್. ರಟ್ಟೀಹಳ್ಳಿ, ಕನ್ನಡ ಗ್ರಂಥೋದ್ಯಮ- ಒಂದು ಐತಿಹಾಸಿಕ ಅಧ್ಯಯನ ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೫.

೬) ಮಾಧವ ಎಸ್. ರಟ್ಟೀಹಳ್ಳಿ, ಕನ್ನಡ ಗ್ರಂಥೋದ್ಯಮ- ಒಂದು ಐತಿಹಾಸಿಕ ಅಧ್ಯಯನ ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೫.

೭) ಹಾ.ಮಾ.ನಾ ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ, ಮೈಸೂರು ವಿ.ವಿ. ೧೯೭೯

ಅಧ್ಯಾಯ – ೩

ಕಾವ್ಯಾಲಯ ಬೆಳೆದು ಬಂದ ದಾರಿ

"ಮಕ್ಕಳ ಮನಸ್ಸಿನಲ್ಲಿ ಹರ್ಷವನ್ನು ಉತ್ಸಾಹವನ್ನು ತುಂಬುವ ..
ಯುವಕರ ಮನಸ್ಸಿನಲ್ಲಿ ಆದರ್ಶಗಳನ್ನು, ಧೈರ್ಯವನ್ನು ತುಂಬುವ ..
ದೊಡ್ಡವರ ಮನಸ್ಸಿಗೆ ನೀತಿ ನಡತೆಗಳನ್ನು ಧೈರ್ಯವನ್ನು ತೋರುವ ..
ವೃದ್ಧರ ಮನಸ್ಸಿಗೆ ಶಾಂತಿಯನ್ನು ಹರ್ಷವನ್ನು ತರುವ ...

ಕನ್ನಡದಲ್ಲಿ ಬರಹಗಾರರ ಎಲ್ಲಾ ತರಹದ ಶ್ರೇಷ್ಠ ಪುಸ್ತಕಗಳನ್ನು
ಪ್ರಕಟಿಸಿರುವ... ಕನ್ನಡದಲ್ಲಿ ಶ್ರೇಷ್ಠ ಕೃತಿಗಳನ್ನು ತಂದಿರುವ ...
ಕೇಂದ್ರ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
(ಅನೇಕ ಹಲವು) ಮತ್ತು ಇತರ ಪ್ರಶಸ್ತಿಗಳನ್ನು ಪಡೆದಿರುವ ...
ಅನೇಕ ಬರಹಗಾರರನ್ನು ಪರಿಚಯಿಸಿರುವ ಪ್ರಕಾಶನ ಸಂಸ್ಥೆ
ವರ್ಷ ವರ್ಷವೂ ಬೆಳೆಯುತ್ತಿರುವ ಗ್ರಂಥಮಾಲೆ ...... ಅಂದರೆ

ಕಾವ್ಯಾಲಯ ಪ್ರಕಾಶನ'. [೧]

"........'ಕಾವ್ಯಾಲಯದ' ಹೆಸರನ್ನು ಕೇಳದ ಕನ್ನಡಿಗನು ತನ್ನ ಕನ್ನಡ ಪ್ರೇಮವನ್ನು ಪ್ರಶ್ನಿಸಿಕೊಳ್ಳಬೇಕಷ್ಟೆ! ಅವನು ಕನ್ನಡ ಭಕ್ತನಾಗಿರಲಾರ. ಏಕೆಂದರೆ ಕಾವ್ಯಾಲಯ ಕನ್ನಡಾಲಯವೂ ಅಹುದು. ಈ ಮಹಾಲಯ ಕೂಡಲಿ ಚಿದಂಬರಂ ಅವರ ಸತತ ದುಡಿಮೆ ಶ್ರಮಸಾಧನೆಯ ಸತ್ಯ ಸಂಕೇತ. ದೃಷ್ಟಿ ಹಾಯಿಸಿದೆಡೆಯಲ್ಲೆಲ್ಲಾ ಸರಸ್ವತಿ ಕಂಗೊಳಿಸುತ್ತಾಳೆ. ಸರಸ್ವತಿಯಿಂದ ಸುತ್ತುವರಿದು ತಮ್ಮ ಕಾರ್ಯದಲ್ಲಿ ತಲ್ಲೀನರಾಗಿರುತ್ತಾರೆ. ಕೂಡಲ ಚಿದಂಬರಂ ಅವರು ಕನ್ನಡದ ಸರ್ವತೋಮುಖ ಅಭಿವೃದ್ದಿಗಾಗಿ ಶ್ರಮಿಸಿ, ಕನ್ನಡದ ಎಲ್ಲಾ ಪ್ರಕಾರಗಳ ಸಾಹಿತ್ಯ ವೈವಿಧ್ಯಗಳನ್ನು ಪ್ರಕಟಿಸಿ ರಸಿಕರ ಮಡಿಲು ತುಂಬಿದ ಮಹಾನ್ ವ್ಯಕ್ತಿ ಚಿದಂಬರಂ......". [೨]

ಕಾದಂಬರಿ, ಆತ್ಮಕಥೆ, ಸಣ್ಣಕಥೆ, ಚರಿತ್ರೆ, ಕವಿತೆ, ಜೀವನಚರಿತ್ರೆ, ನಾಟಕ, ಕಲೆ, ಮಕ್ಕಳ ಕೃತಿಗಳು, ಮೀಮಾಂಸೆ, ಜನಪದ ಸಾಹಿತ್ಯ, ಅನುವಾದಗಳು, ಪ್ರಬಂಧ, ಕಥೆ, ನೀತಿಬೋಧಕ ಮಕ್ಕಳ ಕಥೆಗಳು, ಹೀಗೆ ಹಲವಾರು ಪ್ರಕಾರಗಳಲ್ಲಿ ಕೃತಿಗಳನ್ನು ಪ್ರಕಟಿಸಿ ಕಾವ್ಯಾಲಯ ಅಜರಾಮರವಾಗಿದೆ.

ಕಾವ್ಯಾಲಯ ಸ್ಥಾಪನೆಗೂ ಮೊದಲು ಚಿದಂಬರಂ ಅವರು ವಕೀಲರಾಗಿ, ಬ್ಯಾಂಕ್ ನೌಕರರಾಗಿ, ಶಿವಮೊಗ್ಗದ ಕರ್ನಾಟಕ ಸಂಘದ ಗೌರವ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಕರ್ನಾಟಕ ಸಂಘದಲ್ಲಿ ಉತ್ತಮ ಕೃತಿಗಳು ಪ್ರಕಟವಾಗುತ್ತಿದ್ದವು. ಈ ವಾತಾವರಣ ಚಿದಂಬರಂ ಅವರನ್ನು ಹೊಸ ದಾರಿಯತ್ತ ಕರೆದುಕೊಂಡು ಹೋಯಿತು.

ಶಿವಮೊಗ್ಗದಲ್ಲಿ ಸುಮಾರು ೧೯೨೮ರ ಸಂದರ್ಭದಲ್ಲಿ ಕಾವ್ಯಾಲಯವನ್ನು ಸ್ಥಾಪನೆ ಮಾಡಿದರೆನ್ನಬಹುದು. ಕೂಡಲಿ ಚಿದಂಬರಂ, ಕುವೆಂಪು, ದೇವಂಗಿ ಮಾನಪ್ಪ ಇವರುಗಳು ಸೇರಿ ಈ ಪ್ರಯತ್ನ ಮಾಡಿದ್ದರು. ಆನಂತರ ಕೂಡಲಿ ಚಿದಂಬರಂ ಅವರೇ ಈ ಸಂಸ್ಥೆಯನ್ನು ಶ್ರದ್ಧೆಯಿಂದ ಕಟ್ಟಿ ಬೆಳೆಸಿ ಪೋಷಿಸಿದರು. ಮೊದಲ ಕೃತಿಯಾಗಿ ಕುವೆಂಪು ಅವರ "ಕಿಂದರಿಜೋಗಿ ಮತ್ತು ಇತರ ಕಥನಕವನಗಳು" ಪ್ರಕಟವಾಯಿತು. ಕಾವ್ಯಾಲಯ ಸಾಹಿತ್ಯದ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದರ ಮೂಲಕ ಲೇಖಕರಿಗೆ ಒಳ್ಳೆಯ ಭವಿಷ್ಯವನ್ನು ರೂಪಿಸಿಕೊಟ್ಟಿತು. ಕಾವ್ಯಾಲಯವನ್ನು ಉತ್ತಮ ರೀತಿಯಲ್ಲಿ ಎಲ್ಲರಿಗೂ ಅನುಕೂಲವಾಗುವಂತೆ ಮುನ್ನಡೆಸುವ ಉದ್ದೇಶದಿಂದ ೧೯೪೧ ಮೇ ತಿಂಗಳಿನಲ್ಲಿ ಮೈಸೂರಿಗೆ ವರ್ಗಾಯಿಸಲಾಯಿತು. ಡಿ.ವಿ.ಜಿ. ಕುವೆಂಪು, ಬೇಂದ್ರೆ, ಕೆ.ಎಸ್. ನರಸಿಂಹಸ್ವಾಮಿ, ತೀ.ನಂ.ಶ್ರೀ, ಪು.ತಿ.ನ, ಹಾಮಾನಾ, ಬಿ.ಜಿ.ಎಲ್ ಸ್ವಾಮಿ, ಎಂ. ಎಸ್. ಪುಟ್ಟಣ್ಣ, ದೇವಕಿಮೂರ್ತಿ ಮುಂತಾದ ಲೇಖಕರಿಗೆ ಒತ್ತಾಸೆಯನ್ನು ನೀಡಿ ಬೆಳೆಸಿತು ಎಂದರೆ ತಪ್ಪಾಗಲಾರದು. ಚಿದಂಬರಂ ಸುಮಾರು ೬೦ ವರ್ಷಗಳ ಕಾಲ ಕಾವ್ಯಾಲಯಕ್ಕೆ ಶ್ರಮಿಸಿ ಕಾಲವಾದರು. ಅವರ ತರುವಾಯ ಮಕ್ಕಳಾದ ಸಿ.ಕೆ. ಕೃಷ್ಣಮೂರ್ತಿ ಮತ್ತು ಸಿ.ಕೆ. ಪ್ರಭಾ ಅವರು ಕಾವ್ಯಾಲಯವನ್ನು ಮುನ್ನಡೆಸಿದ್ದಾರೆ. ಕಾವ್ಯಾಲಯದ ಕೃತಿಗಳು ಪ್ರಾರಂಭದಿಂದಲೂ ಗುಣಮಟ್ಟಕ್ಕೆ ಹೆಸರಾಗಿ ಜನಮನ್ನಣೆಗಳಿಸಿದ್ದವು.

ಚಿದಂಬರಂ ಹಾಗೂ ಕಾವ್ಯಾಲಯದ ಬಗ್ಗೆ ಪ್ರಭುಶಂಕರ ಹೇಳಿರುವ ಮಾತುಗಳನ್ನು ತಾ.ಶ್ರೀ.ನಾಗಾರಾಜರಾಯ ಅವರು ತಮ್ಮ ಲೇಖನದಲ್ಲಿ ಪ್ರಸ್ತಾಪ ಮಾಡುತ್ತಾರೆ. ಆ ಮಾತುಗಳು ಇಂತಿವೆ. "ಕರ್ನಾಟಕದಲ್ಲಿ ಪ್ರಕಾಶನೋದ್ಯಮವನ್ನು ಗೌರವಯುತವಾದ ಮಟ್ಟದಲ್ಲಿ ನಡೆಸಿ ಪ್ರಕಾಶನವು ಸೃಜನಶೀಲ ಸಾಹಿತ್ಯ ರಚನೆಯಷ್ಟೇ ಪರಿಶ್ರಮಗಳನ್ನು ಅಪೇಕ್ಷಿಸತಕ್ಕದ್ದು ಎಂಬುದನ್ನು ತೋರಿಸಿಕೊಟ್ಟವರೇ ಶ್ರೀ ಚಿದಂಬರಂ ಅವರು. ಅವರ ಪ್ರಕಾಶನ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಹಾಗೂ ಸಜ್ಜನಿಕೆಗಳಿಗೆ ಇನ್ನೊಂದು ಹೆಸರಾಗಿದ್ದರು. ಪುಸ್ತಕ ಪ್ರಕಾಶನವು ಅತ್ಯಂತ ದುಸ್ತರವಾಗಿದ್ದ ಕಾಲದಲ್ಲಿಯೂ ಕುವೆಂಪು, ಡಿ.ವಿ.ಜಿ., ಪು.ತಿ.ನ, ಎ.ಎನ್.ಇಂತಹ ಲೇಖಕರ ಕೃತಿಗಳು ಬೆಳಕಿಗೆ ಬಂದದ್ದು ಕಾವ್ಯಾಲಯದಿಂದಲೆ. ಚಾಕಚಕ್ಯತೆಯಾಗಲೀ, ಥಳುಕು ಪಳಕಾಗಲೀ, ಅಡ್ಡದಾರಿಯಾಗಲೀ ತಿಳಿಯದಿದ್ದರಿಂದಲೇ ಶ್ರೀ ಚಿದಂಬರಂ ಅವರು ಕುಬೇರರಾಗಲಿಲ್ಲ. ಒಂದು ಮಾತಿನಲ್ಲಿ ಹೇಳಬಹುದಾದರೆ ಚಿದಂಬರಂ ಅವರನ್ನು ಭೇಟಿ ಮಾಡುವುದೆಂದರೆ ಸಂಸ್ಕೃತಿಯನ್ನು ಮುಖಾಮುಖಿ ಸಂಧಿಸಿದ ಹಾಗೆ ಎಂಬುದು ನನಗೆ ದೊರೆತ ಅನುಭವ." ೨ ಈಗಾಗಲೇ ಸೂಚಿಸಿದಂತೆ ಕಾವ್ಯಾಲಯದಿಂದ ಮೊದಲು ಪ್ರಕಟಿತವಾದ ಕೃತಿ ಕುವೆಂಪು ಅವರ "ಕಿಂದರಿಜೋಗಿ ಮತ್ತು ಇತರ ಕಥನ ಕವನಗಳು". ಈ ಕೃತಿಯ ನಂತರ ನಿರಂತರವಾಗಿ ಕೃತಿಗಳು ರಚನೆಯಾಗತೊಡಗಿದವು. ಮಂಕುತಿಮ್ಮನ ಕಗ್ಗ, ಉಮರನ ಒಸಗೆ, ಅನ್ತಃಪುರಗೀತೆ, ದೀಪದ ಮಲ್ಲಿ, ಶಿಲಾಲತೆ, ಉಂಗುರ, ನೀತಿಚಿಂತಾಮಣಿ, ಅಹಲ್ಯೆ, ಗೋಕುಲ ನಿರ್ಗಮನ,

ನಂದಾದೀಪ,ದುರ್ಗಾಸ್ತಮಾನ, ಹಸುರುಹೊನ್ನು, ಟೊಳ್ಳುಗಟ್ಟಿ. ಹೀಗೆ ಹಲವಾರು ಕೃತಿಗಳು ರಚನೆಯಾದವು. ಅವುಗಳ ಪಟ್ಟಿಯನ್ನು ಪೂರ್ಣವಾಗಿ ಪ್ರತ್ಯೇಕವಾಗಿ ನೀಡಲು ಮುಂದೆ ಪ್ರಯತ್ನ ಮಾಡುತ್ತೇನೆ. ಕಾವ್ಯಾಲಯ ಮಾಡಿದ ಪ್ರಾಮಾಣಿಕವಾದ ಕೆಲಸಕ್ಕೆ ಹಲವಾರು ಪ್ರಶಸ್ತಿ, ಗೌರವಗಳು ಸಂದಿವೆ. ಅಷ್ಟೇ ಅಲ್ಲದೆ ಭಾರತ ಸರ್ಕಾರ ಕಾವ್ಯಾಲಯಕ್ಕೆ ಗೌರವ ಸಲ್ಲಿಸಬೇಕೆಂಬ ಉದ್ದೇಶದಿಂದ 'Book Production award' ಅನ್ನು ೧೯೫೭ರ ಸಂದರ್ಭದಲ್ಲಿ ನೀಡಿತ್ತು. ಪುಸ್ತಕಗಳ ಮುದ್ರಣ, ಗುಣಮಟ್ಟ, ಕೃತಿಯ ಸೌಂದರ್ಯಕ್ಕೆ ಪೂರಕವಾದ ಸಾಮಗ್ರಿ ಇವುಗಳಿಗೆ ಹೆಚ್ಚು ಗಮನ ನೀಡಿ ಒಳ್ಳೆಯ ಕೃತಿಗಳನ್ನು ನೀಡಿದಕ್ಕೆ ಈ ಪ್ರಶಸ್ತಿಯನ್ನು, ಪ್ರಮಾಣಪತ್ರವನ್ನು ನೀಡಲಾಗಿದೆ ಎಂದು ಡೈರೆಕ್ಟರೇಟ್ ಆಫ್ ಅಡ್ವರ್‌ಟೈಸಿಂಗ್ ಆ್ಯಂಡ್ ವಿಶಿಯಲ್ ಪಬ್ಲಿಸಿಟಿ, ಮಿನಿಸ್ಟರ್ ಆಫ್ ಇನ್‌ಫಾರ್ಮೆಶನ್ ಆ್ಯಂಡ್ ಬ್ರಾಡ್ ಕಾಸ್ಟಿಂಗ್, ನ್ಯೂದೆಲ್ಲಿ. ಇವರು ೨೩, ಡಿಸೆಂಬರ್ ೧೯೫೭ ರಂದು ಪತ್ರ ಕಳುಹಿಸಿದ್ದರು.

ಕಾವ್ಯಾಲಯದ ಕಾರ್ಯಗಳಿಂದ ಸಂತೃಪ್ತಿಯನ್ನು ಹೊಂದಿದ್ದ ಜನರು ಚಿದಂಬರಂ ಅವರನ್ನು ಬುಕ್ ಇಂಡಸ್ಟ್ರಿ ಕೌನ್ಸಿಲ್ ಆಫ್ ಸೌತ್ ಇಂಡಿಯಾದ ನಿರ್ದೇಶಕರ ಹುದ್ದೆಯ ಚುನಾವಣೆಗೆ ನಿಲ್ಲುವಂತೆ ಒತ್ತಾಯಪಡಿಸಿದ್ದರು. ಕಾವ್ಯಾಲಯವನ್ನು ಮಾದರಿ ಸಂಸ್ಥೆಯನ್ನಾಗಿ ಮಾಡುವ ಉದ್ದೇಶವನ್ನಿಟ್ಟುಕೊಂಡು ಚುನಾವಣೆಗೆ ನಿಂತಿದ್ದರು ಎಂಬ ವಿಷಯ ೨೨.೮.೧೯೫೬ ರ ಪತ್ರದಲ್ಲಿ ತಿಳಿದು ಬರುತ್ತದೆ. ಜನರು ಇಟ್ಟಿದ್ದ ನಂಬಿಕೆಯನ್ನು ಉಳಿಸಿಕೊಳ್ಳುವುದು ಕಾವ್ಯಾಲಯಕ್ಕೆ ದೊಡ್ಡ ಸವಾಲಾಗಿತ್ತು. ಈ ಜವಾಬ್ದಾರಿಯ ಕಾರಣದಿಂದಲೇ ಕಾವ್ಯಾಲಯ ಭಿನ್ನ ಭಿನ್ನ ಪ್ರಯತ್ನಗಳನ್ನು ಮಾಡಿತು. ೧೯೪೯ರ ಸಂದರ್ಭದಲ್ಲಿ ಕಾವ್ಯಾಲಯ ಕೆಲವು ಪ್ರಕಟಣೆಗಳ ಮಾಲೆಗಳನ್ನು ಹೊರತಂದಿತ್ತು.

೧. ಕನ್ನಡ ಕಾವ್ಯಮಾಲೆ - ಈ ಮಾಲೆಯಲ್ಲಿ ಕಾವ್ಯ, ನಾಟಕ, ಕಥೆ, ಕಾದಂಬರಿ, ಚಿತ್ರಗಳು, ವಿಮರ್ಶೆ ಇವೇ ಮೊದಲಾದ ಸಾಹಿತ್ಯ ರೀತಿಯ ಕೃತಿಗಳು ಪ್ರಕಟವಾಗಿದ್ದವು.

೨. ಮಕ್ಕಳ ಮುತ್ತಿನ ಮಾಲೆ - ಆರೇಳು ವರ್ಷದ ಮಕ್ಕಳಿಂದ ಮೊದಲು ಮಾಡಿ ೧೩-೧೪ ವರ್ಷಗಳ ಬಾಲಕರಿಗೆ ಉಪಯುಕ್ತವಾದ ಪುಸ್ತಕಗಳನ್ನು ಒದಗಿಸುವ ಉದ್ದೇಶದಿಂದ ಈ ಮಾಲೆಯನ್ನು ಪ್ರಾರಂಭಿಸಿದ್ದರು.

೩. ಕಥಾ ಪ್ರಪಂಚ - ವಾಚನಾಭಿರುಚಿ ಹೆಚ್ಚಿಸುವ ಈ ಕಾಲದ ಅವಶ್ಯಕತೆಗಳಿಗನುಗುಣವಾಗಿ ಜನರು ಅಗತ್ಯವಾಗಿ ಅಪೇಕ್ಷಿಸುವ ಕಥೆ ಕಾದಂಬರಿಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸುವ ದೃಷ್ಟಿಯಿಂದ ಈ ಹೊಸ ಮಾಲೆ ಆರಂಭಿಸಿದ್ದರು.

ಹೀಗೆ ಕಾವ್ಯಾಲಯ ಕನ್ನಡ ಪುಸ್ತಕೋದ್ಯಮಕ್ಕೆ ಹೊಸ ಹೊಸ ಕೊಡುಗೆಗಳನ್ನು ನೀಡಿ ಅವಿಸ್ಮರಣೀಯವಾಯಿತು. ಚಿದಂಬರಂ ಸ್ವತಃ ಸಾಹಿತಿಯೂ, ಲೇಖಕರೂ, ಉತ್ತಮ ಅಭಿರುಚಿಯುಳ್ಳವರೂ ಆದುದರಿಂದ ಒಳ್ಳೆಯ ಮೌಲ್ಯದ

ಕೃತಿಗಳನ್ನೇ ಪ್ರಕಟಿಸುತ್ತಿದ್ದರು, ಗೊರೂರು ರಾವ್ ಅವರ ಮಾತಿನ ಮೂಲಕ ಸ್ಪಷ್ಟಪಡಿಸುವುದಾದರೆ ಅಚಿದಂಬರಂ ಪ್ರಕಟಿಸುವುದೆಂದರೆ ಸಹೃದಯ ವಿಮರ್ಶೆಯಲ್ಲಿ ಗ್ರಂಥ ತೇರ್ಗಡೆಯಾದಂತೆ.ಅ೪

ಅಡಿಟಿಪ್ಪಣಿಗಳು :

೧. ಕಾವ್ಯಾಲಯ ಮಾಹಿತಿ ಕೈಪಿಡಿ

೨. ಕಾವ್ಯಾಲಯ ಮಾಹಿತಿ ಕೈಪಿಡಿ

೩. (ಲೇ) ನಾಗರಾಜರಾಯ, ತಾ.ಶ್ರೀ ಕಾವ್ಯಾಲಯದ ಕಾರಣಪುರುಷ, ಅಪ್ರಕಟಿತ ಲೇಖನ.

೪. (ಸಂ) ಹೊರೆಯಾಲ ದೊರೆಸ್ವಾಮಿ, ಪುಸ್ತಕ ಲೋಕದ ಅನನ್ಯರು, ಕಾವ್ಯಾಲಯ ಪ್ರಕಾಶಕರು ಅಭಿನವ, ೨೦೦೮, ಪುಟ, ೫-೬.

ಅಧ್ಯಾಯ – ೪

ಕಾವ್ಯಾಲಯ ಪ್ರಕಾಶನಕ್ಕೆ ಮಾದರಿಯಾದ ವಿಚಾರಗಳು

4.1 ಮುದ್ರಣ ಯಂತ್ರಗಳು

ಯಂತ್ರ ಉದ್ಯಮ ಪಾಶ್ಚಾತ್ಯದೇಶಗಳಲ್ಲಿ ನಡೆದ ವೈಜ್ಞಾನಿಕ ಮತ್ತು ಕೈಗಾರಿಕಾ ಕ್ರಾಂತಿಯ ಫಲ. ವಿವಿಧ ವಸ್ತುಗಳ ಉತ್ಪಾದನೆ ಮತ್ತು ವಿತರಣರಂಗಕ್ಕೆ ಅಗತ್ಯಗಳಾದ ಯಂತ್ರಗಳನ್ನು ತಯಾರುಮಾಡುವುದು ಉದ್ಯಮವಾಗಿ ಬೆಳೆಯತೊಡಗಿತು. ಪಾಶ್ಚಾತ್ಯ ದೇಶಗಳಲ್ಲಿ ಸುಮಾರು ೧೫-೧೬ ನೇ ಶತಮಾನಗಳ ಹೊತ್ತಿಗೆ ಮುದ್ರಣದ ಬಳಕೆ ಪ್ರಾರಂಭವಾದರೂ ಅದು ಭಾರತಕ್ಕೆ ಬಂದರು ೧೯ನೇ ಶತಮಾನದಲ್ಲಿ ಬ್ರಿಟಿಷ್ ಸರ್ಕಾರ ತನ್ನ ಆಡಳಿತ ನಿರ್ವಹಣೆಗಾಗಿಯೂ ಕ್ರೈಸ್ತ ಮಿಷನರಿ ಸಂಸ್ಥೆಗಳು ತಮ್ಮ ಧರ್ಮದ ಪ್ರಚಾರಕ್ಕಾಗಿ ಧರ್ಮ ಗ್ರಂಥಗಳನ್ನು ಅಚ್ಚು ಮಾಡುವುದಕ್ಕಾಗಿಯೇ ಮುದ್ರಣ ವಿಧಾನವನ್ನು ಬಳಕೆಗೆ ತಂದರು. "ಕರ್ನಾಟಕದಲ್ಲಿ ಮುದ್ರಣಕಲೆಯನ್ನು ಸ್ಥಾಪಿಸಿದವರಲ್ಲಿ ಬೆಂಗಳೂರಿನ ವೆಸ್ಲಿಯನ್ ಮತ್ತು ಮಂಗಳೂರಿನ ಬಾಸೆಲ್ ಮಿಶನ್ ಸಂಸ್ಥೆಯವರು ಮೊದಲಿಗರೆನ್ನಬಹುದು. ಮೊದಮೊದಲು ಮತಗ್ರಂಥಗಳನ್ನು ಮುದ್ರಿಸಿದರು. ನಂತರ ಸೈಂಟ್ ಮ್ಯಾಥ್ಯೂವಿನ 'ಗಾಸ್ಪೆಲ್' ಕೃತಿ ೧೮೨೦ ರಲ್ಲಿ ಪ್ರಕಟವಾಯಿತು. ಅನಂತರ ರೀವ್ ಅವರ 'ಇಂಗ್ಲೀಷ್ - ಕನ್ನಡ ಕೋಶ' ವನ್ನು ೧೮೨೪ ರಲ್ಲಿ ಪ್ರಕಟಿಸಿದರು. ಇದಾದ ನಂತರ ವರ್ತಮಾನ ಪತ್ರಿಕೆಗಳು, ಹಳೆಗನ್ನಡ ಕೃತಿಗಳು ಪ್ರಕಟವಾಗಲಾರಂಭಿಸಿದವು". [೧]

20ನೇ ಶತಮಾನದಲ್ಲಿ ಹೊಸ ದೈನಿಕ ಪತ್ರಿಕೆಗಳ, ಮಾಸಿಕ ಪತ್ರಿಕೆಗಳ ಪ್ರಕಟಣೆಯ ಮೂಲಕ ಮುದ್ರಣಕ್ಕೆ ಹೆಚ್ಚು ಚಾಲನೆ ದೊರಕಿತು. ಮುದ್ರಣಯಂತ್ರ ಸ್ಥಾಪನೆಯಾದಂದಿನಿಂದ ಇಲ್ಲಿಯವರೆಗೂ ಸಾಕಷ್ಟು ಬದಲಾವಣೆಗಳಾಗಿವೆ. ಮೊದಲು ಕೈಯಿಂದ ಅಚ್ಚುಮಾಡುತ್ತಿದ್ದರು ನಂತರ ಕಾಲಿನಿಂದ ಒತ್ತಿ ನಡೆಸುವ ಟ್ರೆಡಲ್, ಕೈಗಳಿಂದ ತಿರುಗಿಸುವ ಸ್ಟಾಪ್ ಸಿಲಿಂಡರ್ ಪ್ರೆಸ್ ಮೂಲಕ ಪ್ರತಿ ತೆಗೆಸಲಾರಂಭಿಸಿದರು. ವಿದ್ಯುತ್ ಉಪಯೋಗ ಪ್ರಾರಂಭವಾದ ನಂತರ ಮುದ್ರಣ ವ್ಯವಸ್ಥೆ ಹೊಸ ತಿರುವನ್ನು ಪಡೆದುಕೊಂಡಿತು. ಯಂತ್ರಗಳು ವಿದ್ಯುತ್ ಮೋಟಾರ್‌ನಿಂದ ಚಲಿಸಲಾರಂಭಿಸಿದವು. "ಯಾವುದೇ ಭಾಷೆಯ ಮುದ್ರಣ ಸಮರ್ಪಕವೆನಿಸಿಕೊಳ್ಳಬೇಕಾದರೆ ಅದರಲ್ಲಿ ಪುಸ್ತಕ, ವೃತ್ತಪತ್ರಿಕೆ ಮುಂತಾದ ಬಗೆಯ ವ್ಯವಹಾರ ಮುದ್ರಣಗಳಿಗೂ ಅದರಲ್ಲಿ ಸಲಕರಣೆಗಳು ಇರಬೇಕು" [೨]

ಮುದ್ರಣ ಯಂತ್ರಗಳಿಗೆ ವಿದ್ಯುತ್ ಬಳಸುವಂತಾದ ಮೇಲೆ ಮುದ್ರಣ ಮುನ್ನಡೆಯಿತೆನ್ನಬಹುದು. ಹಲವಾರು ವಿಧಗಳಲ್ಲಿ ಬಳಸಬಹುದಾದ ಯಂತ್ರಗಳು ಬರತೊಡಗಿದವು. ಮುದ್ರಣಕ್ಕೆ ಸಂಬಂಧಿಸಿದಂತೆ ಕಾವ್ಯಾಲಯ ಬಹಳ ಜಾಗ್ರತೆ

ವಹಿಸಿತು. ವಿದೇಶಗಳಲ್ಲಿ ತಯಾರಾಗುತ್ತಿದ್ದ ವಿಧವಿಧವಾದ ಯಂತ್ರಗಳ ಬಗೆಗೆ ಮಾಹಿತಿ ಸಂಗ್ರಹಿಸುತ್ತಿದ್ದರು. ಪ್ರಕಟಣೆಗೆ ಸಂಬಂಧಿಸಿದಂತೆ ಯಾವ ಯಾವ ಮಾದರಿಗಳಿವೆ? ಇನ್ನೂ ಹೊಸ ಹೊಸ ಬಗೆಯ ಮಾದರಿಗಳು ಬೆಳವಣಿಗೆಯಾಗುತ್ತಿದೆಯೇ? ಎಂದು ತಿಳಿದುಕೊಳ್ಳಲು ಸದಾ ಕುತೂಹಲಿಯಾಗಿರುತ್ತಿದ್ದರು. ಎಂಬುದು ಅವರ ದಾಖಲೆಗಳನ್ನು ಗಮನಿಸಿದಾಗ ಅರಿವಾಗುತ್ತದೆ. ಗ್ರಾಹಕರಿಗೆ ಒಳ್ಳೆಯ ಗುಣಮಟ್ಟದ ಕೃತಿಗಳನ್ನು ಒದಗಿಸಬೇಕು, ಸಂಸ್ಥೆಯ ಹೆಸರನ್ನು ಸ್ಥಿರಗೊಳಿಸಬೇಕು ಎಂಬ ನಿಟ್ಟಿನಲ್ಲಿ ಕಾವ್ಯಾಲಯ ಸರ್ವಪ್ರಯತ್ನ ಮಾಡತೊಡಗಿತು.

ಕಂಪೆನಿಗಳು ಅವರಲ್ಲಿ ತಯಾರಾದಂತಹ ಯಂತ್ರಗಳ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ನೀಡುತ್ತಿದ್ದವು. ಕಾವ್ಯಾಲಯ ಪ್ರಕಾಶನ, ಪತ್ರಿಕೆಗಳಲ್ಲಿ ಬಂದಂತಹ ಜಾಹೀರಾತುಗಳನ್ನು ಗಮನಿಸಿ ಅವುಗಳನ್ನು ಸಂಗ್ರಹಿಸುತ್ತಿತ್ತು. ಸಂಗ್ರಹಿಸಿದ ಜಾಹೀರಾತುಗಳನ್ನು ವಿವರವಾಗಿ ಗಮನಿಸಿ ಕಂಪೆನಿಗಳಿಗೆ ಪತ್ರ ಬರೆಯುತ್ತಿದ್ದರು. ಆ ಯಂತ್ರಗಳ ಬಗ್ಗೆ ಮಾಹಿತಿ ಕೈಪಿಡಿ ದೊರೆತ ಮೇಲೆ ಅದರ ಉಪಯೋಗಗಳನ್ನು ತಿಳಿದುಕೊಂಡು ಯಂತ್ರಗಳನ್ನು ತರಿಸಿಕೊಳ್ಳುವ ವಿಚಾರ ಮಾಡುತ್ತಿದ್ದರು.

ಅನೇಕ ಮಾದರಿಗಳ ಮುದ್ರಣ ಯಂತ್ರಗಳ ವಿಚಾರವಾಗಿ ಪತ್ರ ವ್ಯವಹಾರದ ಮೂಲಕ ಸಂಪರ್ಕ ಹೊಂದಿದ್ದ ಕಂಪೆನಿಗಳೆಂದರೆ - ಲಾಯ್ಡ್ಸ್ ಆ್ಯಂಡ್ ಕಂಪೆನಿ. ಆಲ್ವೆ ಬ್ಯಾಟ್ಲಿ ಬಾಯ್ ಆ್ಯಂಡ್ ಕೋ. ಬಾಂಬೆಯಿಂದ 'ಯೋಧ' ಜಪಾನಿಸ್ ಮೇಕ್, ನೆಲ್ಸನ್ ಆ್ಯಂಡ್ ಕೋ. ಮದ್ರಾಸ್, ಎಸ್. ಎನ್. ಗಾಯ್ ಟೊಂಡೆ ಆ್ಯಂಡ್ ಕೋ. ಲಿಮಿಟೆಡ್. ಬಾಂಬೆಯಿಂದ 'ಕುಸಾಕಿ', ದಿ ಪ್ರಿಂಟರ್ಸ್ ಹೌಸ್ ಡೆಲ್ಲಿಯಿಂದ 'ಡಾಟ್ಸನ್' , ದಿ ಜನರಲ್ ಮೆಶಿನ್ ಟೂಲ್ಸ್ ಕಾರ್ಪೊರೇಶನ್ ಮದ್ರಾಸ್‌ನಿಂದ 'ಕಿರ್ಟಿ', ಪೇಪರ್ ಕಟ್ಟಿಂಗ್ ಮೆಶಿನ್, ನ್ಯೂ ಡೆಮೆಲೋಸ್ ಫೌಂಡರಿ. ಮದ್ರಾಸ್‌ನಿಂದ '24 ರೋಟರಿ ಕಟ್ಟಿಂಗ್ ಮಶಿನ್' , ಕೆ.ಇ. ನೈಕರ್ ಆ್ಯಂಡ್ ಕೋ. ಮದ್ರಾಸ್‌ನಿಂದ 'ಬ್ರಾಂಡ್ ನ್ಯೂ ಡಾಟ್‌ಸನ್ ಪ್ಲಾಟೆನ್ ಪ್ರೆಸಸ್', ಜ್ಯೋತಿ ಲಿಮಿಟೆಡ್ ಬರೋಡಾದಿಂದ 'ಜ್ಯೋತಿ ಪೇಪರ್ ಕಟ್ಟಿಂಗ್ ಮೆಶಿನ್', ಅಪೆಕ್ಸ್ ಪ್ರಿಂಟಿಂಗ್ ಮೆಶಿನರಿ ಕೋ. ನ್ಯೂಯಾರ್ಕ್, ದಿ ವಿಲಿಯಂ ಇಂಜಿನಿಯರಿಂಗ್ ಕೋ. ಲಿಮಿಟೆಡ್ ಲಂಡನ್, ಇಂಗ್ಲೆಂಡ್, ಇಂಡಸ್ಟ್ರಿಯಲ್ ಎಕ್ಸಿಬಿಷನ್ ಕೊಟ್ಟ್ಯಾಮ್, ತಿರುವಂಕೂರ್ ಇತ್ಯಾದಿ. ಈ ಕಂಪೆನಿಗಳ ಜೊತೆಗೆ ಪತ್ರ ವ್ಯವಹಾರ ನಡೆಸಿ ಯಂತ್ರಗಳ ಬಗೆಗೆ ಮಾಹಿತಿ ಸಂಗ್ರಹಿಸಿಕೊಳ್ಳುತ್ತಿದ್ದರು. ಯಂತ್ರಗಳಿಗೆ ಸಂಬಂಧಿಸಿದಂತೆ ಅನೇಕ ಪತ್ರಗಳನ್ನು ಅವರ ಸಂಗ್ರಹದಲ್ಲಿ ಕಾಣಬಹುದು. ದಿ ಪ್ರಿಂಟರ್ಸ್ ಹೌಸ್ ಲಿಮಿಟೆಡ್. ಡಿಲ್ಲಿ ಇವರು ತಮ್ಮ ಕಂಪೆನಿಯ ಹೊಸ ಮಾದರಿಯ ಯಂತ್ರಗಳನ್ನು ಕಾವ್ಯಾಲಯಕ್ಕೆ ಪರಿಚಯಿಸಲು ಪತ್ರ ಬರೆಯುತ್ತಿದ್ದರು. ಆ ಯಂತ್ರಗಳ ವಿವರಣೆ ಜೊತೆಗೆ ಅವುಗಳ ಚಿತ್ರಗಳನ್ನು ಕೂಡ ಕಳುಹಿಸುತ್ತಿದ್ದರು. ಪ್ರಕಾಶಕರಿಗೆ ಆ ಮಾದರಿಗಳು ಇಷ್ಟವಾಗದೆ ಹೋದರೆ ಪ್ರತಿಕ್ರಿಯಿಸಲು

ಹೋಗುತ್ತಿರಲಿಲ್ಲ. ಆಗ ಕಂಪೆನಿಯ ನಿರ್ದೇಶಕರೇ ಕೊಂಡುಕೊಳ್ಳುವಂತೆ ಮತ್ತೆ ಮತ್ತೆ ಕೇಳಿಕೊಳ್ಳುತ್ತಿದ್ದರು. ಕೆಲವೊಮ್ಮೆ ಅವರಿಗೆ ಅಗತ್ಯವಾದ ಉಪಯೋಗಗಳು ಅವರ ಯಂತ್ರಗಳಿಂದ ಆಗುತ್ತಿರಲಿಲ್ಲ. ಪ್ರಿಂಟರ್ ಹೌಸ್ ನವರು ಒತ್ತಾಯಮಾಡಿದ್ದರಿಂದ ಚಿದಂಬರಂ ೨೯. ೧೧. ೧೯೫೧ ರಂದು ಪತ್ರ ಬರೆದಿದ್ದರು. ಕನ್ನಡ, ಇಂಗ್ಲೀಷ್ ಮುದ್ರಣವನ್ನು ಒಳಗೊಂಡ ಯಂತ್ರಗಳು ಮಾತ್ರ ಅವಶ್ಯವಾಗಿವೆ ಎಂದು ತಿಳಿಸಿದ್ದರು. ಈ ಅಂಶಗಳನ್ನೆಲ್ಲಾ ಗಮನಿಸಿದಾಗ ಕಾವ್ಯಾಲಯ ಮತ್ತು ಕಂಪೆನಿಗಳ ನಡುವಿನ ಸಂಬಂಧ ಹೇಗಿರುತ್ತಿತ್ತು ಎಂಬುದು ತಿಳಿಯುತ್ತಿತ್ತು.

ಕಾಲಾನಂತರ ಯಂತ್ರಗಳು ಸಾಕಷ್ಟು ನವೀಕರಣಕೊಳ್ಳತೊಡಗಿದ್ದವು. ಅವುಗಳನ್ನು ಬಳಸುವ ವಿಧಾನ ಕೂಡ ಸರಿಯಾಗಿ ಗೊತ್ತಾಗುತ್ತಿರಲಿಲ್ಲ. ಅಂತಹ ಸಂದರ್ಭಗಳು ಎದುರಾದಾಗ ಮಾಹಿತಿ ಕೈಪಿಡಿಗಳ ಅವಶ್ಯಕತೆ ಎದುರಾಗುತ್ತಿತ್ತು. ಅವುಗಳನ್ನು ಓದಿ ವಿವರಗಳನ್ನು ತಿಳಿದುಕೊಳ್ಳಬೇಕಾಗುತ್ತಿತ್ತು. ಕಾವ್ಯಾಲಯಕ್ಕೂ ಈ ಬಗೆಯ ಸನ್ನಿವೇಶ ಎದುರಾದಾಗ ಆಗ ವೂಪೇಂದ್ರ ಚಂದ್ರ ಎಂಬುವವರ ಮಾಹಿತಿ ಕೈಪಿಡಿಯನ್ನು ತರಿಸಿಕೊಂಡಿದ್ದರು. ಅದರಲ್ಲಿ ಕೀಲಿಮಣೆಯನ್ನು ಬಳಸಲು ಮಾಡಬೇಕಾದ ಅಭ್ಯಾಸದ ಚಿತ್ರಗಳಿದ್ದವು.

ಚಿದಂಬರಂ ಅವರಿಗೆ ಯಂತ್ರಗಳ ವಿಚಾರದಲ್ಲಿ ಅತೀವ ಕುತೂಹಲ ಮತ್ತು ಆಸಕ್ತಿ ಇತ್ತೆಂದು ತಿಳಿದುಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ಒಂದು ಪತ್ರವನ್ನು ಗಮನಿಸಬಹುದು. ದಿನಾಂಕ ೨೮. ಮಾರ್ಚ್, ೧೯೫೨ ರಂದು ಹಸಂಬಾಯ್ ಜೇತಾ ಬಾಂಬೆಯ ಮಾರಾಟ ನಿರ್ದೇಶಕರು ಒಂದು ಪತ್ರವನ್ನು ಕಳುಹಿಸಿದ್ದರು. ಎಲ್ಲಾ ವಿಧದ ಯಂತ್ರಗಳ ಬಗೆಗೆ ವಿವರ, ಬೆಲೆಪಟ್ಟಿ, ಬಳಕೆಯ ವಿಚಾರದಲ್ಲಿ ಚಿದಂಬರಂ ಅವರಿಗೆ ಆಸಕ್ತಿ ಇರುವುದು ನಿಜಕ್ಕೂ ಶ್ಲಾಘನೀಯ ಎಂಬ ಪ್ರಶಂಸೆಯ ಮಾತುಗಳನ್ನು ಆ ಪತ್ರದಲ್ಲಿ ತಿಳಿಸಲಾಗಿದೆ. ಹಾಗೆಯೇ ಜ್ಯೋತಿ ಲಿಮಿಟೆಡ್ ಬರೋಡದ ಮಾಲೀಕರಾದ ಸಿ.ಎನ್. ಪ್ರಧಾನ್ ಎಂಬುವವರು ೧೦. ಮೇ ೧೯೪೮ರ ಪತ್ರದಲ್ಲಿ ಈ ವಿಚಾರವಾಗಿಯೇ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ.

ದಿನಾಂಕ ೧. ೧೦. ೧೯೪೯ರಷ್ಟೊತ್ತಿಗೆ ಜಪಾನಿನ ಸಿಲಿಂಡರ್ ಮೆಶಿನ್ ಅನ್ನು ತರಿಸಿಕೊಳ್ಳುವಂತೆ ಕಾವ್ಯಾಲಯಕ್ಕೆ ಅನೇಕ ಶಿಫಾರಸ್ಸು ಪತ್ರಗಳು ಬರುತ್ತಿದ್ದವು. ಕಾವ್ಯಾಲಯದಿಂದ ಪ್ರಕಟವಾಗುವ ಕೃತಿಗಳಿಗೆ ಮುದ್ರಣ ಯಂತ್ರಗಳನ್ನು ಕಳುಹಿಸುವಲ್ಲಿ ಕಂಪೆನಿಗಳು ಪೈಪೋಟಿ ನಡೆಸುತ್ತಿದ್ದವು ಮತ್ತು ಉಚಿತ ಭಾಗಗಳನ್ನು ನೀಡಲು ಮುಂದೆ ಬರುತ್ತಿದ್ದವು ಎಂಬ ವಿಚಾರಗಳು ಅಧ್ಯಯನ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ. ಯಂತ್ರಗಳ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳುವಾಗ ಯಾವ ಯಾವ ವಿವರಗಳನ್ನು ಬಯಸುತ್ತಿದ್ದರು ಎಂಬುದನ್ನು ಒಂದು ಪತ್ರದ ಮೂಲಕ ತಿಳಿದುಕೊಳ್ಳಬಹುದು. ದ ಯುನಿಟೆಡ್ ಪ್ರಿಂಟರ್ಸ್ ಸಿಂಡಿಕೇಟ್ ಲಿಮಿಟೆಡ್. ಮದ್ರಾಸ್‌ನ ನಿರ್ದೇಶಕರು ಕಳುಹಿಸಿದ ಮಾಹಿತಿ ಕೈಪಿಡಿ. ಚುಮಾ ಚಂಡ್ಲರ್

ಪ್ರಿಂಟಿಂಗ್ ಮೆಶಿನ್ ಯಾವ ಯಾವ ಅಳತೆ, ಆಕಾರದಲ್ಲಿದೆ ಎಂದು ತಿಳಿಸಿದ್ದಾರೆ. Folio 8" X 12", Crown folio 10" X 11", demmy folio 12X18, double crown model yp – 2.

ಚಿದಂಬರಂ ವ್ಯವಹಾರಗಳು ಪುಸ್ತಕೋದ್ಯಮ, ಯಂತ್ರೋದ್ಯಮದಲ್ಲಿ ಸಾಕಷ್ಟು ಜನಮನ್ನಣೆ ಗಳಿಸಿದ ಮೇಲೆ ಬೇರೆ ಬೇರೆ ಕ್ಷೇತ್ರದ ಗಣ್ಯ ವ್ಯಕ್ತಿಗಳು ಇವರನ್ನು ಗುರುತಿಸಲಾರಂಭಿಸಿದರು. ಇದಕ್ಕೆ ಪೂರಕವಾಗಿ ಒಂದು ವಿಚಾರವನ್ನು ಸ್ಪಷ್ಟಪಡಿಸುವುದು ಸೂಕ್ತವೆನಿಸುತ್ತದೆ. ಪ್ರೊಜೆಕ್ಷನ್ ಆಫ್ ಇಂಡಿಯಾ ಪಿಕ್ಚರ್ಸ್‌ನ ನಿರ್ದೇಶಕರು ಮದ್ರಾಸ್‌ನಿಂದ ದಿನಾಂಕ - ೨ - ಫೆಬ್ರವರಿ ೧೯೫೨ ರಂದು ಒಂದು ಪತ್ರ ಕಳುಹಿಸುತ್ತಾರೆ. ಅದರಲ್ಲಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಒಂದು ಸಿನಿಮಾವನ್ನು ಮಾಡೋಣ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದರ ಮೂಲಕ ಉದ್ಯಮಕ್ಕೆ ಪ್ರಚಾರವನ್ನು ಮಾಡಬಹುದು ಎಂಬ ಉದ್ದೇಶದೊಂದಿಗೆ ಈ ಪತ್ರವ್ಯವಹಾರ ನಡೆಸುತ್ತಾರೆನ್ನಬಹುದು. ಮಾಧ್ಯಮಗಳು ಪ್ರಬಲವಾದ ಬೆಳವಣಿಗೆಯಾಗದಿದ್ದ ಸಂದರ್ಭದಲ್ಲಿ ಪ್ರಚಾರಕ್ಕಾಗಿ ಈ ಮಾರ್ಗದ ಆಲೋಚನೆ ಮಾಡಿದ್ದರೆನ್ನಬಹುದು.

ಕೇವಲ ಮುದ್ರಣಕ್ಕೆ ಸಂಬಂಧಿಸಿದ ಯಂತ್ರಗಳನ್ನು ತರಿಸಿಕೊಳ್ಳುವಲ್ಲಿ, ಮಾಹಿತಿ ಸಂಗ್ರಹಿಸುವಲ್ಲಿ ಆಸಕ್ತಿ ಹೊಂದಿರಲಿಲ್ಲ. ಕಾಗದದ ಡ್ರೆಸ್ಸಿಂಗ್, ಫಿನಿಶಿಂಗ್, ಸ್ಟೆಲ್ಲಿಂಗ್ ಮೆಶಿನ್, ಬೈಂಡಿಂಗ್, ರುಡ್ಲಿಂಗ್‌ಗೆ ಸಂಬಂಧಿಸಿದ ಯಂತ್ರಗಳನ್ನು ತರಿಸಿಕೊಳ್ಳುತ್ತಿದ್ದರು. ಸಿಂಪ್ಸನ್ ಆ್ಯಂಡ್ ಕೋ. ಲಿಮಿಟೆಡ್. ಮದ್ರಾಸ್‌ನಿಂದ ಟ್ರಾಲೀಸ್ ತರಿಸಿಕೊಂಡಿದ್ದರು. ಫೆಬ್ರವರಿ ೭ ೧೯೫೨ ರಂದು ಕಳುಹಿಸಿದ ಪತ್ರದಲ್ಲಿ ಈ ವಿಚಾರವಿದೆ. ಪುಸ್ತಕಗಳನ್ನು ಸಾಗಿಸಲು ಈ ಫ್ಲಾಟ್‌ಫಾರ್ಮ್ ಟ್ರಕ್‌ನ ಅವಶ್ಯಕತೆ ಪ್ರಕಾಶನಕ್ಕೆ ಅಗತ್ಯವಾಗಿ ಇತ್ತು.

ಮುದ್ರಣಾಲಯವನ್ನು, ಪ್ರಕಾಶನದ ಕಟ್ಟಡವನ್ನು ಸ್ವಚ್ಛವಾಗಿಡುವ ವಿಚಾರದಲ್ಲಿ ಆಧುನಿಕ ಉಪಕರಣಗಳ ಬಗ್ಗೆ ಸದಾ ಕುತೂಹಲಿಯಾಗಿರುತ್ತಿದ್ದರು. ಪತ್ರಿಕೆಗಳಲ್ಲಿ ಬಂದ ಜಾಹೀರಾತನ್ನು ಗಮನಿಸಿ ಸ್ಟುರ್ಟೆವಾಂಟ್ ವಾಕ್ಯೂಮ್ ಕ್ಲೀನಿಂಗ್ ಯಂತ್ರದ ಮಾಲೀಕರಿಗೆ ಡಿಸೆಂಬರ್ ೨೭. ೧೯೫೧ರಂದು ಪತ್ರ ಬರೆದಿದ್ದರು. ಗನಾನ್ ಡಂಕರ್ಲಿ ಆ್ಯಂಡ್ ಕೋ. ಲಿಮಿಟೆಡ್.ನ ಮಾಲೀಕರಾದ ಆರ್. ಡಬ್ಲ್ಯೂ. ಜೇಮ್ಸ್ ಅವರು ಕಾವ್ಯಾಲಯಕ್ಕೆ ಇಂಡಸ್ಟ್ರಿಯಲ್ ಟೈಪ್ ವಾಕ್ಯೂಮ್ ಕ್ಲೀನರ್ ಬಗ್ಗೆ ಸಚಿತ್ರ ಮಾಹಿತಿಯನ್ನು ಪತ್ರದ ಜೊತೆಗೆ ದಿನಾಂಕ ೩೧. ಡಿಸೆಂಬರ್ ೧೯೫೧ ರಂದು ಕಳುಹಿಸಿದ್ದಾರೆ. ಕಾವ್ಯಾಲಯ ಪುಸ್ತಕಗಳನ್ನು ಸ್ವತಃ ಮುದ್ರಣ ಮಾಡುವ ಕಾರ್ಯವನ್ನು ಕೈಗೊಂಡಿರಲಿಲ್ಲ. ಆದರೂ ಅವರು ಮುದ್ರಣ ಯಂತ್ರಗಳ ಬಗ್ಗೆ ಮುದ್ರಣಾಲಯಕ್ಕೆ ಪೂರಕವಾದ ಯಂತ್ರಗಳ ಬಗ್ಗೆ ವಿವರಗಳನ್ನು ತಿಳಿದುಕೊಳ್ಳಲು ಸದಾ ಕುತೂಹಲಿಯಾಗಿರುತ್ತಿದ್ದರು.

ಕೃತಿಗಳು ಒಳ್ಳೆಯ ಆಧುನಿಕ ಯಂತ್ರಗಳಲ್ಲಿ ಮುದ್ರಣವಾಗಬೇಕು. ಇದರಿಂದ ಕೃತಿಗಳ ಸೌಂದರ್ಯ ಹೆಚ್ಚಾಗುತ್ತದೆ. ಒಳ್ಳೆಯ ಗುಣಮಟ್ಟವನ್ನು ಕಾಯ್ದುಕೊಳ್ಳಬಹುದು ಎಂಬ ಹಿನ್ನೆಲೆಯಲ್ಲಿ ಈ ಕೆಲಸ ಮಾಡುತ್ತಿದ್ದರು. ಕಾವ್ಯಾಲಯದಿಂದ ಪ್ರಕಟಗೊಂಡ ಎಲ್ಲಾ ಕೃತಿಗಳು ಸಾಮಾನ್ಯವಾಗಿ, ಹೆಚ್ಚಾಗಿ ವೆಸ್ಲಿಯನ್ ಪ್ರೆಸ್‌ನಲ್ಲಿ, ಮೈಸೂರು ಪ್ರಿಂಟಿಂಗ್ ಹೌಸ್‌ನಲ್ಲಿ ಮುದ್ರಿಸಲ್ಪಡುತ್ತಿದ್ದವು. ಈಗ ಹರ್ಷ ಹಾಗೂ ಶಕ್ತಿಪ್ರೆಸ್‌ನಲ್ಲಿ ಮುದ್ರಣಗೊಳ್ಳುತ್ತಿವೆ.

ಯಂತ್ರಗಳ ಬಗ್ಗೆ ಕಾವ್ಯಾಲಯ ತಳೆದ ನಿಲುವುಗಳನ್ನು ಸಮಗ್ರವಾಗಿ ಗ್ರಹಿಸಿದಾಗ ಕೆಲವೊಂದು ವಿಚಾರಗಳು ಗ್ರಹಿಕೆಗೆ ಬರುತ್ತವೆ. ವಿದೇಶಗಳಲ್ಲಿ ಪತ್ರಿಕೋದ್ಯಮ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳವಣಿಗೆಯನ್ನು ಪಡೆದುಕೊಂಡಿದ್ದ ಕಾಲದಲ್ಲಿ ಭಾರತದ ಪುಸ್ತಕೋದ್ಯಮ ಅದರಲ್ಲೂ ಕನ್ನಡ ಪುಸ್ತಕೋದ್ಯಮ ಇನ್ನು ಹೆಜ್ಜೆ ಇಡುತ್ತಿತ್ತು. ಅಂತರರಾಷ್ಟ್ರೀಯ ಹಂತದಲ್ಲಿ ಕೈಜೋಡಿಸಬೇಕೆಂದರೆ ಬಹಳ ಶ್ರಮ ಹಾಕಬೇಕಿತ್ತು. ಕಾವ್ಯಾಲಯ ಆ ಕಾರಣಕ್ಕಾಗಿಯೇ ಪುಸ್ತಕೋದ್ಯಮ ವಿಚಾರದಲ್ಲಿ ಅಂತರರಾಷ್ಟ್ರೀಯ ಕಂಪೆನಿಗಳ ಜೊತೆ ಪ್ರಕಾಶಕರ ಜೊತೆ ಸಂಬಂಧವನ್ನು ಇಟ್ಟುಕೊಂಡಿರುವುದೆಂಬುದು ಸ್ಪಷ್ಟವಾಗುತ್ತದೆ. ಅಂತರರಾಷ್ಟ್ರೀಯ ಪುಸ್ತಕೋದ್ಯಮದ ಜೊತೆಗೆ ಕನ್ನಡ ಪುಸ್ತಕೋದ್ಯಮ ಬೆಳೆಯಬೇಕೆಂಬ ಹಿನ್ನೆಲೆಯಲ್ಲಿ ಪ್ರಕಾಶಕರು ಕೆಲಸ ಮಾಡಿದರು.

ಅಡಿಟಿಪ್ಪಣಿಗಳು :

೧. (ಸಂ) ಹಾ.ಮಾ.ನಾಯಕ, ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ, ೧೯೭೯, ಪುಟಸಂಖ್ಯೆ - ೧೧೯೯, ೧೧೭೦

೨. ಡಿ.ಎಸ್. ಗುರುಬಸಪ್ಪ, ಬಿ.ಪಿ. ಮಲ್ಲಿರಾಜೆ ಅರಸು, ಮುದ್ರಣ ಕಲೆ [ಸ್ಥೂಲ ಪರಿಚಯ] ಮೈಸೂರು ವಿಶ್ವವಿದ್ಯಾನಿಲಯ. ೧೯೯೦. ಪುಟ-೧೧೨.

೪.೨. ಪ್ರಕಾಶನದ ಪ್ರೇರಣೆಯ ವಿಚಾರಗಳು

ಒಂದು ಕೃತಿಯನ್ನು ಒಬ್ಬ ವ್ಯಕ್ತಿ ಪ್ರಕಟಿಸಬೇಕಾದರೆ ಅದಕ್ಕೆ ಪೂರಕವಾದಂತಹ ಅನೇಕ ವಿಚಾರಗಳನ್ನು ತಿಳಿದಿರಬೇಕು. ಜೊತೆಗೆ ಪ್ರಕಾಶಮೋದ್ಯಮದ ಪಕ್ಷಿನೋಟ ಅವನಿಗಿರಬೇಕು. ಅದಕ್ಕಾಗಿ ಅವನು ಪೂರ್ವ ತಯಾರಿಯನ್ನು ಮಾಡಿಕೊಳ್ಳಬೇಕಾಗುತ್ತದೆ. ಕಾವ್ಯಾಲಯ ಪ್ರಕಾಶಕರಾದ ಕೂಡಲಿ ಚಿದಂಬರಂ ಅವರು ಕೂಡ ಪುಸ್ತಕ ಪ್ರಕಟಣೆಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಪ್ರಪಂಚದಾದ್ಯಂತ ಸಂಗ್ರಹಿಸಿಕೊಂಡಿದ್ದರು. ಇದಕ್ಕೆ ಪೂರಕವಾಗಿ ಅವರು ಸಂಗ್ರಹಿಸಿದ ಮುದ್ರಣ ಮಾಹಿತಿ ಪುಸ್ತಕವನ್ನು ಗಮನಿಸಬಹುದು. 'ದಿ ಬುಕ್ ಟ್ರೇಡ್' ಎಂಬ ಪುಸ್ತಕವನ್ನು ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್‌ನಿಂದ ತರಿಸಿಕೊಂಡಿದ್ದರು. ಅದರಲ್ಲಿ ಮುದ್ರಣಕ್ಕೆ ಸಂಬಂಧಿಸಿದಂತೆ ಹಲವಾರು ವಿಚಾರಗಳ ಜೊತೆಗೆ, ಇತರ ವಿಷಯಗಳು ಕೂಡ ಇವೆ.

'ಪ್ರಿಂಟಿಂಗ್ ಆಫ್ ಬೈಂಡಿಂಗ್' ಎಂಬ ಅಧ್ಯಾಯದಲ್ಲಿ ಜೋಡಣೆ, ಪ್ರತಿ ತಿದ್ದುಪಡಿ, ಮುದ್ರಣ, ರಟ್ಟುಕಟ್ಟುವುದು, ಮುದ್ರಣಕ್ಕೆ ಸಂಬಂಧಿಸಿದ ಇತರ ಕೆಲಸಗಳ ವಿವರಣೆಗಳಿವೆ. ಬುಕ್ ಸೆಲ್ಲಿಂಗ್ ಎಂಬ ಅಧ್ಯಾಯದಲ್ಲಿ ಮಾರಾಟ ಮಳಿಗೆಗಳಿಗೆ ಪುಸ್ತಗಳನ್ನು ಕಳುಹಿಸುವುದು, ಅಂಚೆಯ ಮೂಲಕ ಪುಸ್ತಕಗಳನ್ನು ಕಳುಹಿಸುವುದು, ಪುಸ್ತಕ ಪ್ರಚಾರ, ಗ್ರಂಥಾಲಯಗಳಿಗೆ ಕಳುಹಿಸುವುದು, ಅಂಚೆಯ ಮೂಲಕ ಪುಸ್ತಗಳನ್ನು ಕಳುಹಿಸುವುದು, ಅಂಚೆಯ ಮೂಲಕ ಪುಸ್ತಗಳನ್ನು ಕಳುಹಿಸುವುದು, ಪುಸ್ತಕ ಪ್ರಚಾರ, ಗ್ರಂಥಾಲಯಗಳಿಗೆ ಕಳುಹಿಸುವುದು, ಪುಸ್ತಗಳಿಗೆ ಚಂದಾದಾರರನ್ನು ಮಾಡಿಕೊಳ್ಳುವ ಬಗ್ಗೆ ವಿವರಣೆಗಳಿವೆ. 'ಪಬ್ಲಿಷಿಂಗ್' ಎಂಬ ಅಧ್ಯಾಯದಲ್ಲಿ ಸಂಪಾದನೆ, ಉತ್ಪಾದನೆ, ಪ್ರಚಾರ, ಸಂಗ್ರಹಣೆ, ಮಾರಾಟ, ಆರ್ಥಿಕ ನಿರ್ವಹಣೆ, ಪ್ರಕಟಣೆಗೆ ಕೃತಿಯನ್ನು ಹೇಗೆ ಆಯ್ಕೆ ಮಾಡಿಕೊಳ್ಳಬೇಕು? ಎಂಬ ವಿಚಾರಗಳನ್ನು, 'ಪ್ರಾಕ್ಟೀಸ್' ಎಂಬ ಅಧ್ಯಾಯದಲ್ಲಿ ಪ್ರಕಾಶನಕ್ಕೆ ಸಂಬಂಧಿಸಿದ ವಿಚಾರಗಳನ್ನು ಆ ಕೃತಿಯಲ್ಲಿ ವಿವರಿಸಲಾಗಿತ್ತು. ಹಾಗೆಯೇ 'ಪಬ್ಲಿಷರ್ಸ್ ಮಂತ್ಲಿ' ಎಂಬ ಪತ್ರಿಕೆಯನ್ನು ಕಲ್ಕತ್ತಾದಿಂದ ತರಿಸಿಕೊಂಡು, ಅನೇಕ ವಿಷಯಗಳನ್ನು ಸಂಗ್ರಹಿಸುತ್ತಿದ್ದರು. ಹೀಗೆ ಪ್ರಕಾಶನಕ್ಕೆ ಸಂಬಂಧಿಸಿದಂತೆ ಎಲ್ಲೆಲ್ಲಿ ಮಾಹಿತಿಗಳು ಸಿಗುತ್ತವೆ ಎಂದು ಸದಾ ಹುಡುಕುತ್ತಿದ್ದರು. ಅವರ ಕೆಲಸದಲ್ಲಿನ ಉತ್ಸಾಹವು ಪ್ರತಿಯೊಬ್ಬ ವ್ಯಕ್ತಿಗೂ ಆದರ್ಶವಾಗುವುದು ಎಂಬುದರಲ್ಲಿ ಎರಡು ಮಾತಿಲ್ಲ. ಪ್ರಕಾಶನಕ್ಕೆ ಸಂಬಂಧಿಸಿದಂತೆ ದೇಶದ ಅಥವಾ ಪ್ರಪಂಚದ ಯಾವುದೇ ಭಾಗದಲ್ಲಿ ಸಮ್ಮೇಳನಗಳು ಮತ್ತು ವಿಚಾರ ಸಂಕಿರಣಗಳನ್ನು ಆಯೋಜಿಸಲಾಗಿದ್ದರೆ ಅಲ್ಲಿಗೆ ಚಿದಂಬರಂ ಹೋಗುತ್ತಿದ್ದರು. ಆ ಕಾರ್ಯಕ್ರಮಗಳ ನಿರ್ವಹಣಾಧಿಕಾರಿಗಳು ಕಾವ್ಯಾಲಯದ ಆಸಕ್ತಿ, ಉತ್ಸಾಹ, ಕುತೂಹಲವನ್ನು ಅರಿತು ಕಾರ್ಯಕ್ರಮಗಳಿಗೆ ಅಸ್ಥಾನ

ನೀಡುತ್ತಿದ್ದರು. ಮಿನಿಸ್ಟ್ರಿ ಆಫ್ ಎಜುಕೇಶನ್ ಆ್ಯಂಡ್ ರಿಸರ್ಚ್, ನ್ಯೂ ಡೆಲ್ಲಿ ಇವರು ಸ್ಪೆಷಲ್ ಟ್ರೈನಿಂಗ್ ಕೋರ್ಸ್ ಇನ್ ಟೆಕ್ನಿಕ್ಸ್ ಆಫ್ ಬುಕ್ ಇಲ್ಲುಸ್ಟ್ರೇಷನ್ ಎಂಬ ಕಾರ್ಯಕ್ರಮವನ್ನು ಡಿಸೆಂಬರ್, ೧೯೫೭ ರಂದು ಆಯೋಜಿಸಿ ಕಾವ್ಯಾಲಯಕ್ಕೆ ಆಹ್ವಾನ ನೀಡಿದ್ದರು. ಹಾಗೆಯೇ ೧೯೫೮ರ ಜನವರಿ ೩೧ ರಿಂದ ಫೆಬ್ರವರಿ ೨ರವರೆಗೆ ಹೈದರಾಬಾದ್‌ನಲ್ಲಿ 'Book Production' ವಿಷಯದಬಗ್ಗೆ ಮದ್ರಾಸ್‌ನ 'Book Industry Council of South India' ಸಂಸ್ಥೆಯು 'Training course on book selling ಎಂಬ ವಿಚಾರ ಸಂಕಿರಣಕ್ಕೆ ಆಹ್ವಾನವನ್ನು ನೀಡಿದ್ದರು.

ಹೀಗೆ ಪ್ರಪಂಚದ ವಿದ್ಯಮಾನಗಳನ್ನು ಯಾವ ಯಾವ ಮೂಲಗಳಿಂದ ತಿಳಿಯಬಹುದೋ ಎಲ್ಲಾ ಮೂಲಗಳಿಂದ ತಿಳಿಯುವಂತಹ ಪ್ರವೃತ್ತಿ ಕಾವ್ಯಾಲಯದ ಪ್ರಕಾಶಕರದು. ಇವರ ಸಂಸ್ಥೆ ಎಷ್ಟರ ಮಟ್ಟಿಗೆ ಆದರ್ಶಮಯವಾಗಿತ್ತು ಎಂದರೆ India book house, Bombay ಯ ವ್ಯವಸ್ಥಾಪಕರು ದಿನಾಂಕ. ೧೭. ಫೆಬ್ರವರಿ, ೧೯೫೮ ರಂದು ಪತ್ರ ಬರೆದಿದ್ದರು. ಅದರಲ್ಲಿ ಕನ್ನಡ ಪುಸ್ತಕಗಳನ್ನು ಮಾರಾಟ ಮಾಡಲು ನಿಮ್ಮ ನಿಯಮಗಳನ್ನು ನೋಡಬೇಕು ಎಂದು ಕೇಳಿದ್ದಾರೆ. ಇದರ ಮೂಲಕ ತಿಳಿಯುವ ವಿಚಾರವೇನೆಂದರೆ ಕಾವ್ಯಾಲಯ ಅನುಸರಿಸುತ್ತಿದ್ದಂತಹ ನೀತಿ ನಿಯಮಗಳು ಪಾರದರ್ಶಕವಾಗಿದ್ದವು. ಅವುಗಳು ಇನ್ನೊಬ್ಬರಿಗೆ ಮಾದರಿಯಾಗಿರುತ್ತಿದ್ದವು. ಕೇವಲ ಕನ್ನಡ ಭಾಷೆಯ ಕೃತಿಗಳೊಂದಿಗೆ ಮಾತ್ರವಲ್ಲದೆ ದೇಶದ ಎಲ್ಲಾ ಭಾಷೆಗಳ ಕೃತಿಗಳೊಂದಿಗೂ ಸ್ಪರ್ಧಿಸುವ ಸಾಮರ್ಥ್ಯ ಕಾವ್ಯಾಲಯದ ಪ್ರಕಟಣೆಗಳಲ್ಲಿತ್ತು. ಈ ಕಾರಣದಿಂದಾಗಿಯೇ ದೊಡ್ಡ ದೊಡ್ಡ ಕಾರ್ಯಕ್ರಮಗಳು ನಡಿಯುವ ಸ್ಥಳಗಳಲ್ಲಿ ಪುಸ್ತಕ ಪ್ರದರ್ಶನ ನೀಡಲು ಆಹ್ವಾನ ನೀಡುತ್ತಿದ್ದರು.

ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಸ್ ಆಫ್ ಇಂಡಿಯಾ, ನ್ಯೂಡಿಲ್ಲಿ. ಇವರು ಆ ಸಂಸ್ಥೆಯ ೨೫ನೇ ವರ್ಷದ ಸಂಭ್ರಮದ ಸಮಾರಂಭದಲ್ಲಿ ಪುಸ್ತಕ ಪ್ರದರ್ಶನ ನೀಡಬೇಕೆಂದು ೫. ಡಿಸೆಂಬರ್ ೧೯೬೦ರಂದು ಆಹ್ವಾನ ನೀಡಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೃತಿಗಳನ್ನು ಪ್ರದರ್ಶನ ನೀಡಬೇಕೆಂದು ತಿಳಿಸಿದ್ದರು. ನಿಮ್ಮ ಆಗಮನದ ಹಿಂದೆ ನಮ್ಮ ಯಶಸ್ಸಿದೆ ಎಂಬ ಪ್ರಶಂಸೆಯ ಮಾತುಗಳನ್ನು ಹೇಳಿ, ಕಾವ್ಯಾಲಯದ ಘನತೆಯನ್ನು ಎತ್ತಿ ನಿಲ್ಲಿಸಿದ್ದಾರೆ. ಜಗತ್ತುಗಳ ಹುಟ್ಟು ಸಾವು - ಆರ್. ಎಲ್. ನರಸಿಂಹಯ್ಯ, ಹಾಲು ಅದರ ಉತ್ಪನ್ನಗಳು - ಎಂ. ಆರ್ ಚಂದ್ರಶೇಖರ, ಬಿ.ವಿ. ಸುಬ್ಬರಾಯ, ರೈಟ್ ಸಹೋದರರು ಹೊಯ್ಸಳ ಈ ಕೃತಿಗಳನ್ನು ಪುಸ್ತಕ ಪ್ರದರ್ಶನಕ್ಕೆ ಕಳುಹಿಸಿರುವ ವಿಚಾರವಿದೆ. ಹಾಗೆಯೇ ಬುಕ್ ಇಂಡಸ್ಟ್ರಿ ಕೌನ್ಸಿಲ್ ಆಫ್ ಸೌತ್ ಇಂಡಿಯಾ, ಮದ್ರಾಸ್ ಇವರು ಕೂಡ ಪುಸ್ತಕ ಪ್ರದರ್ಶನಕ್ಕೆ ಆಹ್ವಾನ ನೀಡಿದ್ದರು. ಇದರಿಂದ ಪುಸ್ತಕಗಳಿಗೆ ಒಳ್ಳೆಯ ಪ್ರಚಾರ ಸಿಕ್ಕಂತಾಗುತ್ತಿತ್ತು.

ನೀಡುತ್ತಿದ್ದರು. ಮಿನಿಸ್ಟ್ರಿ ಆಫ್ ಎಜುಕೇಶನ್ ಆ್ಯಂಡ್ ರಿಸರ್ಚ್, ನ್ಯೂ ಡೆಲ್ಲಿ ಇವರು ಸ್ಪೆಷಲ್ ಟ್ರೈನಿಂಗ್ ಕೋರ್ಸ್ ಇನ್ ಟೆಕ್ನಿಕ್ಸ್ ಆಫ್ ಬುಕ್ ಇಲ್ಲುಸ್ಟ್ರೇಷನ್ ಎಂಬ ಕಾರ್ಯಕ್ರಮವನ್ನು ಡಿಸೆಂಬರ್, ೧೯೫೭ ರಂದು ಆಯೋಜಿಸಿ ಕಾವ್ಯಾಲಯಕ್ಕೆ ಆಹ್ವಾನ ನೀಡಿದ್ದರು. ಹಾಗೆಯೇ ೧೯೫೮ರ ಜನವರಿ ೩೧ ರಿಂದ ಫೆಬ್ರವರಿ ೨ರವರೆಗೆ ಹೈದರಾಬಾದ್‌ನಲ್ಲಿ 'Book Production' ವಿಷಯದಬಗ್ಗೆ ಮದ್ರಾಸ್‌ನ 'Book Industry Council of South India' ಸಂಸ್ಥೆಯು 'Training course on book selling ಎಂಬ ವಿಚಾರ ಸಂಕಿರಣಕ್ಕೆ ಆಹ್ವಾನವನ್ನು ನೀಡಿದ್ದರು.

ಹೀಗೆ ಪ್ರಪಂಚದ ವಿದ್ಯಮಾನಗಳನ್ನು ಯಾವ ಯಾವ ಮೂಲಗಳಿಂದ ತಿಳಿಯಬಹುದೋ ಎಲ್ಲಾ ಮೂಲಗಳಿಂದ ತಿಳಿಯುವಂತಹ ಪ್ರವೃತ್ತಿ ಕಾವ್ಯಾಲಯದ ಪ್ರಕಾಶಕರದು. ಇವರ ಸಂಸ್ಥೆ ಎಷ್ಟರ ಮಟ್ಟಿಗೆ ಆದರ್ಶಮಯವಾಗಿತ್ತು ಎಂದರೆ India book house, Bombay ಯ ವ್ಯವಸ್ಥಾಪಕರು ದಿನಾಂಕ. ೧೭. ಫೆಬ್ರವರಿ, ೧೯೫೮ ರಂದು ಪತ್ರ ಬರೆದಿದ್ದರು. ಅದರಲ್ಲಿ ಕನ್ನಡ ಪುಸ್ತಕಗಳನ್ನು ಮಾರಾಟ ಮಾಡಲು ನಿಮ್ಮ ನಿಯಮಗಳನ್ನು ನೋಡಬೇಕು ಎಂದು ಕೇಳಿದ್ದಾರೆ. ಇದರ ಮೂಲಕ ತಿಳಿಯುವ ವಿಚಾರವೇನೆಂದರೆ ಕಾವ್ಯಾಲಯ ಅನುಸರಿಸುತ್ತಿದ್ದಂತಹ ನೀತಿ ನಿಯಮಗಳು ಪಾರದರ್ಶಕವಾಗಿದ್ದವು. ಅವುಗಳು ಇನ್ನೊಬ್ಬರಿಗೆ ಮಾದರಿಯಾಗಿರುತ್ತಿದ್ದವು. ಕೇವಲ ಕನ್ನಡ ಭಾಷೆಯ ಕೃತಿಗಳೊಂದಿಗೆ ಮಾತ್ರವಲ್ಲದೆ ದೇಶದ ಎಲ್ಲಾ ಭಾಷೆಗಳ ಕೃತಿಗಳೊಂದಿಗೂ ಸ್ಪರ್ಧಿಸುವ ಸಾಮರ್ಥ್ಯ ಕಾವ್ಯಾಲಯದ ಪ್ರಕಟಣೆಗಳಲ್ಲಿತ್ತು. ಈ ಕಾರಣದಿಂದಾಗಿಯೇ ದೊಡ್ಡ ದೊಡ್ಡ ಕಾರ್ಯಕ್ರಮಗಳು ನಡಿಯುವ ಸ್ಥಳಗಳಲ್ಲಿ ಪುಸ್ತಕ ಪ್ರದರ್ಶನ ನೀಡಲು ಆಹ್ವಾನ ನೀಡುತ್ತಿದ್ದರು.

ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಆಫ್ ಇಂಡಿಯಾ, ನ್ಯೂಡಿಲ್ಲಿ. ಇವರು ಆ ಸಂಸ್ಥೆಯ ೨೫ನೇ ವರ್ಷದ ಸಂಭ್ರಮದ ಸಮಾರಂಭದಲ್ಲಿ ಪುಸ್ತಕ ಪ್ರದರ್ಶನ ನೀಡಬೇಕೆಂದು ೫. ಡಿಸೆಂಬರ್ ೧೯೬೦ರಂದು ಆಹ್ವಾನ ನೀಡಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೃತಿಗಳನ್ನು ಪ್ರದರ್ಶನ ನೀಡಬೇಕೆಂದು ತಿಳಿಸಿದ್ದರು. ನಿಮ್ಮ ಆಗಮನದ ಹಿಂದೆ ನಮ್ಮ ಯಶಸ್ಸಿದೆ ಎಂಬ ಪ್ರಶಂಸೆಯ ಮಾತುಗಳನ್ನು ಹೇಳಿ, ಕಾವ್ಯಾಲಯದ ಘನತೆಯನ್ನು ಎತ್ತಿ ನಿಲ್ಲಿಸಿದ್ದಾರೆ. ಜಗತ್ತುಗಳ ಹುಟ್ಟು ಸಾವು - ಆರ್. ಎಲ್. ನರಸಿಂಹಯ್ಯ, ಹಾಲು ಅದರ ಉತ್ಪನ್ನಗಳು - ಎಂ. ಆರ್ ಚಂದ್ರಶೇಖರ, ಬಿ.ವಿ. ಸುಬ್ಬರಾಯ, ರೈಟ್ ಸಹೋದರರು ಹೊಯ್ಸಳ ಈ ಕೃತಿಗಳನ್ನು ಪುಸ್ತಕ ಪ್ರದರ್ಶನಕ್ಕೆ ಕಳುಹಿಸಿರುವ ವಿಚಾರವಿದೆ. ಹಾಗೆಯೇ ಬುಕ್ ಇಂಡಸ್ಟ್ರಿ ಕೌನ್ಸಿಲ್ ಆಫ್ ಸೌತ್ ಇಂಡಿಯಾ, ಮದ್ರಾಸ್ ಇವರು ಕೂಡ ಪುಸ್ತಕ ಪ್ರದರ್ಶನಕ್ಕೆ ಆಹ್ವಾನ ನೀಡಿದ್ದರು. ಇದರಿಂದ ಪುಸ್ತಕಗಳಿಗೆ ಒಳ್ಳೆಯ ಪ್ರಚಾರ ಸಿಕ್ಕಂತಾಗುತ್ತಿತ್ತು.

ಕಾವ್ಯಾಲಯದಿಂದ ಪ್ರಕಟಗೊಂಡ ಪುಸ್ತಕಗಳು ಕೇವಲ ಕನ್ನಡದ ಸಂದರ್ಭದಲ್ಲಿ ಮಾತ್ರವಲ್ಲದೆ ದೇಶದ ಇತರ ಭಾಷೆಗಳಲ್ಲಿ ಕೂಡ ಜನಮನ್ನಣೆ ಗಳಿಸಿದ್ದವು. ಬೇರೆ ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು, ಬೇರೆ ಭಾಷೆಯ ಸಾಹಿತಿಗಳು ಕಾವ್ಯಾಲಯದ ಪ್ರಕಟಣೆಗೆ ಸಾಕಷ್ಟು ಬೇಡಿಕೆಯನ್ನು ವ್ಯಕ್ತಪಡಿಸುತ್ತಿದ್ದರು. ಇದಕ್ಕೆ ಪೂರಕವಾಗಿ ಕಾವ್ಯಾಲಯ ಇತರೇ ರಾಜ್ಯಗಳಿಗೆ ಪುಸ್ತಕಗಳನ್ನು ರಫ್ತು ಮಾಡುತ್ತಿದ್ದ ವಿಚಾರಗಳನ್ನು ಗಮನಿಸಬಹುದು. ನ್ಯಾಷನಲ್ ಲೈಬ್ರರಿ ಕಲ್ಕತ್ತಾ ಎಸ್.ಎಸ್.ಎನ್. ಬುಕ್ ಡಿಪಾರ್ಟ್‌ಮೆಂಟ್, ಬೆಂಗಳೂರು, ಗೋಕಲೇ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್ ಬೆಂಗಳೂರು, ಹಿಗ್ಗಿನ್‌ಬೊತಮ್ಸ್ ಲಿಮಿಟೆಡ್. ಮದ್ರಾಸ್, ಮದ್ರಾಸ್ ಯುನಿವರ್ಸಿಟಿಯ ಲೈಬ್ರೇರಿಯನ್, ಸಾಹಿತ್ಯ ಅಕಾಡೆಮಿ ಡೆಲ್ಲಿ – ಈ ಸಂಸ್ಥೆಗಳಿಗೆ ಕೃತಿಗಳನ್ನು ರಫ್ತು ಮಾಡಲಾಗುತ್ತಿತ್ತು.

ಇವರಿಗೆ ಕನ್ನಡ ಭಾಷೆಯ ಕೃತಿಗಳನ್ನು ಮಾತ್ರ ಪ್ರಕಟಿಸುವ ಉದ್ದೇಶ ಇರಲಿಲ್ಲ. ಇತರೇ ದೇಶಗಳ, ರಾಜ್ಯಗಳ, ಭಿನ್ನ ಭಾಷೆಗಳ ಕೃತಿಗಳನ್ನು ಕನ್ನಡಿಗರಿಗೆ ಪರಿಚಯಿಸಬೇಕೆಂಬ ಬಯಕೆ ಇತ್ತು ಎಂಬುದು ಅಧ್ಯಯನ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ. ಇದಕ್ಕಾಗಿ ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಕಾಶನ ಮತ್ತು ಇತರೇ ಸಂಸ್ಥೆಗಳೊಂದಿಗೆ ಸಂಬಂಧವಿರಿಸಿಕೊಂಡಿದ್ದರು ಮ್ಯಾನ್ಸಿರಾಮ್ ರಾನೋಹರ್‌ಲಾಲ್ ಡಿಲ್ಲಿ, ಸಿಂಪ್ಕಿನ್ ಮಾರ್ಷಲ್ ಲಿಮಿಟೆಡ್. ಲಂಡನ್, ವಿಚಾರಸಾಹಿತ್ಯ ಲಿಮಿಟೆಡ್ ಬೆಂಗಳೂರು, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಮದ್ರಾಸ್ ದ ತಿಯೋಸೊಫಿಕಲ್ ಪಬ್ಲಿಷಿಂಗ್ ಹೌಸ್, ಮದ್ರಾಸ್, ಶ್ರೀ ಅರಬಿಂದೋ ಆಶ್ರಮ, ಪಾಂಡಿಚೆರ್ರಿ. ಸ್ಟಾಂಡರ್ಡ್ ಲಿಟರೇಚರ್ ಕೋ. ಪ್ರೈವೇಟ್ ಲಿಮಿಟೆಡ್ ಕಲ್ಕತ್ತಾ ಜಾರ್ಜ್ ಅಲೆನ್ ಆ್ಯಂಡ್ ಅನ್‌ವಿನ್ ಲಿಮಿಟೆಡ್. ಲಂಡನ್, ದ ಸೆಂಟ್ರಲ್ ಲೈಬ್ರೆರಿ, ಬಾಂಬೆ, ಮೆನಷಾ ಯು.ಎಸ್.ಎ, ಮಿಚಿಗಾಮ್ ಯುನಿವರ್ಸಿಟಿ ಪ್ರೆಸ್, ಮಿಚಿಗಾನ್ ಯು.ಎಸ್.ಎ, ಚೌಕಾಂಬ ಸಾನ್ಸ್ಕ್ರಿತ್ ಸೀರಿಸ್ ಆಫಿಸ್, ಬನಾರಸ್ ಈ ಎಲ್ಲಾ ಸಂಸ್ಥೆಗಳೊಂದಿಗೆ ಕೃತಿಗಳನ್ನು ತರಿಸಿಕೊಳ್ಳುವ ವಿಚಾರ ಮಾಡುತ್ತಿದ್ದರು. ನಿಘಂಟು, ವ್ಯಾಕರಣ, ತಂತ್ರಜ್ಞಾನ, ತಂತ್ರಜ್ಞಾನ ವಿಜ್ಞಾನ ಹೀಗೆ ಹಲವಾರು ವಿಷಯಗಳಿಗೆ ಸಂಬಂಧಪಟ್ಟ ಕೃತಿಗಳನ್ನು ಅಂಚೆ, ರೈಲುಗಳ ಮೂಲಕ ತರಿಸಿಕೊಳ್ಳುತ್ತಿದ್ದರು. ಒಂದೆಡೆ ಅವರೇ ಹೇಳುವಂತೆ ಗ್ರಂಥ ಪ್ರಕಟಣೆ ನಷ್ಟಸಂಭವವುಳ್ಳ ಉದ್ಯಮ. ಈ ವಿಷಯ ಅನುಭವವಾಗಿದ್ದರೂ, ಪ್ರಕಾಶನದ ಮೇಲೆ ನಂಬಿಕೆ ಇಟ್ಟಿದ್ದ ಓದುಗರಿಗೆ ಅನ್ಯಾಯವಾಗಬಾರದೆಂದು, ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದರೆನ್ನಬಹುದು. ಕಾವ್ಯಾಲಯ ಆ ಕಾಲದ ಉತ್ತಮ ಸಂಸ್ಥೆಯಾಗಿತ್ತು ಎಂಬ ಮಾತನ್ನು ಬಲಪಡಿಸಲು ನಮಗೆ ಇನ್ನೂ ಒಂದು ದಾಖಲೆ ಸಾಗುತ್ತದೆ. ಅದೇನೆಂದರೆ ಇಂಗ್ಲೆಂಡ್‌ನ ಪೆಂಗ್ವಿನ್ ಬುಕ್ ಲಿಮಿಟೆಡ್. ಮ್ಯಾನೇಜರ್ ಆಗಿದ್ದಂತಹ ಹೆಚ್.ಇ. ವಿಲಿಯಮ್ಸ್ ಅವರು ಕಾವ್ಯಾಲಯಕ್ಕೆ ನಮ್ಮ ಜೊತೆಗೆ ನಮ್ಮ ಸಂಸ್ಥೆಗೆ ಸಂಬಂಧಿಸಿದಂತೆ ಖಾತೆ ತೆರೆಯಿರಿ ಎಂದು ದಿನಾಂಕ – ೨೮. ಡಿಸೆಂಬರ್ – ೧೯೬೦ ರಂದು ಪತ್ರ ಬರೆದಿದ್ದರು.

೪.೩ ಕೃತಿಗಳ ಗುಣಮಟ್ಟ:

ವ್ಯವಹಾರದಲ್ಲಿ ಕೇವಲ ಹಣ ಮಾತ್ರ ಮುಖ್ಯವಾಗುವುದಿಲ್ಲ. ಪ್ರಾಮಾಣಿಕತೆ ಕೂಡ ಮುಖ್ಯವಾಗುತ್ತದೆ. ಓದುಗರು ಗುಣಮಟ್ಟದ ವಿಚಾರದಲ್ಲಿ ಇಟ್ಟಿರುವ ನಂಬಿಕೆಯನ್ನು ಪ್ರಕಾಶನ ಯಾವತ್ತೂ ಕಳೆದುಕೊಳ್ಳಬಾರದು. ಅದನ್ನು ಉಳಿಸಿಕೊಂಡು ಹೋಗಬೇಕು. ಹಣದ ಆಸೆಗೆ ಬಲಿಯಾಗಿ ಕಳಪೆ ವಿಚಾರವನ್ನು ಒಳಗೊಂಡಿರುವಂತಹ, ಬರವಣಿಗೆಯನ್ನು ಪ್ರಕಟಿಸುವುದು ಸರಿಯಲ್ಲ. ಕಾವ್ಯಾಲಯ ಒಳ್ಳೆಯ ಮೌಲ್ಯಗಳಿರುವ ಭಿನ್ನ ಭಿನ್ನ ವಿಚಾರಗಳನ್ನು ಒಳಗೊಂಡಿರುವ ಕೃತಿಗಳನ್ನು ಮಾತ್ರ ಪ್ರಕಟಿಸುತ್ತಿತ್ತು. ಕೃತಿ ಪ್ರಕಟಣೆಗೆ ಯೋಗ್ಯವಾದುದಲ್ಲ ಎಂದು ತಿಳಿದರೆ ಅದನ್ನು ಕೂಡಲೇ ತಿರಸ್ಕರಿಸುತ್ತಿತ್ತು. ಕೃತಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಕಾವ್ಯಾಲಯ ಸದಾ ಎಚ್ಚರವಾಗಿರುತ್ತಿತ್ತು. ವಾಮನ ಭಟ್ಟ ಎಂಬುವವರು ಚಿಹೊನ್ನ ನಿಮಿಷಟಿ ಎಂಬ ಕಿರುಬರಹವನ್ನು ಪ್ರಕಟಣೆಗೆ ಕಳುಹಿಸಿ ಬಹಳ ದಿನಗಳಾದರೂ ಪ್ರತಿಕ್ರಿಯೆ ಬಾರದಿದ್ದಾಗ ಇವರೇ ಕೃತಿ, ಮುದ್ರಣಕ್ಕೆ ಅರ್ಹವೋ? ಇಲ್ಲವೋ? ಎಂಬ ಕುತೂಹಲವನ್ನು ಪತ್ರದ ಮೂಲಕ ವ್ಯಕ್ತಪಡಿಸಿದ್ದರು. ಚಿದಂಬರಂ ಅದಕ್ಕೆ ಪ್ರತಿಯಾಗಿ ಪತ್ರ ಬರೆದು ಅದರಲ್ಲಿರುವ ದೋಷಗಳನ್ನು ತಿಳಿಸಿದ್ದರು. ವಚನಗಳ ಬಗೆಗೆ ಬರೆದ ಆ ಬರಹದಲ್ಲಿ ಸಾರ ಕಡಿಮೆ ಇದೆ. ದೇವರ ನಾಮವನ್ನು ಪದೇ ಪದೇ ಸ್ಮರಿಸುವ ಅನಿವಾರ್ಯತೆ ಇಲ್ಲ ಎಂದು ಹಸ್ತಪ್ರತಿಯನ್ನು ಹಿಂದಿರುಗಿಸಿದ್ದರು. ಈ ಬಗೆಯ ವಿಮರ್ಶಾ ಬರಹವನ್ನು ಪೂರಕವಾಗಿ ಲೇಖಕರು ಸ್ವೀಕರಿಸಿದ್ದರು. ಈ ಬಗೆಯ ವಿಮರ್ಶಾ ಬರಹವನ್ನು ಪೂರಕವಾಗಿ ಲೇಖಕರು ಸ್ವೀಕರಿಸಿದ್ದರು ಎಂಬುದು ಪತ್ರದ ಮೂಲಕ ತಿಳಿಯುತ್ತದೆ. ಅವರದೇ ಇನ್ನೊಂದು ಬರವಣಿಗೆ ಟಿಗುರಿ ಮತ್ತು ದಾರಿಟಿ ಎಂಬ ಕಾದಂಬರಿಯ ಹಸ್ತ ಪ್ರತಿಯನ್ನು ಕೂಡ ಹಿಂದಿರುಗಿಸಿ ವಿಮರ್ಶಾತ್ಮಕವಾದ ಪ್ರೋತ್ಸಾಹದಾಯಕವಾದ ಮಾತುಗಳನ್ನು ತಿಳಿಸಿದ್ದರು.

ಇನ್ನೂ ಕೆಲವು ಸಂದರ್ಭಗಳಲ್ಲಿ ಬರಹದ ಶೀರ್ಷಿಕೆಯನ್ನು ಕೂಡ ತಿರಸ್ಕರಿಸಿದ ಉದಾಹರಣೆಗಳಿವೆ. ಸಣ್ಣ ಸಣ್ಣ ಅಂಶಗಳನ್ನು ಕೂಡ ಚಿದಂಬರಂ ತಿದ್ದುಪಡಿ ಮಾಡುತ್ತಿದ್ದರು. ಸೇವಾ ನಮಿರಾಜ ಮಲ್ಲ ಎಂಬುವವರ ಕೃತಿಯ ಶೀರ್ಷಿಕೆ ಸರಿ ಇರಲಿಲ್ಲವೆಂದು ಚಿದಂಬರಂ ಆಕ್ಷೇಪ ಎತ್ತಿದ ವಿಚಾರ ೧೯. ೧. ೧೯೪೯ರ ಪತ್ರದಲ್ಲಿದೆ. ಸಾಕಷ್ಟು ಚರ್ಚೆಗಳಾದ ಮೇಲೆ 'ಭ್ರಮಾಧೀನ' ಎಂಬ ಹೆಸರನ್ನು ಪ್ರಕಾಶಕರೇ ಗೊತ್ತುಪಡಿಸಿದ್ದರು. ಇದನ್ನೆಲ್ಲಾ ಗಮನಿಸಿದಾಗ ಪ್ರಕಾಶನ ತನ್ನ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಎಷ್ಟೆಲ್ಲಾ ಶ್ರಮವಹಿಸುತ್ತದೆಂದು ತಿಳಿಯುತ್ತದೆ. ಪ್ರಕಾಶನದ ಇತರೇ ಕೆಲಸಗಳ ಜೊತೆಗೆ ಬರಹಗಳ ತಿದ್ದುಪಡಿಯನ್ನು ಕೂಡ ಪ್ರಕಾಶಕನೇ ಮಾಡಬೇಕು. ಗ್ರಂಥವನ್ನು ಪ್ರಕಟಿಸುವುದಕ್ಕೆ ಮೊದಲು ಅದನ್ನು ಓದಿ ವಿಮರ್ಶಿಸಿ ಪ್ರಕಟಣೆಗೆ ಅರ್ಹವೇ? ಅಲ್ಲವೇ? ಎಂಬುದನ್ನು ನಿರ್ಧರಿಸುವುದು ಬಹು ಜವಾಬ್ದಾರಿಯ ಕೆಲಸ.

ಪ್ರಕಾಶಕನಲ್ಲಿಗೆ ಸಾಧಾರಣವಾಗಿ ನಾನಾ ವಿಷಯಗಳಿಗೆ ಸಂಬಂಧಪಟ್ಟ ಕೃತಿಗಳು ಪ್ರಕಟಣೆಗಾಗಿ ಬರುತ್ತವೆ. ಈ ನಾನಾ ಬಗೆಯ ಗ್ರಂಥಗಳನ್ನು ವಿಮರ್ಶಿಸಲು ಪ್ರಕಾಶಕನು ಸಮರ್ಥನೆ? ಒಬ್ಬ ವ್ಯಕ್ತಿಯೇ ಸಾಹಿತ್ಯವನ್ನೂ, ಸಂಗೀತವನ್ನೂ, ಅಲಂಕಾರ ಶಾಸ್ತ್ರವನ್ನೂ, ತತ್ವಶಾಸ್ತ್ರವನ್ನೂ ಅರಿತು ಗ್ರಂಥಗಳನ್ನು ಪರೀಕ್ಷಿಸಲು ಸಾಧ್ಯವೇ? ಎಂಬುದು ಸಹಜವಾದ ಪ್ರಶ್ನೆ. "ಪ್ರಕಾಶಕನು ಕಷ್ಟಕರವಾದ ಅಥವಾ ಅಸಾಧ್ಯವಾದ ಕೆಲಸವನ್ನು ಸ್ವಯಂ ನಿರ್ವಹಿಸುತ್ತಾನೆ. ಇದು ತೀರ ಅಸಮರ್ಪಕ ಸ್ಥಿತಿ. ಪಾಶ್ಚಾತ್ಯ ದೇಶಗಳಲ್ಲಿ ಒಂದೊಂದು ಪ್ರತಿಯನ್ನು ಆ ವಿಭಾಗದ ವಿದ್ವಾಂಸನ ಪರೀಕ್ಷೆಗೆ ಒಳಪಡುತ್ತದೆ. ಅನೇಕ ಗ್ರಂಥಗಳು ಪ್ರಕಟಣೆಗೂ ಮೊದಲು ನಾಲ್ಕೈದು ಮಂದಿ ಪರೀಕ್ಷಕರ ಬಳಿ ಹೋಗಿ ಅಮೇಲೆ ಪ್ರಕಾಶಕನ ಸಮಾಲೋಚನೆಗೆ ಬರುತ್ತವೆ. ಆದರೆ ನಾವು ಕೊರತೆಯಿಂದ ಬಳಲುತ್ತಿದ್ದೇವೆ. ಗ್ರಂಥ ಪ್ರಕಟಣೆ ಯೋಗ್ಯವಾಗಿದೆಯೆ? ಇಲ್ಲವೆ? ಎಂದು ತಿಳಿಯಲು ಶೋಧಿಸಬೇಕಾಗುತ್ತದೆ. ಶೋಧನೆಗೆ ವೆಚ್ಚ ತಗಲುತ್ತದೆ. ಆ ವೆಚ್ಚ ಪುಸ್ತಕದ ಮೇಲೆ ಬೀಳುತ್ತದೆ. ಕೊಳ್ಳುವ ಜನರು ಅದನ್ನು ಭರಿಸಬೇಕು ಆದರೆ ಅದು ಸಾಧ್ಯವಿಲ್ಲ. ಈಗಿನ ಪುಸ್ತಕ ದರದಲ್ಲಿ ಇದು ಸಾಧ್ಯವಿಲ್ಲ.

ಹೀಗೆ ಪ್ರಕಟನೋದ್ಯಮದ ಮೊದಲ ಹಂತದಲ್ಲಿಯೇ ನಮ್ಮಲ್ಲಿ ದಕ್ಷತೆಗೆ ಧಕ್ಕೆ ಬರುವ ಸಂಭವವಿದೆ. ಈ ಬಗೆಯ ಪರಿಸ್ಥಿತಿಯಲ್ಲಿ ಪುಸ್ತಕದ ಯೋಗ್ಯತೆಯನ್ನು ಕಾಪಾಡಲು ಪ್ರಕಾಶಕರು ವಿಶೇಷ ಶ್ರಮವಹಿಸಬೇಕಾಗುತ್ತದೆ.[೧] ತಿಳಿದವರಿಂದ ವಿಷಯ ಸಂಗ್ರಹಿಸಿ ಪರಿಶೀಲಿಸುವ ಅನಿವಾರ್ಯತೆ ಒದಗುತ್ತದೆ. ಹಸ್ತಪ್ರತಿಯನ್ನು ತಿದ್ದುಪಡಿ ಮಾಡಿದ ಮೇಲೆ ಅದನ್ನು ಮುದ್ರಿಸುವ ಸಂದರ್ಭದಲ್ಲಿ ಕೂಡ ಪ್ರಕಾಶಕ ವಿಚಾರಗಳನ್ನು ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು. ಪುಸ್ತಕಗಳಿಗೆ ಯಾವ ಆಕಾರ ಸೂಕ್ತವಾಗಿ ಹೊಂದುತ್ತದೆ ಎಂಬುದನ್ನು ನಿರ್ಧರಿಸಬೇಕು. ಕ್ರೌನ್, ಡೆಮ್ಮಿ, ಫೂಲ್ಸ್‌ಕೇಪ್ ಮೊದಲಾದ ಆಕಾರಗಳಲ್ಲಿ ಕೃತಿಗಳು ಕಂಡುಬರುತ್ತವೆ. ಇಂಗ್ಲೀಷ್ ಭಾಷೆಯ ಕೃತಿಗಳ ಆಕಾರದಲ್ಲಿ ವೈವಿಧ್ಯತೆಗಳಿವೆ. ಕನ್ನಡದಲ್ಲಿ ಸಾಹಿತ್ಯದ ಹಾಗೆ ಇಲ್ಲ. ಆಯಾ ಪ್ರಕಾರಗಳಿಗೆ ಸಂಬಂಧಿಸಿದಂತೆ ವಿವಿಧ ಆಕಾರಗಳನ್ನು ಪಡೆದಿರುತ್ತವೆ. ಆದರೆ ಕನ್ನಡದಲ್ಲಿ ಎಲ್ಲಾ ಪ್ರಕಾರಗಳು ಎಲ್ಲಾ ಆಕಾರಗಳಲ್ಲಿ ಕಂಡುಬರುತ್ತವೆ. ಕೃತಿಗಳಿಗೆ ಆಕಾರವನ್ನು ನಿರ್ಧರಿಸುವುದು ಕೂಡ ಗುಣಮಟ್ಟವನ್ನು ಕಾಯ್ದುಕೊಂಡಂತೆಯೇ.

ಆಕಾರ ನಿರ್ಧರವಾದ ಮೇಲೆ ಕಾಗದದ ಬಳಕೆಯ ವಿಚಾರ ಮಾಡುತ್ತಿದ್ದರು. "ಒಂದು ಸಂದರ್ಭದಲ್ಲಿ ಹೊರದೇಶಗಳಿಂದ ಕಾಗದಗಳು ರಫ್ತಾಗುತ್ತಿದ್ದವು. ಆಗ ಬೇರೆ ಬೇರೆ ರೀತಿಯ ಕಾಗದಗಳನ್ನು ಆರಿಸಬಹುದಾಗಿತ್ತು, ಆದರೆ ಅದು ನಿಂತ ಮೇಲೆ ವೈವಿಧ್ಯಮಯ ಕಾಗದಗಳು ತಯಾರಾಗುವುದೇ ಇಲ್ಲ. ಇಂತಹ ಸಂದರ್ಭದಲ್ಲಿ ಪ್ರಕಾಶಕರಿಗೆ ಆಯ್ಕೆಯ ಸಂದರ್ಭವೇ ಇಲ್ಲ. ಪುಸ್ತಕಗಳನ್ನು ಕಲಾತ್ಮಕವಾಗಿ ತಯಾರಿಸುವುದು ಕಷ್ಟ"[೨], ಎಂದು ಚಿದಂಬರಂ ಅವರೇ ಹೇಳಿದ್ದಾರೆ. ಆದರೂ ಕಾವ್ಯಾಲಯ ಅಭಿರುಚಿಗೆ ತಕ್ಕಂತೆ ಕಾಗದವನ್ನು ಅದರ ಆಕಾರ, ರಚನೆ, ದಪ್ಪ, ಬಣ್ಣ, ದರ

ಇವುಗಳನ್ನು ಗಮನದಲ್ಲಿಟ್ಟುಕೊಂಡು ಪುಸ್ತಕಗಳನ್ನು ಪ್ರಕಟಿಸುತ್ತಿತ್ತು. ನಂತರ ಪುಸ್ತಕಗಳ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಕಾವ್ಯಾಲಯ ಅಗತ್ಯ ಏರ್ಪಾಡನ್ನು ಮಾಡುತ್ತಿತ್ತು. ಚಿತ್ರಕಾರರನ್ನು ಗುರುತಿಸಿ ಒಳ್ಳೆಯ ಕಲಾಕೃತಿಗಳನ್ನು ರಚಿಸುವಂತೆ ಪ್ರೇರೇಪಿಸುತ್ತಿದ್ದರು. ಒಂದು ಸನ್ನಿವೇಶಕ್ಕೆ ತಕ್ಕಂತೆ ಕಲೆಯನ್ನು ಕುಂಚದಲ್ಲಿ ಮೂಡಿಸಲು ಹೇಳುತ್ತಿದ್ದರು. ಕನ್ನಡದ ಸಂದರ್ಭದಲ್ಲಿ ಈ ಪ್ರಕ್ರಿಯೆ ಅಷ್ಟೇನು ಬೆಳೆಯಲಿಲ್ಲ ಎಂದು ಹೇಳಿ ಕಾರಣವನ್ನೂ ನೀಡುತ್ತಾರೆ. ಚಿತ್ರಗಳನ್ನು ಸೇರಿಸಿದರೆ ಕೃತಿಯ ಬೆಲೆ ಹೆಚ್ಚುತ್ತದೆ. ಹೆಚ್ಚು ಬೆಲೆಯನ್ನು ನೀಡಿ ಪುಸ್ತಕವನ್ನು ಕೊಳ್ಳುವವರು ನಮ್ಮಲಿಲ್ಲ ಎಂದು ವಿಷಾದ ವ್ಯಕ್ತಪಡಿಸುತ್ತಾರೆ.

ಉತ್ತಮವಾದ, ಆಕರ್ಷಕವಾದ, ಹೊದಿಕೆಯಿಂದ ಪುಸ್ತಕದ ಸೌಂದರ್ಯ, ಘನತೆಗಳು ಹೆಚ್ಚುತ್ತವೆ. ಸಾಮಾನ್ಯವಾಗಿ ಕೃತಿಗಳ ಹೊದಿಕೆಯನ್ನು ಪಿನ್ನು ಹೊಡೆದು, ಟಾಕಾ ಹಾಕಿ ಹೊದಿಕೆಯನ್ನು ಅಂಟಿಸುತ್ತಿದ್ದರು. ಕೆಲವೊಮ್ಮೆ ಸೆಕ್ಷನ್ ಹೊಲಿದು, ದಪ್ಪ ರಟ್ಟು ಹಾಕಿ ಕ್ಯಾಲಿಕೊ ಬಟ್ಟೆಯಿಂದ ಬೈಂಡು ಮಾಡುತ್ತಿದ್ದರು. ಈ ಬಗೆಯ ಹೊದಿಕೆ ಕಣ್ಣಿಗೆ ಅಂದವಾಗಿ, ಗಟ್ಟಿಯಾಗಿ, ಸುಲಭವಾಗಿ ಹುಳು ಹಿಡಿಯುತ್ತಿರಲಿಲ್ಲ. ಹೀಗೆ ಮುಂಜಾಗ್ರತೆ ವಹಿಸುತ್ತಿದ್ದರು. ....''ಪುಸ್ತಕಗಳ ಮಾರಾಟಕ್ಕೆ ಅನುಚಿತವಾದ, ನೀತಿಯುತವಲ್ಲದ ಮಾರ್ಗವನ್ನು ಅವರು ಎಂದೂ ತುಳಿದವರಲ್ಲ. ಜನರಲ್ಲಿ ಪುಸ್ತಕಗಳನ್ನು ಕೊಳ್ಳುವ ಅಭ್ಯಾಸವನ್ನು ಬೆಳೆಸಬೇಕು ಎಂಬ ಉದ್ದೇಶದಿಂದ ಅವರು ಬಹಳ ಕಾಲ ಅಳೆದು ಸುರಿದು ಕೊನೆಗೆ ಅದಕ್ಕಾಗಿಯೇ ಒಂದು ಕಾರನ್ನು ಕೊಂಡುಕೊಂಡದ್ದುಂಟು. ಅದರಿಂದ ನಿರೀಕ್ಷಿಸಿದಷ್ಟು ಮತ್ತು ಅದರ ಖರ್ಚನ್ನು ತೇಲಿಸುವಷ್ಟು ಪ್ರಯೋಜನವಾಗುವುದಿಲ್ಲವೆಂದು ಮನಗಂಡು ಅದನ್ನು ಮಾರಿದ್ದು ಆಯಿತು. 'ಈ ವಿಷಯದಲ್ಲಿ ಡಿ.ವಿ.ಜಿ. ಎಚ್ಚರಿಕೆ ಕೊಟ್ಟಿದ್ದರು. ಆದರೂ ಪ್ರಯತ್ನ ಮಾಡಿ ನೋಡೋಣ ಎನ್ನಿಸಿತು ಎಂದು ನನ್ನೊಡನೆ ಹೇಳಿದ್ದು ನೆನಪಿದೆ. ಗಂಭೀರವಾದ ವಿಚಾರ ಪ್ರಚೋದಕವಾದ ಪುಸ್ತಕಗಳನ್ನು ಮಾರುವುದು ಕಷ್ಟ ಎಂಬುದನ್ನು ಅವರು ಬಲ್ಲರು. ಆದರೂ ಇಂತಹ ಪುಸ್ತಕಗಳನ್ನು ನಮ್ಮ ಜನರ ಮುಂದೆ ಇಡಬೇಕು' ಎಂಬ ಕರ್ತವ್ಯ ದೃಷ್ಟಿಯಿಂದಲೇ ಅವರು ಎಷ್ಟೋ ಕೃತಿಗಳನ್ನು ಪ್ರಕಟಿಸಿದರು. ಇದಕ್ಕೆ ದೊಡ್ಡ ಉದಾಹರಣೆಯೆಂದರೆ, ಪ್ರೊ.ಎಂ. ಹಿರಿಯಣ್ಣನವರ ಇಂಗ್ಲೀಷ್ ಪುಸ್ತಕಗಳ ಪ್ರಕಟಣೆ''. ಕಲೆ ಜೀವನ, ತತ್ವಗಳಿಗೆ ಸಂಬಂಧಿಸಿದ ಹಿರಿಯಣ್ಣನವರ ಇಂಗ್ಲೀಷ್ ಪುಸ್ತಕಗಳನ್ನು ಪ್ರಕಟಿಸಿ ಸಾಹಿತ್ಯಕ್ಕೆ ಹೊಸ ಸೇರ್ಪಡೆ ಮಾಡಿದರು.

ಒಂದುಕಡೆ ಉತ್ತಮವಾದ ಸರಕುಗಳ ಅಭಾವ, ಇನ್ನೊಂದೆಡೆ ಎಷ್ಟೇ ಸುಲಭ ಬೆಲೆಗೆ ಕೊಟ್ಟರೂ ಪುಸ್ತಕದ ಬೆಲೆ ಹೆಚ್ಚು ಎಂದು ಕೊಂಡುಕೊಳ್ಳದ ಜನರು. ಇಂತಹ ಸಂದರ್ಭದಲ್ಲಿಯೂ ಕಾವ್ಯಾಲಯ ಗುಣಮಟ್ಟದ ಜವಾಬ್ದಾರಿ ತೆಗೆದುಕೊಂಡು ಪ್ರಕಟಿಸಿರುವುದು ನಿಜಕ್ಕೂ ಅಭಿನಂದನೀಯ.

ಅಡಿಟಿಪ್ಪಣಿಗಳು

೧. ಕೂಡಲಿ ಚಿದಂಬರಂ, (ಲೇ) ಕನ್ನಡದಲ್ಲಿ ಪ್ರಕಟಿನೋದ್ಯಮ ಅಥವಾ ಪ್ರಕಾಶನ ಕರ್ಮವೀರ, ದೀಪಾವಳಿ ವಿಶೇಷಾಂಕ, ೧೯೫೮, ಪುಟ, ೧೪

೨. ಕೂಡಲಿ ಚಿದಂಬರಂ, (ಲೇ) ಕನ್ನಡದಲ್ಲಿ ಪ್ರಕಟಿನೋದ್ಯಮ ಅಥವಾ ಪ್ರಕಾಶನ ಕರ್ಮವೀರ, ದೀಪಾವಳಿ ವಿಶೇಷಾಂಕ, ೧೯೫೮, ಪುಟ, ೧೬

೩. (ಸಂ) ಹೊರೆಯಾಲ ದೊರೆಸ್ವಾಮಿ, ಪುಸ್ತಕ ಲೋಕದ ಅನನ್ಯರು, ಕಾವ್ಯಾಲಯ : ಪ್ರಕಾಶಕರು ಅಭಿನವ, ೨೦೦೮, ಪುಟ-೧೦

ಅಧ್ಯಾಯ-೫

ಕಾವ್ಯಾಲಯದ ಪುಸ್ತಕ ಸಂಸ್ಕೃತಿ

೫.೧ ವಿಚಾರ ವಾಹಿನಿ : ಕನ್ನಡ ಸಂಸ್ಕೃತಿ

ಸಾಹಿತ್ಯಕ್ಕೂ ಪತ್ರಿಕೋದ್ಯಮಕ್ಕೂ ಅವಿನಾಭಾವ ಸಂಬಂಧ. ಈ ಎರಡರ ಉದ್ದೇಶ ಮತ್ತು ಗುರಿ ಒಂದೇ. ಆದರೆ ಬೆಳೆದು ಬಂದ ದಾರಿ ಮಾತ್ರ ಬೇರೆ ಬೇರೆ. ಎರಡೂ ಕೂಡ ಅಭಿವ್ಯಕ್ತಿಯ ಮಾಧ್ಯಮಗಳೇ ಆದರೆ ಪತ್ರಿಕೋದ್ಯಮ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಕೈಗೊಂಡ ರಾಜಕೀಯ ಹೋರಾಟದಲ್ಲಿ ಒಂದು ಪ್ರಬಲವಾದ ಸಾಧನವಾಗಿ ಬೆಳೆದು ಬಂದಿತು. ಸ್ವಾತಂತ್ರ್ಯ ಪ್ರಾಪ್ತವಾದಂದಿನಿಂದ ಪತ್ರಿಕೋದ್ಯಮದಲ್ಲಿ ಕ್ರಾಂತಿಕಾರರ ಬದಲಾವಣೆಗಳಾಗಿವೆ. 'ವಾರ್ತಾ ಪತ್ರಿಕೆ ಮತ್ತು ನಿಯತಕಾಲಿಕೆಗಳ ಬರವಣಿಗೆ, ಸಂಪಾದನೆ ಮತ್ತು ಪ್ರಕಟಣೆ ಅಲ್ಲದೆ, ಸುದ್ದಿ ಸಂಗ್ರಹಣ, ಪ್ರಸಾರಣ, ಪತ್ರಿಕೆಗಳ ನಿರ್ಮಾಣ ಜಾಹೀರಾತು ಮುಂತಾದ ಚಟುವಟಿಕೆಗಳನ್ನೆಲ್ಲ ಒಳಗೊಂಡಿದೆ. ಮೊದಲು ಧರ್ಮಪ್ರಚಾರ ಅನಂತರ ಕನ್ನಡ ನಾಡು ಮತ್ತು ನುಡಿ ಏಳಿಗೆಯ ಉದ್ದೇಶಗಳನ್ನಿಟ್ಟುಕೊಂಡು ಪತ್ರಿಕೆಗಳು ಪ್ರಾರಂಭವಾದವು'[೧] ಸಾಹಿತ್ಯಕ್ಕೆ ಮೀಸಲಾದ ಪತ್ರಿಕೆಗಳಲ್ಲಿ ಕಾವ್ಯಾಲಯದ 'ವಿಚಾರ ವಾಹಿನಿ' ಯೂ ಒಂದು. ಇದರಂತೆ ವಾಗ್ಭೂಷಣ, ಸುವಾಸಿನಿ, ಮಧುರವಾಣಿ ಇವುಗಳು ಕೂಡ ಸಾಹಿತ್ಯಕ್ಕೆ ಮೀಸಲಾದ ಪತ್ರಿಕೆಗಳಾಗಿದ್ದವು.

ಚಿದಂಬರಂ ವಕೀಲರಾಗಿ, ಬ್ಯಾಂಕ್ ನೌಕರರಾಗಿ ಕೆಲಸ ಮಾಡಿದರೂ ಕೂಡ ಅವರನ್ನು ಸೆಳೆದಿದ್ದು ಸಾಹಿತ್ಯ. ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಆಯ್ಕೆಯಾದ ನಂತರ ಸಾಹಿತ್ಯ ಸೇವೆಯೇ ಜೀವನವನ್ನಾಗಿ ಮಾಡಿಕೊಂಡರು. ಇವರಿಗೆ ಸಹಕಾರವನ್ನು ನೀಡಿದವರಲ್ಲಿ ಮುಖ್ಯರಾದವರೆಂದರೆ, ಕೆ.ವಿ.ಪುಟ್ಟಪ್ಪನವರು. ಭೂಪಾಲಂ ಪುಟ್ಟ ನಂಜಪ್ಪನವರು, ದೇವಂಗಿ ಮಾನಪ್ಪನವರು. ಕರ್ನಾಟಕ ಸಂಘದ ಮೂಲಕ ಉತ್ತಮ ಕೃತಿಗಳನ್ನು ಪ್ರಕಟಿಸಿದರು. ಚಿದಂಬರಂ ೧೯೩೯ರಲ್ಲಿ ಜನವರಿಯಲ್ಲಿ 'ವಿಚಾರವಾಹಿನಿ' ಎಂಬ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಿದರು. ಅದು ಕನ್ನಡದಲ್ಲಿ ಬಂದ ಅತ್ಯುತ್ತಮ ಪತ್ರಿಕೆಗಳಲ್ಲಿ ಒಂದಾಗಿತ್ತು. ಆದರೆ ಅದು ಬಹುಕಾಲ ಉಳಿಯಲಿಲ್ಲ. ಆದರೂ 'ವಿಚಾರವಾಹಿನಿ' ಇಂದಿಗೂ ಒಂದು ಆದರ್ಶವಾಗಿ ಉಳಿದಿದೆ. ವಿಚಾರವಾಹಿನಿಯ ಮೂಲಕ ಒಳ್ಳೆಯ ಲೇಖನಗಳು ಪ್ರಕಟವಾಗಿ ಓದುಗರ ಮನಸ್ಸುಗಳ ಮೇಲೆ ಪ್ರಭಾವ ಬೀರಿದವು. ವಿಚಾರವಾಹಿನಿಯ ಮುದ್ರಣ ಮೊದಲು ಬೆಂಗಳೂರಿನಲ್ಲಿಯೇ ಆಗುತ್ತಿತ್ತು. ಇದರಿಂದ ಅಚ್ಚಿಗೆ ಅನಾನು ಕೂಲವಾಗುತ್ತಿತ್ತು. ಸರ್ಕಾರದ ಅನುಮತಿ ಪಡೆದು ತೀರ್ಥಹಳ್ಳಿಯಲ್ಲಿ ಮುದ್ರಿಸುವ ವ್ಯವಸ್ಥೆ ಮಾಡಿದ್ದರು. ಈ ವಿಚಾರವನ್ನು ೧೯೩೯ರ ಡಿಸೆಂಬರ್‌ನ ವಿಚಾರವಾಹಿನಿ ಸಂಚಿಕೆಯಲ್ಲಿ ತಿಳಿಯಬಹುದು. ಪ್ರಕಾಶನದ ಪ್ರಚಾರ ಮತ್ತು

ಪ್ರಸಾರ ಎರಡನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾವ್ಯಾಲಯದ ಕಛೇರಿಯನ್ನು ಮೈಸೂರಿಗೆ ವರ್ಗಾಯಿಸಲಾಯಿತು. ಈ ವಿಷಯವನ್ನು ೧೯೪೧ರ ಮೇ ತಿಂಗಳ ವಿಚಾರ ವಾಹಿನಿಯಲ್ಲಿ ಪ್ರಕಟಿಸಿದ್ದರು. ವ್ಯವಹಾರದ ಜೊತೆಗೆ ಸಾಹಿತ್ಯ ಸೇವೆಯ ದೃಷ್ಟಿಯನ್ನಿಟ್ಟುಕೊಂಡು ಪ್ರಾರಂಭವಾದ ವಿಚಾರವಾಹಿನಿ ನಿಜವಾಗಿಯೂ ಸಾಹಿತ್ಯ ಸಂದರ್ಭದಲ್ಲಿ ಅತ್ಯುತ್ತಮ ಕಾರ್ಯ ನಿರ್ವಹಿಸಿತೆನ್ನಬಹುದು. ನವೋದಯ ಸಂದರ್ಭದ ಕವಿಗಳ ಸಾಹಿತ್ಯ ಬರವಣಿಗೆಯನ್ನು ಸಂಚಿಕೆಯ ರೂಪದಲ್ಲಿ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಅಷ್ಟೇ ಅಲ್ಲದೆ ರಚನೆಯಾಗುತ್ತಿರುವ, ಮುಂದೆ ಕಾವ್ಯಾಲಯದಿಂದ ಪ್ರಕಟವಾಗುವ, ಈಗಾಗಲೇ ಪ್ರಕಟವಾಗಿರುವ ಕೃತಿಗಳ ಬಗ್ಗೆ ಮಾಹಿತಿಯನ್ನು ವಿಚಾರವಾಹಿನಿ ಪತ್ರಿಕೆ ಮೂಲಕ ತಲುಪಿಸುತ್ತಿದ್ದರು. ಒಂದರ್ಥದಲ್ಲಿ ಕಾವ್ಯಾಲಯದ ಬೆಳವಣಿಗೆಗೆ ವಿಚಾರವಾಹಿನಿಯ ಕೊಡುಗೆ ಅನನ್ಯವಾದುದು ಎಂದರೆ ತಪ್ಪಾಗಲಾರದು.

ಕೃತಿಯ ರೂಪ ಪಡೆದುಕೊಳ್ಳುವುದಕ್ಕಿಂತ ಮೊದಲೇ 'ವಿಚಾರವಾಹಿನಿ' ಪತ್ರಿಕೆಯಲ್ಲಿ ಅನೇಕ ಪ್ರಸಿದ್ಧ ಕೃತಿಗಳ ಭಾಗಗಳು ಪ್ರಕಟವಾಗಿ ಪ್ರಖ್ಯಾತಿಯನ್ನು ಪಡೆದುಕೊಂಡಿದ್ದವು. ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ೧೯೩೯ನೇ ವರ್ಷದ ಸಂಪುಟಗಳಲ್ಲಿ, 'ಮಲೆಗಳಲ್ಲಿ ಮದುಮಗಳು'೧೯೪೦ನೇ ವರ್ಷದ ಸಂಪುಟಗಳಲ್ಲಿ ಪ್ರಕಟವಾಗಿದ್ದವು. ಹಾಗೆಯೇ ಕೋಗಿಲೆ ಮತ್ತು ಸೋವಿಯತ್ ರಷ್ಯಾ, ವಿದ್ಯಾರ್ಥಿಗಳಲ್ಲಿ ಮತಿ ಗೌರವದ ಅವಶ್ಯಕತೆ, ಮೀನಾಕ್ಷಿಯ ಮನೇ ಮೇಷ್ಟರು, ಅಕ್ಷರ ಪ್ರಚಾರ, ಸಾಹಿತ್ಯ ಪ್ರಚಾರ ಮತ್ತು ಇತರ ಭಾಷಣಗಳು ಇತ್ಯಾದಿ ಬೇಂದ್ರೆಯವರ ಪುಟ್ಟ ವಿಧವೆ ಇತ್ಯಾದಿ. ಎಸ್.ವಿ.ಪರಮೇಶ್ವರ ಭಟ್ಟರ ಹೂಮಳೆ-ಹೂಬಿಸಿಲು, ಪಂಪಾ ಸರೋವರ, ಇರವು ಅಳಿವು ಇತ್ಯಾದಿ. ಪು.ತಿ.ನ ಅವರ ಪಯಣಿಗರ ಹಾಡು, ಬಸವನ ಹುಳು ಮತ್ತು ಗುಲಾಬಿಯ ಗಿಡ, ತುಂಟ ಹುಡುಗಿ, ಅಹಲ್ಯೆ ಇತ್ಯಾದಿ. ತೀ.ನಂ.ಶ್ರೀ ಯವರ ರಾಕ್ಷಸನ ಮುದ್ರಿಕೆ, ರಾಜರತ್ನಂ ಅವರ ವಿಮರ್ಶೆ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕಾಮನ ಹಬ್ಬ, ಶಿವರಾಮ ಕಾರಂತರ ಕಿಸಾಗೋತಮಿ, ಇತ್ಯಾದಿ. ಹೀಗೆ ಹೆಸರಾಂತ ಲೇಖಕರ, ಹೆಸರಾಂತ ಬರವಣಿಗೆಗಳು ಪತ್ರಿಕೆಯಲ್ಲಿ ಪ್ರಕಟವಾಗುತಿದ್ದವು ಸಮಗ್ರವಾಗಿ ಗ್ರಹಿಸಿ ಹೇಳುವುದಾದರೆ, ನವೋದಯ ಸಂದರ್ಭದ ಲೇಖಕರಿಗೆ, ಸಾಹಿತ್ಯಕ್ಕೆ 'ವಿಚಾರವಾಹಿನಿ' ಪತ್ರಿಕೆ ವೇದಿಕೆಯಾಗಿತ್ತು. ವಿಚಾರವಾಹಿನಿ ಕೇವಲ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳನ್ನು ಮಾತ್ರ ಪ್ರಕಟಿಸುತ್ತಿರಲಿಲ್ಲ. ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಪತ್ರಿಕೆ ಮೂಲಕ ಪ್ರಸಾರ ಮತ್ತು ಪ್ರಚಾರ ಮಾಡುತ್ತಿತ್ತು. ಸಾಹಿತ್ಯ ಸಮ್ಮೇಳನಗಳ ಬಗ್ಗೆ, ಉಪನ್ಯಾಸಗಳ ಬಗ್ಗೆ, ಮುಂದೆ ಅಗಲಿರುವ ಚಟುವಟಿಕೆಗಳ ಬಗ್ಗೆ, ಹೀಗೆ ಹಲವಾರು ಸಾಹಿತ್ಯ ಚಟುವಟಿಕೆಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಜಾಹೀರಾತನ್ನು ನೀಡುತ್ತಿತ್ತು. ಸಾಹಿತ್ಯೇತರ ವಿಚಾರಗಳು ಅಂದರೆ ವಿಜ್ಞಾನ, ಸಮಾಜ, ರಾಜಕೀಯ, ಜೀವನೋಪಾಯಗಳ ಕುರಿತಂತೆಯೂ ಲೇಖನಗಳನ್ನು ಪ್ರಕಟಿಸುತ್ತಿತ್ತು.

ಮೈಸೂರು ಸಂಸ್ಥಾನದಲ್ಲಿ ಪುಸ್ತಕ ಭಂಡಾರಗಳು, ಗ್ರಾಮ ಪುನರುಜ್ಜೀವನ, ಭಾರತಕ್ಕೊಂದು ಆರ್ಥಿಕ ಯೋಜನೆ, ದೇಶಿಯ ಮೂಲಶಿಕ್ಷಣ, ಕೈಗಾರಿಕೆಗಳು, ಕೈಗಾರಿಕೆಗಳ ಬೆಳವಣಿಗೆ ಶಕ್ತಿ ಮತ್ತು ವಾಹಕ ಸೌಕರ್ಯಗಳು, ವರದಾ ಯೋಜನೆಯ ಬಗ್ಗೆ ಕೆಲವು ಪ್ರಶ್ನೆಗಳು ಮತ್ತು ಉತ್ತರ, ವ್ಯವಸಾಯ, ವ್ಯಾಪಾರ ಮತ್ತು ವಾಣಿಜ್ಯ, ಸಂಸ್ಥಾನಗಳು ಮತ್ತು ಅವುಗಳ ಕರಾರುಗಳು ಅಂತರಾಷ್ಟ್ರೀಯ ತತ್ವದ ಅವಶ್ಯಕತೆ, ವ್ಯವಸಾಯ ಕ್ರಮಗಳು, ಹೀಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ಲೇಖನಗಳನ್ನು ಪ್ರಕಟ ಮಾಡುತ್ತಿದ್ದರು.

ಒಂದೆಡೆ ಸಾಹಿತ್ಯ ಪ್ರಚಾರ ಇನ್ನೊಂದೆಡೆ ಸಾಹಿತ್ಯೇತರ ವಿಚಾರಗಳನ್ನು ಪ್ರಚಾರಮಾಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದರೂ ಕೂಡ ಪತ್ರಿಕೆಗಳ ಮೇಲೆ ಅಪವಾದ ತಪ್ಪಲಿಲ್ಲ. ಈ ಅಪವಾದಗಳಿಗೆ ಪ್ರತಿಕ್ರಿಯೆಯಾಗಿ ಚಿದಂಬರ ಬರೆದ ಲೇಖನವೊಂದು ಕಾವ್ಯಾಲಯದ ಸಂಗ್ರಹದಲ್ಲಿ ದೊರಕುತ್ತದೆ. 'ಮೈಸೂರು ವೃತ್ತಪತ್ರಿಕೆಗಳು ಮತ್ತು ಸರ್ಕಾರ' ಎಂಬ ಹೆಸರಿನಲ್ಲಿ ಲೇಖನವಿದೆ. ಅದರ ಮಾಹಿತಿ ಇಂತಿದೆ..... "ನಾನೀಗ ಸರಕಾರಕ್ಕೂ ವೃತ್ತಪತ್ರಿಕೆಗಳಿಗೂ ಇರುವ ಸಂಬಂಧವನ್ನು ಅದರ ಸೂಕ್ಷ್ಮತೆಗಳನ್ನು ವಿವೇಚಿಸುತ್ತೇನೆ. ನಮ್ಮ ವಿಷಯದಲ್ಲಿ ಸರಕಾರದ ದೃಷ್ಟಿಯೇನೆಂಬುದನ್ನು ಬಲ್ಲೆ. ಆದರೆ ಟೀಕಿಸುವವರನ್ನು ಕಂಡು ತೃಪ್ತಿ ಪಟ್ಟ ಸರಕಾರ ಈ ಪ್ರಪಂಚದಲ್ಲಿ ಯಾವ ಕಾಲದಲ್ಲಿ ಯಾದರೂ ಇತ್ತೆ? ವೃತ್ತ ಪತ್ರಿಕೆಗಳು ಕೂಗುವುದೂ ಸರಕಾರ ಅಬ್ಬರಿಸುವುದೂ ಅವುಗಳ ನಿತ್ಯಜೀವನದಲ್ಲಿ ಒಂದು ಅನಿವಾರ್ಯವಾದ ಕಸುಬು. ಈ ಪರಿಸ್ಥಿತಿ ರಾಜಕೀಯ ರಂಗದ ಅತ್ಯಂತ ಸ್ವಾರಸ್ಯವಾದ ಆಕರ್ಷಣೆಗಳಲ್ಲಿ ಒಂದು ಆದ್ದರಿಂದ ಇದರಿಂದ ಯಾರು ಗಾಬರಿಗೊಳ್ಳಬೇಕಾಗಿಲ್ಲ.

ಒಟ್ಟಿನಲ್ಲಿ, ನಮ್ಮ ಪತ್ರಿಕೆಗಳು ಪತ್ರಿಕಾ ಮರ್ಯಾದೆಯನ್ನು ನೀತಿಯನ್ನು ಬಿಟ್ಟು ನಡೆದಿವೆಯೆಂದು ನಮ್ಮ ಸರಕಾರ ಸಹ ಅವುಗಳನ್ನು ದೂರಲಾರದೆಂದು ನಾನು ಭಾವಿಸುತ್ತೇನೆ. ಅವುಗಳ ರಾಷ್ಟ್ರಭಕ್ತಿ ದೃಢವಾದದ್ದು ಮತ್ತು ನ್ಯೂನತೆಯಿಲ್ಲದ್ದು. ನಮ್ಮ ಆಳಿದ ಮಹಾಸ್ವಾಮಿಯವರು ಗದ್ದುಗೆ ಗೇರಿದ ಈಚಿನ ಚರಿತ್ರಾರ್ಹವಾದ ಸಂದರ್ಭಗಳಲ್ಲಿ ನಮ್ಮ ಪತ್ರಿಕೆಗಳು ಪ್ರಜಾ ಸಮುದಾಯದ ಮನೋಭಾವವನ್ನು ವ್ಯಕ್ತಪಡಿಸುವುದರಲ್ಲಿಯೂ, ಸಮಾಚಾರಗಳನ್ನು ತಿಳಿಯಲು ಪ್ರಜೆಗಳಿಗಿದ್ದ ಕೂತೂಹಲವನ್ನು ಪೂರೈಸುವುದರಲ್ಲಿಯೂ ತೋರಿದ ಶ್ರದ್ಧೆಯನ್ನು ಚಟುವಟಿಕೆಯನ್ನು ಯಾರೂ ಶಂಕಿಸಲಾರರು. ಇಂಡಿಯಾದ ಹಲವು ಪ್ರಾಂತ್ಯಗಳಲ್ಲಿನ ದೇಶ ಭಾಷಾ ಪತ್ರಿಕೆಗಳಲ್ಲಿ ಲೇಖಕರ ಲೇಖನಿಯಿಂದ ಕೋಮುವಾರು ದ್ವೇಷಕ್ಕೆ ಅವಕಾಶಕೊಟ್ಟಿಲ್ಲ. ಬಂಡಾವಾಳಗಾರರ ಪರವಹಿಸುವುದೆಂದಾಗಲಿ ನಮ್ಮ ಪತ್ರಿಕೆಗಳನ್ನು ಸಂಶಯ ದೃಷ್ಟಿಯಿಂದ ನೋಡುವಂತಿಲ್ಲ. ಅವುಗಳ ನೀತಿ ಜಾಹೀರಾತುಗಳ ಪ್ರಭಾವಕ್ಕೆ ಒಳಗಾಗಿಲ್ಲ. ನಮ್ಮ ಪತ್ರಿಕೆಗಳು ಘನತೆಗೆ ಲಂಚ ರುಷುವತ್ತುಗಳ ಆಸೆಯಿಂದ ಪರರನ್ನು ನಿಂದಿಸುವ ಆಲೋಚನೆಗಳ ಕಳಂಕ ತಟ್ಟಿಲ್ಲ. ವೃತ್ತ ದ್ವೇಷಗಳಲ್ಲಿ ಅವು

ಪ್ರವೃತ್ತವಾಗಿಲ್ಲ. ಅವುಗಳ ಬರವಣಿಗೆಯಲ್ಲಿ ದುಷ್ಟತನವಾಗಲಿ, ಬಯ್ಗುಳಗಳಾಗಲಿ ಇಲ್ಲ. ಅವು ಹೊಲಸು ಸುದ್ದಿ ಸಮಾಚಾರಗಳನ್ನು ಪ್ರಕಟಿಸುವುದರಲ್ಲಿ ತೊಡಗಿಲ್ಲ. ರಚನಾತ್ಮಕ ದೃಷ್ಟಿಯಿಂದ, ಅವು ಸರಕಾರದ ಆರ್ಥಿಕ, ಅಭ್ಯುದಯೋನ್ಮುಖ ಮತ್ತು ಪ್ರಜೋಪಯೋಗಿ ನೀತಿಗಳ ವಿಷಯದಲ್ಲಿ ತುಂಬ ಉತ್ಪಾದಕರವಾದ ಸಂತೋಷವನ್ನು ವ್ಯಕ್ತಪಡಿಸಿವೆ....",೨

ಈ ಲೇಖನವನ್ನು ಓದಿದಾಗ ಅವರು ಎದುರಿಸುತ್ತಿದ್ದಂತಹ ಸವಾಲುಗಳನ್ನು ಗುರುತಿಸಬಹುದು. ಒಂದು ಸಮುದಾಯದಲ್ಲಿ ಎಲ್ಲರಿಂದಲೂ ಸೈ ಎನಿಸಿಕೊಳ್ಳುವುದು ಬಹಳ ಕಷ್ಟ. ಜನರು ಇಟ್ಟಿದ್ದ ನಂಬಿಕೆಯನ್ನು ಉಳಿಸಿಕೊಳ್ಳಬೇಕೆಂದರೆ ಪ್ರಕಾಶಕರು ಸಾಕಷ್ಟು ಶ್ರಮಹಾಕಬೇಕು. ಈ ಪ್ರಯತ್ನವನ್ನು ಕಾವ್ಯಾಲಯ ಮಾಡಿತ್ತೆನ್ನಬಹುದು. ಹೀಗೆ ಚಿದಂಬರಂ ಒಂದೆಡೆ ಕಾವ್ಯಾಲಯದ ಮೂಲಕ ಲೇಖಕರ ಹಿತಾಸಕ್ತಿಯನ್ನು ಕಾಪಾಡಿ ಒತ್ತಾಸೆಯನ್ನು ನೀಡುತ್ತಿದ್ದರು. ಇನ್ನೊಂದೆಡೆ ವಿಚಾರ ವಾಹಿನಿ ಮೂಲಕ ಲೇಖಕರ ಬೆಳವಣಿಗೆಗೆ ಸಹಾಯಕರಾದರು.

ಅಡಿಟಿಪ್ಪಣಿಗಳು :

೧) (ಸಂ) ಹಾಮಾನಾ, ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಮೈಸೂರು ವಿಶ್ವವಿದ್ಯಾನಿಲಯ. ೧೯೭೯

೨) ಕಾವ್ಯಾಲಯದ ಸಂಗ್ರಹದಲ್ಲಿದ್ದ ಕೂಡಲಿ ಚಿದಂಬರಂ ಅವರ ಅಪ್ರಕಟಿತ ಲೇಖನ ಮೈಸೂರು ವೃತ್ತಪತ್ರಿಕೆಗಳು ಮತ್ತು ಸರ್ಕಾರ.

೫.೨ ಮಕ್ಕಳಿಗಾಗಿ ಸಾಹಿತ್ಯ

ಮಕ್ಕಳ ಸಾಹಿತ್ಯದ ಮೂಲವನ್ನು ನಾವು ಜಾನಪದ ಸಂದರ್ಭದಲ್ಲಿಯೇ ಗುರುತಿಸಬಹುದು. ಆದರೆ ಪ್ರತ್ಯೇಕ ಪ್ರಕಾರವಾಗಿ ಬೆಳೆಯತೊಡಗಿದ್ದು ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ. ಬೇರೆಲ್ಲಾ ಸಾಹಿತ್ಯಕ್ಕಿಂತ ಮಕ್ಕಳ ಸಾಹಿತ್ಯದ ಜವಾಬ್ದಾರಿ ಮಹತ್ತರವಾದುದು. ಏಕೆಂದರೆ ಎಳೆಯ ಮನಸ್ಸು ಎಲ್ಲವನ್ನೂ ಸೂಕ್ಷ್ಮವಾಗಿ ಗ್ರಹಿಸುತ್ತದೆ. ಒಳ್ಳೆಯ ಮೌಲ್ಯಗಳನ್ನು ಚಿಕ್ಕಂದಿನಲ್ಲೇ ಬೆಳೆಸಬೇಕು. ಇಂದರಿಂದ ಬೌದ್ಧಿಕವಾಗಿ ವಿಕಾಸವಾದಂತೆ ಒಳ್ಳೆಯ ವಿಚಾರಗಳ ಕಡೆಗೆ ಮನಸ್ಸು ಕೇಂದ್ರಿಕರಿಸತೊಡಗುತ್ತದೆ. ಇಲ್ಲವಾದರೆ ಅವರೇ ಮುಂದೆ ಸಮಾಜಕ್ಕೆ ಕಂಟಕ ಪ್ರಾಯರಾಗುತ್ತಾರೆ. ಈ ಕಾರಣಕ್ಕಾಗಿಯೇ ತಿಳಿದವರು. "ಬೆಳೆಯುವ ಪೈರು ಮೊಳಕೆಯಲ್ಲಿಯೇ" ಎನ್ನುವಂತಹ ಅನುಭವ ಪ್ರಧಾನವಾದ ಮಾತನ್ನು ಹೇಳಿರುವುದು


ಒಳ್ಳೆಯ ಪರಂಪರೆಯ ಹಿನ್ನೆಲೆಯಲ್ಲಿ ಮಕ್ಕಳ ಮನಸ್ಸನ್ನು ವಿಕಾಸಗೊಳಿಸಬೇಕು. ಎಳೆಯ ಮನಸ್ಸು ಒಂದು ಕೃತಿಯನ್ನು ಕೂಡಲೇ ಗ್ರಹಿಸಲು ಆ ಕೃತಿಯ ಬಾಹ್ಯ ಸೌಂದರ್ಯ ಮುಖ್ಯವಾಗುತ್ತದೆ. ಕೃತಿ ನೋಡಿದ ಕೂಡಲೇ ಆಕರ್ಷಿಸುವಂತಿರಬೇಕು. ಅಂದವಾದ ಬಣ್ಣಬಣ್ಣದ ಮುಖಪುಟ. ಮಕ್ಕಳಿಗೆ ಪ್ರಿಯವಾಗುವ ಚಿತ್ರಗಳು, ದೊಡ್ಡದೊಡ್ಡ ಅಕ್ಷರಗಳು ಇವು ಮಕ್ಕಳ ಪುಸ್ತಕಗಳಿಗೆ ಬೇಕಾದ ಮೂಲಭೂತ ಅವಶ್ಯಕತೆಗಳು. ಸೃಜನಶೀಲ ಮನಸ್ಥಿತಿಗೆ ಹೇಗೆ ಹಲವಾರು ಬಗೆಯ ಸಾಹಿತ್ಯ ಪ್ರಕಾರಗಳು ರಚನೆಯಾಗಿವೆಯೋ ಹಾಗೆಯೇ ಮಕ್ಕಳ ಮನಸ್ಸಿಗನುಗುಣವಾಗಿ ಕೂಡ ಸಾಹಿತ್ಯ ರಚನೆಯಾಗಿದೆ. ಪುರಾಣೇತಿಹಾಸಗಳಿಂದ ಆಯ್ದಂತಹ ಕಥೆಗಳು, ಮನರಂಜನಾ ಕಥೆಗಳು, ಕಲ್ಪನಾ ಕಥೆಗಳು, ಪ್ರಾಣಿ ಪಕ್ಷಿಗಳ ಕಥೆಗಳು, ಕವಿತೆಗಳು ಸಾಕಷ್ಟು ರಚನೆಯಾಗಿವೆ. ಇವುಗಳನ್ನು ಮಕ್ಕಳಿಗೆ ತಲುಪಿಸುವ ಕೆಲಸವನ್ನು ಪ್ರಕಾಶನ ಸಂಸ್ಥೆಗಳು ಮಾಡಿವೆ ಮತ್ತು ಮಾಡುತ್ತಿವೆ.

'ಕಾವ್ಯಾಲಯ' ಪ್ರಕಾಶನ ಸಂಸ್ಥೆಯು ಪ್ರಾರಂಭದಿಂದ ಇಂದಿನವರೆಗೂ ಮಕ್ಕಳ ಸಾಹಿತ್ಯಕ್ಕೆ ವಿಶೇಷ ಗಮನ ನೀಡಿದೆ ಎಂದರೆ ಅತಿಶಯೋಕ್ತಿಯೆನಿಸದು. ಕೃತಿಗಳ ಪುಟಗಳ ಬಗ್ಗೆ, ಕಲಾಕೃತಿಗಳ ಬಗ್ಗೆ, ಕಲಾವಿದರ ಬಗ್ಗೆ, ಬಣ್ಣಗಳ ಬಗೆ, ಕಾಗದದ ಗುಣಮಟ್ಟದ ಬಗ್ಗೆ ಅಕ್ಷರಗಳ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿತ್ತು. ಕಾವ್ಯಾಲಯ ಮಕ್ಕಳ ಕೃತಿಗಳ ಪ್ರಕಟಣೆಯ ಸಂದರ್ಭದಲ್ಲಿ ಅನುಸರಿಸಿದ ಮಾರ್ಗಗಳು ನೂರಕ್ಕೆ ನೂರರಷ್ಟು ಯಶಸ್ವಿಯಾಗಿವೆ ಎನ್ನಬಹುದು. ಇದಕ್ಕೆ ದಾಖಲೆಯಾಗಿ ಒಂದು ಮಾಹಿತಿಯನ್ನು ಕೊಡುವುದು ಅಗತ್ಯವೆನಿಸುತ್ತದೆ. ದಿನಾಂಕ ೦೪-೧೦-೧೯೪೪ರಂದು ಬಾಗಲ ಕೋಟೆಯ ಅರವಿಂದ ಸಾಹಿತ್ಯ ಮಂದಿರದ ಅಧಿಕಾರಿಗಳಾದ ಕೃಷ್ಣ ಜೇರೆ ಎಂಬುವವರು ಒಂದು ಪತ್ರ ಕಳುಹಿಸಿದ್ದಾರೆ. ಅವರ ಸಂಸ್ಥೆಯ

ಮೂಲಕ 'ಕರ್ಮಯೋಗಿ' ಎಂಬ ಮಾಸಿಕ ಪತ್ರಿಕೆಯನ್ನು ಹೊರತರುತ್ತಿರುವುದಾಗಿ ಪತ್ರದಲ್ಲಿ ತಿಳಿಸಲಾಗಿದೆ. ಆ ಪತ್ರಿಕೆಯಲ್ಲಿ ಮಕ್ಕಳಿಗಾಗಿ ವಿಶೇಷ ಪುಟವನ್ನು ಮೀಸಲಿಟ್ಟಿರುವ ವಿಚಾರವನ್ನೂ ಆ ಮಕ್ಕಳ ಪುಟದ ವಿನ್ಯಾಸ ಹೇಗಿರಬೇಕು? ಯಾವ ಯಾವ ವಿಚಾರಗಳಿಗೆ ಅದು ಮೀಸಲಾಗಿರಬೇಕು? ಎಂಬ ಸಲಹೆಗಳನ್ನು ಕೇಳಿದ್ದಾರೆ. ಇದನ್ನು ಗಮನಿಸಿದಾಗ 'ಕಾವ್ಯಾಲಯ' ಕೃತಿಗಳ ಪ್ರಕಟಣೆಯಲ್ಲಿ ಎಷ್ಟು ನಿಷ್ಠೆ ಪ್ರಮಾಣಿಕತೆಯನ್ನು ತೋರಿಸುತಿತ್ತು ಎಂಬ ವಿಚಾರ ಗ್ರಾಹ್ಯವಾಗುತ್ತದೆ. ಸಂಸ್ಥೆ ಪ್ರಾರಂಭವಾಗಿ ಕೆಲವೇ ವರ್ಷಗಳಲ್ಲಿ ಯಶಸ್ವಿಯಾಗಿ, ಇತರರಿಗೆ ಮಾದರಿಯಾಗಿ ಕೆಲಸವನ್ನು ನಡೆಸಿಕೊಂಡು ಹೋಗುತಿತ್ತು. ಮಕ್ಕಳ ಬಗ್ಗೆ ನಾವು ವಹಿಸಬೇಕಾದ ಜವಾಬ್ದಾರಿಯ ಸಂದರ್ಭದಲ್ಲಿ ಕುವೆಂಪು ಅವರ ವಾಕ್ಯ ಉಲ್ಲೇಖಾರ್ಹವೆನಿಸುತ್ತದೆ.

"......ಪ್ರತಿಯೊಂದು ಮಗುವೂ ಹುಟ್ಟುತ್ತಲೆ-ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ' ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು. ಹುಟ್ಟುವಾಗ ವಿಶ್ವಮಾನವನಾಗಿಯೇ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು ಬುದ್ಧನನ್ನಾಗಿ, ಅಂದರೆ ವಿಶ್ವಮಾನವನನ್ನಾಗಿ ಪರಿವರ್ತಿಸುವುದೆ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ, ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ' ರಾಗಬೇಕು ಲೋಕ ಉಳಿದು ಬಾಳಿ ಬದುಕಬೇಕಾದರೆ......."[೧]

ಈ ಒಂದು ಸಂದೇಶ ಇಡೀ ಮನುಷ್ಯ ಕುಲ ನಡೆಯಬೇಕಾದ ದಾರಿಯನ್ನು ಮತ್ತು ನಮ್ಮ ಮುಂದಿನ ಪ್ರಜೆಗಳನ್ನು ರೂಪಿಸಬೇಕಾದ ಕ್ರಮವನ್ನು ತಿಳಿಸುತ್ತದೆ. ಕುವೆಂಪು ಅವರು ಮಕ್ಕಳಿಗಾಗಿ ಕಥೆಗಳನ್ನು ಭಿನ್ನ ಭಿನ್ನ ಆಶಯಗಳನ್ನು ಇಟ್ಟುಕೊಂಡು ರಚನೆ ಮಾಡಿದರು. ಎಳೆಯ ಮಕ್ಕಳಿಗೆ ಆಕರ್ಷಕವಾಗಿರುವಂತೆ ರಚಿಸಿದರು.




"......ಜೋಗಿಯು ಬಾರಿಸೆ ಕಿಂದರಿಯ!
ಸಣ್ಣಿಲಿ, ದೊಡ್ಡಿಲಿ, ಮೂಗಿಲಿ, ಸುಂಡಿಲಿ
ಅಣ್ಣಿಲಿ, ತಮ್ಮಿಲಿ, ಅವ್ವಿಲಿ, ಅಪ್ಪಿಲಿ
ಮಾವಿಲಿ, ಬಾವಿಲಿ, ಅಕ್ಕಲಿ, ತಂಗಿಲಿ,
ಗಂಡಿಲಿ, ಹೆಣ್ಣಿಲಿ, ಮುದುಕಿಲಿ, ಹುಡುಗಿಲಿ
ಎಲ್ಲರ ಬಂದವು ಓಡೋಡಿ,
ಜೋಗಿಯು ಬಾರಿಸೆ ಕಿಂದರಿಯ:........"

ಇಲ್ಲಿರುವ ಚಿತ್ರವನ್ನು ಪದ್ಯಭಾಗವನ್ನು ಗಮನಿಸಿದಾಗ ಕೆಲವೊಂದು ಅಂಶಗಳು ಸ್ಪಷ್ಟವಾಗುತ್ತದೆ. ಮಕ್ಕಳಿಗಾಗಿ ಸಾಹಿತ್ಯ ಪ್ರಕಟಿಸುವ ಸಂದರ್ಭದಲ್ಲೆಲ್ಲಾ ಅವರು ವಿಶೇಷ ಗಮನ ನೀಡುತ್ತಿದ್ದುದು ಚಿತ್ರಗಳ ಕಡೆಗೆ ಚಿತ್ರಗಳನ್ನು ಉತ್ತಮ ಕಲಾವಿದರಿಂದ ಬರೆಸುತ್ತಿದ್ದರು. ಚಿತ್ರದ ಭಾಗವು ಕಥೆಯ ವಿವರಣೆಯನ್ನು ನೀಡುತ್ತಿತ್ತು. ಒಂದು ಕಡೆ ದೃಶ್ಯದ ಮೂಲಕ ಗ್ರಹಿಕೆ ಇನ್ನೊಂದೆಡೆ ಅಕ್ಷರಗಳ ಮೂಲಕ ಗ್ರಹಿಕೆ. ಇದರಿಂದಾಗಿ ಕವನಗಳು, ಕಥೆಗಳು ಮಕ್ಕಳಿಗೆ ಸುಲಭವಾಗಿ ಗ್ರಾಹ್ಯವಾಗುತ್ತಿದ್ದವು.

ಯಾಂತ್ರಿಕ ಬದುಕಿನ ಈ ಸಂದರ್ಭದಲ್ಲಿ ಮಕ್ಕಳಿಗೆ ರಾಮಾಯಣ, ಮಹಾಭಾರತದ ವಿಚಾರಗಳೇ ತಿಳಿದಿರುವುದಿಲ್ಲ. ಸಾಮಾನ್ಯವಾಗಿ ಈ ಬಗೆಯ ವಿಚಾರಗಳನ್ನು ಚಿಕ್ಕಂದಿನಲ್ಲಿಯೇ ಮೂಡಿಸಬೇಕು. ಇಲ್ಲದೇ ಹೋದರೆ ಪುರಾಣ, ಇತಿಹಾಸಗಳು ಜನಸಮುದಾಯದಿಂದ ದೂರ ಉಳಿಯುತ್ತವೆ. ಇವುಗಳ ರಕ್ಷಣೆ ಎಲ್ಲರ ಆದ್ಯ ಕರ್ತವ್ಯ.

ಎಂ.ಎಸ್.ಪುಟ್ಟಣ್ಣನವರು ಪುರಾಣೇತಿಹಾಸಗಳಿಂದ ಆಯ್ದ ಸುಮಾರು ೧೫೦ ಸ್ವಾರಸ್ಯಕರವಾದ ನೀತಿಬೋಧಕ ಕಥೆಗಳನ್ನು ರಚನೆ ಮಾಡಿದ್ದಾರೆ. 'ಕಾವ್ಯಾಲಯ' ಇದರ ಬಗ್ಗೆ ವಿಶೇಷ ಕಾಳಜಿ ವಹಿಸಿ ಪ್ರಕಟಣೆ ಮಾಡಿತು ಎಂಬುದು ಆ ಕೃತಿಯ ಮುನ್ನುಡಿಯಲ್ಲಿ ತಿಳಿದು ಬರುತ್ತದೆ. 'ನೀತಿ ಚಿಂತಾಮಣಿ' ಎಂಬ ಶೀರ್ಷಿಕೆಯಡಿಯಲ್ಲಿ ಬಾಲ್ಯ, ಯೌವ್ವನ, ಅಪರ ವಯಸ್ಸು ಎಂಬ ಭಾಗಗಳಲ್ಲಿ ಕಥೆಗಳನ್ನು ನೇಯ್ದಿದ್ದಾರೆ. 'ಪೇಟೆ ಮಾತೇನಜ್ಜಿ' ಎಂಬ ನೀಳ್ಗತೆ 'ಸಾಹಿತ್ಯದ ಪುಟ್ಟ ರತ್ನವಾಗಿದೆ' ಎಂದು ಚಿದಂಬರಂ ಅವರೇ ಹೇಳುತ್ತಾರೆ. ಹೆಜ್ಜೆಹೆಜ್ಜೆಗೂ ಕಥೆ ಕುತೂಹಲವನ್ನು ಕೆರಳಿಸುತ್ತ ಉದ್ದಕ್ಕೂ ಮನಸ್ಸನ್ನು ಸೆರೆ ಹಿಡಿದು ಸಂತೋಷ ಪಡಿಸುತ್ತದೆ. ಮಕ್ಕಳ ನಡೆನುಡಿಗಳನ್ನು ರೂಪಿಸುವಂತಹ ಕಥೆಗಳಾಗಿವೆ. ಈ ಕೃತಿಯನ್ನು ಮಕ್ಕಳಿಗೆ ಆಕರ್ಷಕವಾಗುವಂತೆ ಚಿಕ್ಕ ಪುಸ್ತಕವಾಗಿ ಚಿತ್ರಸಹಿತವಾಗಿ ಪ್ರಕಟಿಸಿದ್ದರು.



ತೊಂಬಾರದ ಅಡಿಗೆಯನ್ನು ಮಾಡಿಸಿ, ಹೇಸಕ್ಕಿ ಅನ್ನ, ಎಣ್ಣೆ ಬೆರೆದ ತುಪ್ಪ, ಕಣ್ಣೀರು ಮುಟ್ಟಿಗೆ ಮೊದಲಾದ್ದನ್ನು ಹಾಕಿಸುತಿದ್ದನು.

ಕೆಲವು ದಿವಸಗಳಲ್ಲಿ ಇವನು ಮೃತನಾದನು. ಬಹು ಧರ್ಮಿಷ್ಠನಾದ್ದರಿಂದ ಇವನಿಗೆ ಸ್ವರ್ಗ ಪ್ರಾಪ್ತಿಯಾಯಿತು, ಆದರೆ ಪಂಕ್ತಿ ಭೇದವನ್ನು ಮಾಡಿ ತನ್ನ ಶರೀರವೇ ಹೆಚ್ಚೆಂದು ಇವನು ಪೋಷಣೆ ಮಾಡಿಕೊಳ್ಳುತಿದ್ದುದರಿಂದ, ಇವನಿಗೆ ತನ್ನ ದೇಹವನ್ನೇ ಕಿತ್ತುಕೊಂಡು ತಿನ್ನುವ ಗತಿ ಬಂತು. ಆದಕಾರಣ ಸ್ವರ್ಗದಲ್ಲಿ ಈ ಶ್ವೇತ ರಾಜನು ಬೇಕಾದ ಸುಖವನ್ನು ಅನುಭವಿಸುತ್ತಾ ಇದ್ದರೂ ಮಧ್ಯಾಹ್ನದ ಹೊತ್ತಿಗೆ ಸರಿಯಾಗಿ ವಿಮಾನದಲ್ಲಿ ಕೂತು

.....ಕೆಲವು ದಿನಗಳಲ್ಲಿ ಶ್ವೇತರಾಜ ಮೃತನಾದನು. ಬಹು ಧರ್ಮಿಷ್ಠನಾದ್ದರಿಂದ ಇವನಿಗೆ ಸ್ವರ್ಗ ಪ್ರಾಪ್ತಿಯಾಯಿತು, ಆದರೆ ಪಂಕ್ತಿ ಭೇದವನ್ನು ಮಾಡಿ ತನ್ನ ಹೆಜ್ಜೆಯ ಇವನು ಪೋಷಣೆ ಮಾಡಿಕೊಳ್ಳುತ್ತಿದ್ದರಿಂದ, ಇವನಿಗೆ ತನ್ನ ದೇಹವನ್ನೇ ಕಿತ್ತುಕೊಂಡು ತಿನ್ನುವ ಗತಿ ಬಂತು. ಆದಕಾರಣ ಸ್ವರ್ಗದಲ್ಲಿ ಈ ಶ್ವೇತ ರಾಜನು ಬೇಕಾದ ಸುಖವನ್ನು ಅನುಭವಿಸುತ್ತಾ ಇದ್ದರೂ ಮಧ್ಯಾಹ್ನದ ಹೊತ್ತಿಗೆ ಸರಿಯಾಗಿ ವಿಮಾನದಲ್ಲಿ ಕೂತು ಭೂಲೋಕಕ್ಕೆ ಬಂದು ಒಂದು ಕೊಳಕ್ಕೆ ಹೋಗುತಿದ್ದನು. ಅಲ್ಲಿ ಇವನು ಬಂದ ಸಮಯಕ್ಕೆ ಸರಿಯಾಗಿ ಒಂದು ಹೆಣವು ನೀರಿನಿಂದ ಮೇಲಕ್ಕೆ ಏಳುತಿತ್ತು. ಇವನು ಇಷ್ಟು ವೈಭವದಿಂದ ಬಂದು, ಕೆಳಕ್ಕಿಳಿದು, ತೇಲುತಿದ್ದ ಹೆಣವನ್ನು ಸಂತೋಷದಿಂದ ಕಿತ್ತು ತಿಂದು, ತಿರುಗಿ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೋಗುತಿದ್ದನು. ಬಹುಕಾಲದವರೆಗೂ ಹೀಗೆ ನಡೆದು ಬಂತು......

ಈ ಮೇಲಿನ ದೃಶ್ಯಭಾಗ ಮತ್ತು ಕಥಾಭಾಗ ಎರಡೂ ಕೂಡ ನೀತಿ ಚಿಂತಾಮಣಿಯ 'ಶ್ವೇತರಾಜನ ಕಥೆ' ಗೆ ಸಂಬಂಧಿಸಿದುದು. ಪಂಕ್ತಿ ಭೇದವನ್ನು ಮಾಡತಕ್ಕವರು ಧರ್ಮೋಘಾತಕರು. ಅವರಿಗೆ ತಕ್ಕ ಶಿಕ್ಷೆಯಾಗುತ್ತದೆ. ಎಲ್ಲರನ್ನು ಸಮಾನವಾಗಿ ಕಾಣಬೇಕೆಂಬ ನೀತಿ ಈ ಕಥೆಯಲ್ಲಿದೆ. ಇದೇ ರೀತಿಯ ಹಲವು ಕಥೆಗಳನ್ನು ಸಂಪಾದಿಸಿ ಕಾವ್ಯಾಲಯ ಪ್ರಕಟಿಸಿತು. ನೀತಿ ಚಿಂತಾಮಣಿ, ಪೇಟೆ ಮಾತೇನಜ್ಜಿ ಮಕ್ಕಳ ಸಾಹಿತ್ಯ ಇಂಗ್ಲೀಷ್ ಮತ್ತು ಬಂಗಾಳಿ ಭಾಷೆಗಳಲ್ಲಿ ಸಾಕಷ್ಟು ಬೆಳವಣಿಗೆಯನ್ನು ಪಡೆದು ಜನಪ್ರಿಯತೆಯನ್ನು ಗಳಿಸಿತ್ತು. ಆದರೆ ಕನ್ನಡದಲ್ಲಿ ಆ ರೀತಿ ಗುರುತಿಸುವ ಬಗೆಯಲ್ಲಿ ರಚನೆಯೇನು ಆಗಿರಲಿಲ್ಲ. ಆಗ ಎಂ.ಎಸ್.ಪುಟ್ಟಣ್ಣನವರು, ಮಕ್ಕಳಿಗೆ ಅಗತ್ಯವಾದ ಕಥೆಗಳನ್ನು ರಚನೆ ಮಾಡಿ ಕನ್ನಡವನ್ನು ಇತರೇ ಭಾಷೆಗಳ ನಡುವೆ ಎತ್ತಿ ನಿಲ್ಲಿಸಿದರು ಎಂಬ ಮಾತನ್ನು ಚಿದಂಬರಂ ಅವರೇ ಹೇಳುತ್ತಾರೆ.

ಮಕ್ಕಳಿಗಾಗಿ ರಚನೆ ಯಾಗುತ್ತಿರುವ ಬರವಣಿಗೆಗಳು ಜ್ಞಾನ ವಿಕಾಸದ ಗುರಿಯನ್ನು ಮಾತ್ರ ಹೊಂದಿವೆ. ಆದರೆ ಕಥೆ, ಕವನ, ನೀತಿಕಥೆಗಳು ರಚನೆಯಾಗುತ್ತಿಲ್ಲ. ಅವುಗಳ ಕಡೆಗೆ ಗಮನ ಹರಿಸಬೇಕು. ಪಾಶ್ಚಾತ್ಯ ದೇಶಗಳಲ್ಲಿ ಮಕ್ಕಳ ವಯಸ್ಸಿಗನುಗುಣವಾಗಿ ಬೇರೆ ಬೇರೆ ಪುಸ್ತಕಗಳು ರಚನೆಯಾಗುತ್ತವೆ. ಆದರೆ ನಮ್ಮ ದೇಶದಲ್ಲಿ ಆ ಸ್ಥಿತಿಯೇ ನಿರ್ಮಾಣವಾಗಿಲ್ಲ. ಈ ಬಗೆಯ ಪ್ರಯತ್ನ ಮಾಡುವ ಲೇಖಕರಿದ್ದರೂ, ಅವರಿಗೆ ಯಾವುದೇ ಬಗೆಯ ಪ್ರೋತ್ಸಾಹ ನೀಡುತ್ತಿಲ್ಲ ಎಂಬ ಅಳುಕು ಕೂಡಲಿ ಚಿದಂಬರಂ ಅವರದು. ಆಂಗ್ಲ ಭಾಷೆಯ ಕವಿಯೊಬ್ಬನ ಪ್ರಕಾರ 'child is father of man' ಈ ಮಾತನ್ನು ಮಕ್ಕಳ ಸಾಹಿತ್ಯದ ಸಂದರ್ಭದಲ್ಲಿ ಚಿದಂಬರಂ ಆಗಾಗ ನೆನಪಿಸಿಕೊಳ್ಳುತ್ತಾರೆ. ಪಾಶ್ಚಾತ್ಯರಲ್ಲಿ ಮಕ್ಕಳ ಕುರಿತಾದ ಒಂದು ಹೇಳಿಕೆಯಿದೆ. 'Train up a child in the way he should go, and when he is old. he will not repeat form up' ಚಿದಂಬರಂ ಈ ವಾಕ್ಯವನ್ನೇ ಧ್ಯೇಯವಾಗಿ ಹೊಂದಿ ಮಕ್ಕಳ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದರು ಎಂದರೆ ತಪ್ಪಾಗಲಿಕ್ಕಿಲ್ಲ.

ವಯಸ್ಕರಿಗಾಗಿ ಪುಸ್ತಕಗಳನ್ನು ರಚಿಸುವುದು ಸುಲಭ, ಆದರೆ ಮಕ್ಕಳಿಗಾಗಿ ಪುಸ್ತಕಗಳನ್ನು ರಚಿಸುವುದು, ಮುದ್ರಿಸುವುದು ಬಹಳ ಕಷ್ಟ ಮಕ್ಕಳಿಗೆ ಕೃತಿಗಳು ಆಕರ್ಷಕವಾಗಿ, ಸುಲಭ ದರದಲ್ಲಿ, ಪ್ರತ್ಯೇಕ ಮಾರುಕಟ್ಟೆಯಲ್ಲಿ ಮಾತ್ರವಲ್ಲದೇ ಎಲ್ಲಾ ಕಡೆಯಲ್ಲೂ ದೊರಕುವಂತೆ ಮಾಡಬೇಕಾದುದು ಅಗತ್ಯ. ಆದರೆ ಪ್ರಕಾಶನ ಒಂಟಿಯಾಗಿ ಈ ಸಾಧನೆ ಮಾಡುವುದು ಕಷ್ಟ, ಸರ್ಕಾರ ಕೈ ಜೋಡಿಸಿದರೆ ಏನಾದರೂ ಸಹಾಯವಾಗಬಹುದು ಎಂಬ ನಿಲುವು ಚಿದಂಬರಂ ಅವರದು. ಸ್ಪರ್ಧೆಗಳ ಮೂಲಕ, ವಸ್ತು ಪ್ರದರ್ಶನಗಳ ಮೂಲಕ, ನರ್ಸರಿ ಶಾಲೆಗಳ ಮೂಲಕ ಹೇಗಾದರೂ ಮಾಡಿ ಮಕ್ಕಳಿಗೆ ಪುಸ್ತಕಗಳನ್ನು ತಲುಪಿಸಬೇಕೆಂಬ ಆಸೆ ಅವರದಾಗಿತ್ತು. 'ನಮಗೆ ಸಾದಾ ಬಟ್ಟೆಯಾದರೆ ಮಕ್ಕಳಿಗೆ ಜರಿ ಬಟ್ಟೆ' ಎಂಬ ನಿಲುವಿನಲ್ಲಿ ಕೆಲಸ ಮಾಡಿದರು. ಮಕ್ಕಳಿಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳಿಗೆ ಕಲಾಕೃತಿಗಳನ್ನು ರಚಿಸುವ ಸಂದರ್ಭ ಬಂದಾಗ ಪರಿಣಿತರಾದ ಕಲಾವಿದರೊಂದಿಗೆ ವ್ಯವಹಾರ ನಡೆಸುತ್ತಿದ್ದರು. ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಲಾಕೃತಿಗಳನ್ನು ರಚಿಸಿದವರಲ್ಲಿ ಮುಖ್ಯರಾದವರೆಂದರೆ ಆರ್.ಕೆ.ಲಕ್ಷ್ಮಣ್, ಎಂ.ಈ.ಗುರು, ಎಸ್.ಸಿ.ದೇಸಾಯಿ, ಆನಂದ. ಚಿದಂಬರಂ ಕವನ ಕಥೆಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ಕಲಾಕೃತಿಗಳನ್ನು ರಚಿಸುವಂತೆ ಪ್ರೇರೇಪಿಸುತ್ತಿದ್ದರು. ಆ ಚಿತ್ರಗಳು ಇಡೀ ಕಥೆಯ ಸಾರವನ್ನು ಹೇಳುತ್ತಿವಂತಿರುತ್ತಿದ್ದವು. ದುರ್ಗಸಿಂಹನ 'ಪಂಚತಂತ್ರ' ಕೃತಿಯನ್ನು ಮಕ್ಕಳಿಗಾಗಿ ಅನುವಾದಿಸುವಾಗ ಕ. ನರಸಿಂಹಶಾಸ್ತ್ರಿಯವರಿಗೆ ದುರ್ಗಸಿಂಹ ಅನುಸರಿಸಿದ ಮಾರ್ಗವನ್ನು ಗುರುತು ಹಾಕಿಕೊಂಡು, ಸರಳವಾಗಿ ರಚಿಸುವಂತೆ ತಿಳಿಸಿದರು. ಪಂಚಭೇದಗಳ ಕ್ರಮಗಳಲ್ಲಿ ವಿಂಗಡಿಸಿಕೊಂಡು ಕೋತಿಯ ಕಥೆ, ಬಾವಿ ತೋಡಿಸಿದ ರಾಜನ ಕಥೆ, ಎರಡು ಕೊಕ್ಕಿನ ಹಕ್ಕಿ, ಸುವರ್ಣ ಬಾಹು ಮತ್ತು ಮೊಸಳೆ, ಆಸ್ತಿಕ ಮತ್ತು ಮೊಸಳೆ ಇತ್ಯಾದಿ. ಹೀಗೆ ಚಿಕ್ಕ ಚಿಕ್ಕ

ಕಥೆಗಳಾಗಿ ಸಂಗ್ರಹಿಸಿದರು. ಪಂಚತಂತ್ರ ಕಥೆಗಳನ್ನು ಹೇಳಿರುವ ಶೈಲಿ, ತಂತ್ರ ವಿಭಿನ್ನವಾದುದು. "ಪಾಟಲೀಪುತ್ರ ಪಟ್ಟಣದ ಸುಖದರ್ಶ ರಾಜನ ಮಂತ್ರಿಯಾದ ಅಮರಶಕ್ತಿಯ ಮಕ್ಕಳು ಮೂರ್ಖರು, ಆ ಮಕ್ಕಳನ್ನು ಸರಿಪಡಿಸಲು ಆರು ತಿಂಗಳುಗಳ ಕಾಲ ಸಮಯ ತೆಗೆದುಕೊಂಡು ವಿಷ್ಣುಶರ್ಮನು ಹೊರಟನು. ಅವರ ಬುದ್ಧಿಶಕ್ತಿಯನ್ನು ಪರೀಕ್ಷಿಸಲು ಈ ಕತೆಗಳನ್ನು ಹೇಳುತ್ತಾನೆ' ಹೀಗೆ ಉಪಕಥೆಗಳ ಮಾದರಿಯಲ್ಲಿ ರಚನೆಗೆ ಅವಕಾಶ ನೀಡಿದರು. ಪ್ರತೀ ಕಥೆಗಳಿಗೂ ಭಿನ್ನವಾದ, ಯೋಗ್ಯವಾದ, ಸಮರ್ಪಕವಾದ ಕಲಾಕೃತಿಗಳನ್ನು ಕಲಾವಿದರಿಂದ ರಚಿಸಿಕೊಂಡಿದ್ದಾರೆ.

ಪ್ರಾಣಿ, ಪಕ್ಷಿಗಳು ಮುಗ್ಧ ಚೇತನಗಳಿಗೆ ಹೆಚ್ಚು ಆಕರ್ಷಕವಾಗಿ ಕಾಣಿಸುತ್ತವೆ. ಮನುಷ್ಯರ ಗುಣಸ್ವಭಾವಗಳನ್ನು ಪ್ರಾಣಿ-ಪಕ್ಷಿಗಳಿಗೆ ಅನ್ವಯಿಸಿ ಹೇಳಿದಾಗ ಬೇಗ ಅರ್ಥವಾಗುತ್ತದೆ. ಆದ್ದರಿಂದ ಈ ಮೂಲಕ ಸಮುದಾಯದಲ್ಲಿ ಮನುಷ್ಯ ಸಂಬಂಧಗಳನ್ನು ಬಲಗೊಳಿಸಬಹುದು. ಉತ್ತಮ ನಡವಳಿಕೆಯನ್ನು ರೂಡಿಸಿಕೊಳ್ಳಬಹುದು ಎಂಬ ಉದ್ದೇಶದಿಂದ ಈ ಪಂಚತಂತ್ರ ಕೃತಿಯನ್ನು ಪ್ರಕಟಿಸಿದ್ದರು. ಮಗುವಿನ ಮನಸ್ಸು ಕುತೂಹಲದಾಯಕವಾದುದು. ಒಳಿತಾಗಲಿ, ಕೆಡುಕಾಗಲಿ ಎರಡನ್ನು ಒಂದೇ ದೃಷ್ಟಿಕೋನದಲ್ಲಿ ನೋಡುವ ಮುಗ್ಧತೆ ಮಗುವಿನದು. ಚಿದಂಬರಂ ಅವರು 'ಮಕ್ಕಳಿಗರ್ಪಿಸುವ ಕಾಣಿಕೆ' ಎಂಬ ಉದ್ದೇಶದ ಮೂಲಕ ಈ ಸೋಪನ ನೀತಿ ಕಥೆಗಳನ್ನು, ಗ್ರೀಮ್ ಸಹೋದರರ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದರು. ಚಿದಂಬರಂ ಕೇವಲ ಪ್ರಕಾಶಕರಲ್ಲ, ಉತ್ತಮ ಅಭಿರುಚಿಯುಳ್ಳ ಕವಿಯೂ ಹೌದು ಎಂಬ ಅಂಶವನ್ನು ಈ ಮೂಲಕ ಸಾಬೀತು ಪಡಿಸಿದರು. 'ಕನ್ನಡನಾಡಿನ ಮಕ್ಕಳಿಗೆ ಅರ್ಪಿಸುವ ಸಲುವಾಗಿ ಈ ಕೃತಿಯನ್ನು ಪ್ರಕಟಿಸಿದ್ದೇನೆ' ಎಂಬ ಮಾತನ್ನು ಚಿದಂಬರಂ ಅವರು 'ಈ ಸೋಪನ ನೀತಿ ಕಥೆಗಳು' ಕೃತಿಯ ಮುನ್ನುಡಿಯಲ್ಲಿ ಹೇಳಿದ್ದಾರೆ. ಪ್ರಕಾಶನದ ಕೆಲಸಗಳ ಒತ್ತಡದಲ್ಲಿಯೂ, ಆಸಕ್ತಿಯಿಂದ ಬಿಡುವು ಮಾಡಿಕೊಂಡು ಸಾಹಿತ್ಯ ರಚನೆಗೆ ಕೈಹಾಕಿದುದು ನಿಜಕ್ಕೂ ಶ್ಲಾಘನೀಯ. ಮಕ್ಕಳಿಗಾಗಿ ಸಾಕಷ್ಟು ಕೃತಿಗಳನ್ನು ರಚನೆ ಮಾಡಿದವರು ಹೊಯ್ಸಳ ಇವರು ಸುಮಾರು ೩೦ ಕ್ಕೂ ಹೆಚ್ಚು ಮಕ್ಕಳ ಕೃತಿಗಳನ್ನು ರಚನೆಮಾಡಿದ್ದವು. ಆದರೆ ಇವುಗಳನ್ನು ಪ್ರಕಟಣೆಗೆ ನೀಡಿರಲಿಲ್ಲ. ಇವರ ಕಾಲಾನಂತರ ಇವರ ಪುತ್ರ ಎಲ್.ಅನಂತರಾಮು ಅವರು ಕಾವ್ಯಾಲಯಕ್ಕೆ ಪತ್ರ ಬರೆದು ಅವುಗಳನ್ನು ಪ್ರಕಟಿಸುವಂತೆ ದಿನಾಂಕ ೧೯-೦೭-೧೯೬೦ ರಂದು ಕೇಳಿಕೊಂಡಿದ್ದರು. ನಂತರ ಚಿದಂಬರಂ ಅವುಗಳನ್ನು ಪರಿಶೀಲಿಸಿ ಈ ಬರವಣಿಗೆ ಮಕ್ಕಳಿಗೆ ಅಗತ್ಯವಾದುದು ಎಂದು ತೀರ್ಮಾನಿಸಿ ಅವುಗಳನ್ನು ಪ್ರಕಟಿಸಿದ್ದರು. ಪತಾಕ್ಷಿ, ಪುಟ್ಟರಸು, ಹೂವಿನ ಹಾಸಿಗೆ, ಸಂತಮ್ಮಣ್ಣ ಇತ್ಯಾದಿ. ಚಿದಂಬರಂ ಅವರ ನಂತರ ಕಾವ್ಯಾಲಯದ ಜವಾಬ್ದಾರಿಯನ್ನು ಹೊತ್ತು ಮುನ್ನಡೆಸಿದವರು ಅವರ ಮಕ್ಕಳಾದ ಸಿ.ಕೆ. ಕೃಷ್ಣಮೂರ್ತಿ ಮತ್ತು ಸಿ.ಕೆ. ಪ್ರಭಾ. ತಂದೆಯಂತೆಯೇ ಪ್ರಕಾಶನದಲ್ಲಿ ಆಸಕ್ತಿ ಹೊಂದಿದ್ದರು. ಇವರು ಕೂಡ ಮಕ್ಕಳಿಗಾಗಿಯೇ ೨೦೦೨ನೇ ಇಸವಿಯಲ್ಲಿ ಹೊಸ ಹೊಸ ಪ್ರಕಟಣೆಗಳನ್ನು ಹೊರತಂದಿದ್ದಾರೆ. ಪುರಾಣ, ಇತಿಹಾಸ,

ಜನಪದ, ಪರಿಸರ ವಿಷಯಗಳನ್ನು ಕುರಿತಂತೆ ಮಕ್ಕಳ ಕೃತಿಗಳು ರಚನೆಯಾಗಿದ್ದವು. ಜಡಭರತ ಮಹರ್ಷಿ, ಅಭಿಮನ್ಯು, ಕಾಮನಬಿಲ್ಲು, ಶ್ರೀರಾಮನ ಜನನ, ವಿವಾಹ, ವನವಾಸ, ಕರ್ನಾಟಕದ ವೀರ ರಮಣಿಯರು, ಸೂರ್ ಜಹಾನ್ ಬೇಗಂ, ಪರಿಸರ, ಕಾಮನ ಬಿಲ್ಲು, ಹುತ್ತರಿಯ ಹಾಡು, ಜೋಗುಳ, ರಾಗಿ ಬೀಸುವ ಹಾಡು ಇತ್ಯಾದಿ. ಇವುಗಳು ಇತ್ತೀಚೆಗೆ ಹೊರಬಂದ ಮಕ್ಕಳ ಸಾಹಿತ್ಯದ ಕೃತಿಗಳು.

ಅಡಿಟಿಪ್ಪಣಿಗಳು :

೧) ಕುವೆಂಪು , ಪಂಚಮಂತ್ರ ಮತ್ತು ಸಪ್ತಸೂತ್ರ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಪುಟ-೧

೨) ಕುವೆಂಪು, ಬೊಮ್ಮನ ಹಳ್ಳಿಯ ಕಿಂದರಿಜೋಗಿ ಕಾವ್ಯಾಲಯ ಪ್ರಕಾಶನ, ೧೯೨೮, ಪುಟ,೧೬-೧೭

೩) ಎಂ.ಎಸ್.ಪುಟ್ಟಣ್ಣ ನೀತಿ ಚಿಂತಾಮಣಿ-೧೦, ಕಾವ್ಯಾಲಯ ಪ್ರಕಾಶನ, ೧೯೭೫, ಪುಟ,೧೫

೪) (ಲೇ). M.B.Glick. Editing Children's book, Book News The Monthly Journal of the book Industry council of South India, 1958.

೫.೩ ಅನುವಾದದ ಸಂದರ್ಭದಲ್ಲಿ

ಪುಸ್ತಕೋದ್ಯಮದಲ್ಲಿ ಕನ್ನಡಕ್ಕಿಂತ ಹೆಚ್ಚು ಬೇರೆ ಬೇರೆ ಭಾಷೆಗಳ ಕೃತಿಗಳೇ ಹೆಚ್ಚು ಪ್ರಸಿದ್ಧಿಯನ್ನು ಪಡೆದುಕೊಂಡಿರುವಂತದ್ದು. ಕನ್ನಡ ಭಾಷೆಯ ಕೃತಿಗಳನ್ನು ಇತರೆ ಭಾಷೆಗಳ ಕೃತಿಗಳ ಎತ್ತರಕ್ಕೆ ನಿಲ್ಲಿಸಲು ಕಾವ್ಯಾಲಯ ಮಾಡಿದ ಪ್ರಯತ್ನಗಳಲ್ಲಿ ಈ ಅನುವಾದ ಕಾರ್ಯವೂ ಒಂದು. ಇತರ ಭಾಷೆಗಳ ಕೃತಿಗಳನ್ನು ಕನ್ನಡಕ್ಕೆ ಪರಿಚಯಿಸುವ ಉದ್ದೇಶ ಒಂದೆಡೆಯಾದರೆ, ಇನ್ನೊಂದೆಡೆ ಆ ಕೃತಿಗಳನ್ನು ಕನ್ನಡಕ್ಕೆ ಮಾದರಿಯಾಗಿ ಸ್ವೀಕರಿಸುವುದು. ಬಂಗಾಳಿ, ಇಂಗ್ಲಿಷ್, ಸಂಸ್ಕೃತ ಮೂಲದ ಕೃತಿಗಳನ್ನು ಹೆಚ್ಚು ಹೆಚ್ಚು ಅನುವಾದಿಸುವಂತೆ ಪ್ರೇರೆಪಿಸತೊಡಗಿದ್ದರು. ಅನುವಾದ ಮಾಡಿಸುವಾಗ ಉತ್ತಮ ಅನುವಾದಕಾರರನ್ನು ಆಯ್ಕೆ ಮಾಡಿಕೊಂಡು ಅನುವಾದ ಕಾರ್ಯವನ್ನು ಒಪ್ಪಿಸುತ್ತಿದ್ದರು. ಕೆಲವರು ಆಸಕ್ತಿಯಿಂದ ತಾವೇ ಅನುವಾದಿಸಿ ನಂತರ ಪ್ರಕಾಶನದ ಗಮನಕ್ಕೆ ತರುತ್ತಿದ್ದರು. ಕಾವ್ಯಾಲಯ ಅನುವಾದದ ಕೃತಿಯನ್ನು ಪರಿಶೀಲಿಸಿ ಪ್ರಕಟಣೆಗೆ ಆಯ್ಕೆ ಮಾಡುತ್ತಿತ್ತು. ಕಾವ್ಯಾಲಯದಿಂದ ಅನುವಾದವಾಗಿದ್ದ ಅನೇಕ ಕೃತಿಗಳಿಗೆ ಪ್ರಸ್ತಿಗಳು ಮತ್ತು ಗೌರವಗಳು ಸಂದಿದ್ದವು. 'ಎವರೆಸ್ಟ್ ವೀರ ತೇನ್‌ಸಿಂಗ್' ಕೃತಿಯ ಅನುವಾದಕ್ಕೆ ಭಾರತ ಸರ್ಕಾರ 'ಮುದ್ರಣ ಆಕಲ್ಪನ ರಾಜಪುರಸ್ಕಾರ' ಗೌರವವನ್ನು, ಸಿ.ಎನ್.ಮಂಗಳ ಅನುವಾದಿಸಿದ 'ಹೆಲನ್ ಕೆಲರ್' ಕೃತಿಗೆ ಮೈಸೂರು ಸರ್ಕಾರ ೧೯೫೯ನೇ ಸಾಲಿನ ಅವಾರ್ಡ್‌ನ್ನು ನೀಡಿ ಗೌರವಿಸಿತು.

ದಾದಾಬಾಯಿ ನವರೋಜಿಯವರ ಜೀವನ ಚರಿತ್ರೆಯನ್ನು ಲಂಡನ್‌ನ George Allen & Unwin ltd. ಪ್ರಕಟ ಪಡಿಸಿತ್ತು. ಇದನ್ನು ಕನ್ನಡಕ್ಕೆ ಅನುವಾದ ಮಾಡಬೇಕೆಂದು ಕೃತಿಯ ಮೂಲ ಲೇಖಕರಾದ ಆರ್.ಪಿ. ಮಸನಿಯವರ ಬಳಿ ಚಿದಂಬರಂ ಪತ್ರದ ಮೂಲಕ ಅನುಮತಿ ಪಡೆದಿದ್ದರು. ಅದರ ಸಂಕ್ಷೇಪ ಆವೃತ್ತಿಯನ್ನು ಹೊರತರುವ ಉದ್ದೇಶವನ್ನು ಹೊಂದಿದ್ದರು. ಲಂಡನ್‌ನ ಪ್ರಕಾಶನದವರ ಬಳಿ ಅನುಮತಿ ಕೇಳಿದಾಗ ಅವರು ಕಾವ್ಯಾಲಯಕ್ಕೆ ಕೆಲವು ಸಲಹೆಗಳನ್ನು ನೀಡಿದ್ದರು. ಪ್ರಕಾಶನದಲ್ಲಿ ಹಲವಾರು ನಿಯಮಗಳಿವೆ ಅವುಗಳಿಗೆ ಬದ್ದರಾಗಿರಬೇಕೆಂದು ತಿಳಿಸಿದ್ದರು. ಕೃತಿಯನ್ನು ಸಂಕ್ಷಿಪ್ತಗೊಳಿಸುವುದಕ್ಕೆ ಲೇಖಕರೇ ಜವಾಬ್ದಾರರಾಗಿರಬೇಕು. ಎಷ್ಟು ಪ್ರತಿಗಳನ್ನು ಮುದ್ರಿಸಬೇಕೆಂದು ಮೊದಲೇ ತೀರ್ಮಾನ ಮಾಡಿಕೊಂಡಿರಬೇಕು. ಬೆಲೆಯನ್ನು ಕೂಡ ಮೊದಲೇ ನಿರ್ಧರಿಸಿರಬೇಕು ಎಂಬ ನಿಯಮಗಳನ್ನು ತಿಳಿಸಿದ್ದರು. ಈ ನಿಯಮಗಳಂತೆಯೇ ಹೊರಬಂದ 'ದಾದಾಬಾಯಿ ನವರೋಜಿ' ಕೃತಿ ಜನಮನ್ನಣೆ ಗಳಿಸಿತ್ತು.

Macmillan & co. ltd London ಇವರ ಬಳಿ ರವೀಂದ್ರನಾಥ ಟಾಗೋರರ 'The post office' ಕೃತಿಯನ್ನು ಕನ್ನಡದಲ್ಲಿ ಅನುವಾದಿಸಲು ಅನುಮತಿ ಕೇಳಿದ್ದಕ್ಕೆ ಅವರು ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಅನುವಾದ ಮಾಡಲು ನಮ್ಮದೇನು ಅಭ್ಯಂತರವಿಲ್ಲ ಆದರೆ ಲಂಡನ್‌ನ ಪುಸ್ತಕದ ಬೆಲೆ ಭಾರತಕ್ಕೆ ಹೆಚ್ಚಾಗುತ್ತದೆ. ಅದರ ಬಗ್ಗೆ ಗಮನಹರಿಸಿ ನಿರ್ಧಾರ ಮಾಡಿ ಎಂದು ತಿಳಿಸಿದ್ದರು. ಅನುವಾದ ಕಾರ್ಯವನ್ನು ಕೈಗೊಂಡ ಮೇಲೆ ಆರ್ಥಿಕ ಭಾರವನ್ನು ಹೊರಬೇಕಾಗುತ್ತಿತ್ತು. ಆದರೂ ಕಾವ್ಯಾಲಯ ಇಂತಹ ಅನುವಾದ ಕಾರ್ಯಗಳಿಂದ ಹಿಂದೆ ಸರಿಯಲಿಲ್ಲ.

ಜವಾಹರಲಾಲ್ ನೆಹರು ಅವರ 'Discovery of India' ಕೃತಿಯನ್ನು ಕನ್ನಡಕ್ಕೆ ತರ್ಜುಮೆ ಮಾಡಲು ೨೦ ಜುಲೈ ೧೯೫೪ರಂದು ಪ್ರಧಾನ ಮಂತ್ರಿಯಾಗಿದ್ದ ನೆಹರೂ ಅವರ ಬಳಿಯೇ ಅನುಮತಿ ಕೇಳಿದ್ದರು. ನೆಹರೂ ಅವರು ಅನುಮತಿಯನ್ನು ನೀಡಿ ಪತ್ರವನ್ನು ಕೂಡ ಬರೆದಿದ್ದರು. ಒಂದು ಒಳ್ಳೆಯ ಕೃತಿಯನ್ನು ಜನರಿಗೆ ತಲುಪಿಸಬೇಕೆಂಬ ಉದ್ದೇಶದಿಂದ ಎಷ್ಟೇ ಕಷ್ಟದ ಕೆಲಸವಾದರೂ ಮಾಡುತ್ತಿದ್ದರು ಎಂಬುದು ನಮಗೆ ಸ್ಪಷ್ಟವಾಗುತ್ತದೆ.

National book trust of India ದಿಂದ Leo Huberman ನ 'Man's wordly Goods' ಕೃತಿಯನ್ನು ಡಾ. ವೇರಿಯರ್ elwin ಅವರ 'When the world was young' ಎಂಬ ಕೃತಿಯ ಕನ್ನಡ ಅನುವಾದವನ್ನು ಪ್ರಕಟಮಾಡಲು ಅನುಮತಿ ಕೇಳಿದ್ದರು. ಕೆಲವು ನಿಯಮಗಳ ಆಧಾರದ ಮೇಲೆ ಅನುಮತಿ ನೀಡಿದ್ದರು. ಬೇಗ ಪ್ರಕಟಮಾಡಬೇಕು ತಡಮಾಡಬಾರದೆಂದು ಕೂಡ ಹೇಳಿದ್ದರು. ಕೆಲವು ಕೃತಿಗಳ ಅನುವಾದವನ್ನು ಚಿದಂಬರಂ ಅವರು ಸ್ವತಃ ಮಾಡಿದರೆ, ಇನ್ನೂ ಕೆಲವು ಅನುವಾದಗಳನ್ನು ಕ.ಶಂಕರ, ಎ.ಶಂಕರ, ಹೆಚ್.ವಿ.ಸಾವಿತ್ರಮ್ಮ, ಸಿ.ಎನ್.ಮಂಗಳ ಮುಂತಾದವರಿಂದ ಮಾಡಿಸುತ್ತಿದ್ದರು. ಎ.ಶಂಕರ ಅವರು ಬಂಗಾಳಿ, ತೆಲುಗು ಭಾಷೆಯನ್ನು ಚೆನ್ನಾಗಿ

ಬಲ್ಲವರಾಗಿದ್ದರು. ಹಾಗಾಗಿ ಚಿದಂಬರಂ ಬಂಗಾಳಿ ಮೂಲದ ಅನೇಕ ಕೃತಿಗಳನ್ನು ಇವರ ಬಳಿಯೇ ಅನುವಾದ ಮಾಡಿಸಿದ್ದರು. ಆಧುನಿಕ ಬಂಗಾಳಿ ಲೇಖಕರನ್ನು ಕನ್ನಡಕ್ಕೆ ಪರಿಚಯಿಸುವ ಉದ್ದೇಶ ಎ.ಶಂಕರ್ ಅವರಿಗಿತ್ತು. ಟಾಗೋರ ಅವರ ಕೃತಿಗಳನ್ನು, ಭೀಮಲ್ ಮಿತ್ರ ಅವರ ಕೃತಿಗಳನ್ನು ಅನುವಾದ ಮಾಡಿದ್ದರು.

ಟಾಗೋರ್ ಅವರ 'ಚೋಕರ್ ಬಲಿ' ಕೃತಿಯನ್ನು 'ವಿನೋದಿನಿ' ಎಂಬುದಾಗಿ ಅನುವಾದ ಮಾಡಿದ ವಿಚಾರವನ್ನು ತಿಳಿದು, ವಿಶ್ವಭಾರತಿಯವರು ಜೂನ್, ೪, ೧೯೫೬ರಂದು ಕಾವ್ಯಾಲಯಕ್ಕೆ ಪತ್ರ ಬರೆದಿದ್ದರು. ಟಾಗೋರ್ ಅವರ ೭ ಪ್ರಬಂಧಗಳನ್ನು ಅಗತ್ಯವಿದ್ದರೆ ಅನುವಾದಿಸಿಕೊಳ್ಳಿ ಎಂದು ಅವರಾಗಿಯೇ ಹೇಳಿದ್ದರು. ಹೀಗೆ ಅನುವಾದದ ಕೃತಿಗಳ ಪ್ರಕಟಣೆಯಲ್ಲಿ ಕಾವ್ಯಾಲಯ ಯಶಸ್ಸನ್ನು ಪಡೆಯಿತೆನ್ನಬಹುದು. ಟಾಗೋರರ ಇತರ ಕೃತಿಗಳನ್ನು ಪ್ರಕಟಿಸುವ ಜವಾಬ್ದಾರಿಯನ್ನು ಕೂಡ ಹೊತ್ತುಕೊಂಡಿತ್ತು. ಒಂದು ಸಂಸ್ಥೆ ಬೆಳೆಯುತ್ತಿದೆ ಎಂದರೆ ಅಸೂಯೆಪಡುವವರು ಹಲವರಿರುತ್ತಾರೆ. ಕಾವ್ಯಾಲಯದ ವಿರುದ್ಧಕೂಡ ಯಾರೋ ಪಿತೂರಿ ಮಾಡಿ ಟಾಗೋರ್ ಅವರ ಕೃತಿಗಳನ್ನು ಅನುವಾದ ಮಾಡಲು ಬಿಡದಂತೆ ವಿಶ್ವಭಾರತಿಗೆ ದೂರು ಸಲ್ಲಿಸಿದ್ದರು. ಅದರಂತೆಯೇ ವಿಶ್ವಭಾರತಿ ಕೂಡ ಅನುವಾದಕ್ಕೆ ತಡೆ ಹಾಕಿತ್ತು. ಈ ವಿಚಾರ ೨೦.೧೦.೧೬೬೦ ರಂದು ವಿ.ಕೃಗೋಕಾಕ್‌ಗೆ ಬರೆದ ಮೂಲಕ ತಿಳಿಯಬಹುದು. ಕಾವ್ಯಾಲಯ ಅಪರಾಧಿ ಸ್ಥಾನದಿಂದ ಹೊರಬರಲು ಸಾಕಷ್ಟು ಪ್ರಯತ್ನಿಸಿದ್ದರೂ ಸಾಧ್ಯವಾಗಿರಲಿಲ್ಲ. ವಿ.ಕೃಗೋಕಾಕರ ಬಳಿ ನಿಮ್ಮ ಪ್ರಭಾವ ವಿಶ್ವ ಭಾರತಿಯಲ್ಲಿ ನಡೆಯುವ ಹಾಗಿದ್ದರೆ ನಮಗೆ ಸಹಾಯ ಮಾಡಿ ಎಂದು ಕೇಳಿ ಕೊಂಡಿದ್ದರು.

ಹಾಗೆಯೇ ಬಂಗಾಳಿಯಿಂದ ಗಜೇಂದ್ರ ಕುಮಾರ ಮಿತ್ರ, ಭೀಮಲ್ ಮಿತ್ರ ಮುಂತಾದವರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. ಎವರೆಸ್ಟ್ ವೀರ ತೇನ್‌ಸಿಂಗ್‌ನ ಕುರಿತಾದ ಕೃತಿಗಳು ದಕ್ಷಿಣ ಭಾರತದ ಯಾವ ಭಾಷೆಗಳಿಗೂ ತರ್ಜುಮೆ ಆಗಿರಲಿಲ್ಲ. ಇದಕ್ಕೆ ಕೈಹಾಕಿದ ದಕ್ಷಿಣ ಭಾರತದ ಮೊದಲಿಗ ಚಿದಂಬರಂ. The united press Associations of America. London ಇವರಿಗೆ ಪತ್ರ ಬರೆದು ಅನುಮತಿಯನ್ನು ಕೇಳಿದ್ದರು. 'Man of Everest the autobiography of Tenzing Nargay as told to James Ramsay Ullman' ಈ ಕೃತಿಯ ಕನ್ನಡ ಆವೃತ್ತಿಯನ್ನು ಹೊರ ತರಲು ಸಹಕರಿಸಿ ಎಂದು ಕೇಳಿಕೊಂಡು, ಅನುವಾದ ಮಾಡಿದರು. ಇಂತಹ ಸಾಹಸಮಯ, ಆದರ್ಶಮಯ ಕೃತಿ ಸಾಹಿತ್ಯಲೋಕಕ್ಕೆ ನೀಡಿದ ಕಾಣಿಕೆ. ಸಂಸ್ಕೃತ ಭಾಷೆಯಿಂದ ಕೂಡ ಹಲವು ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿದ್ದರು. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಯವರು ಕಾಳಿದಾಸನ ಮೇಘ ಸಂದೇಶವನ್ನು, ಬಾರವಿಯ ಕಿರಾತಾರ್ಜುನಿಯವನ್ನು ಕನ್ನಡಕ್ಕೆ ಅನುವಾದಿಸಿದ್ದರು. ಇವುಗಳನ್ನು ಅವರ ಪುತ್ರ ಸೀತಾರಾಮ ಶಾಸ್ತ್ರಿಯವರು ತಂದೆಯವರ ಕಾಲಾನಂತರ ಪ್ರಕಟ ಮಾಡಿಸಿದ್ದರು. ಇಷ್ಟೇ ಅಲ್ಲದೇ ಪ್ರೊ.ಎಂ.ಹಿರಿಯಣ್ಣ ಅವರ Art experiments, popular Essays of Indian philosophy,

outline of Indian Philosophy, B.G.L ಸ್ವಾಮಿಯವರ 'The Dair of a Botanist' ಮುಂತಾದ ಇಂಗ್ಲಿಷ್ ಕೃತಿಗಳನ್ನು ಕೂಡ ಕಾವ್ಯಾಲಯದ ಮೂಲಕ ಪ್ರಕಟಿಸಿದ್ದರು.

ಅನುವಾದ ಕಾರ್ಯಗಳಿಗೆ ಸಂಬಂಧಿಸಿದಂತೆ ಕಾವ್ಯಾಲಯ ಕೈಗೊಂಡ ಜವಾಬ್ದಾರಿ ಮಹತ್ತರವಾದುದು. ದೇಶ, ವಿದೇಶಗಳಲ್ಲಿ ಅನುವಾದಕ್ಕೆ ಅನುಮತಿ ಪಡೆದು ಕೆಲಸ ಪ್ರಾರಂಭಿಸಿದ್ದರು. ಪುಸ್ತಕೋದ್ಯಮ ನಷ್ಟವುಳ್ಳ ಉದ್ಯಮ ಎಂದು ತಿಳಿದಿದ್ದರೂ ಕೂಡ ವಿದೇಶಗಳ ದುಬಾರಿ ಬೆಲೆಗೆ ಓಂದೆ ಸರಿಯದೆ ಅತ್ಯುತ್ತಮ ಕೃತಿಗಳನ್ನು ಪ್ರಕಟಿಸುವ ಕೆಲಸವನ್ನು ಮುಂದುವರಿಸಿತು.

೫.೪ ಪಠ್ಯ ಪುಸ್ತಕಗಳ ಪ್ರಕಟಣೆ

ಕಾವ್ಯಾಲಯ ಸಾಹಿತ್ಯ ಕೃತಿಗಳನ್ನು ಮಾತ್ರ ಪ್ರಕಟಿಸಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕೆ ಅಗತ್ಯವಾದ ಪಠ್ಯಪುಸ್ತಕಗಳನ್ನು ಕೂಡ ಪ್ರಕಟಿಸಿದೆ. ಸರ್ಕಾರದ ಸಲಹೆ ಮೇರೆಗೆ ಈ ಕಾರ್ಯವನ್ನು ನಿರ್ವಹಿಸುತ್ತಿತ್ತು. ಎಷ್ಟೋ ಬಾರಿ ಪಠ್ಯಗಳ ಪ್ರತಿಗಳು ಮುಗಿದುಹೋಗಿ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿತ್ತು. ಆಗ ಕಾವ್ಯಾಲಯ ತಮ್ಮ ಒತ್ತಡಗಳ ನಡುವೆಯೂ ಪಠ್ಯಗಳನ್ನು ಪುನಃ ಪುನಃ ಮುದ್ರಿಸಿ ಮಕ್ಕಳಿಗೆ ಒದಗಿಸುತ್ತಿತ್ತು.

Public Instruction of Mysore ನ ನಿರ್ದೇಶಕರಾದ ಎಂ.ಸಿ. ಮುನಿ ಸ್ವಾಮಿಯವರು ಕಾವ್ಯಾಲಯಕ್ಕೆ ದಿನಾಂಕ. ೭ ಜನವರಿ ೧೯೫೫ರಂದು ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದರಲ್ಲಿ ಪಠ್ಯಪುಸ್ತಕಗಳಿಗೆ ಸಂಬಂಧಿಸಿದ ವಿಚಾರಗಳಿವೆ. ಮೈಸೂರು ರಾಜ್ಯದ ೮ನೇ ತರಗತಿಯ ಮಕ್ಕಳಿಗೆ ಪಠ್ಯಕ್ರಮ ಬದಲಾಗಿದೆ. ಅವರಿಗೆ ಅಗತ್ಯವಾದ ಪುಸ್ತಕಗಳನ್ನು ಮುದ್ರಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ಹಾಗೆಯೇ ಮುದ್ರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳನ್ನು ತಿಳಿಸಲಾಗಿದೆ. ಲೇಖಕರನ್ನು ಪ್ರಕಾಶಕರನ್ನು ಇಬ್ಬರನ್ನೂ ಸೇರಿಸಿ ಸಮಾಲೋಚನೆ ನಡೆಸುತ್ತೇವೆ. ಅನಂತರ ಆಯ್ಕೆ ಪ್ರಕ್ರಿಯೆಯನ್ನು ನಡೆಸೋಣ ಎಂದು ತಿಳಿಸಲಾಗಿದೆ. ಎಷ್ಟೇ ಪಠ್ಯಪುಸ್ತಕಗಳನ್ನು ಮುದ್ರಿಸಿದರೂ ಮೂರು ನೂರು ಪ್ರತಿಗಳನ್ನು ಕಛೇರಿಯ ಬಳಕೆಗೆ ನೀಡಬೇಕೆಂಬ ನಿಯಮ ಈ ಪತ್ರದಲ್ಲಿ ಸ್ಪಷ್ಟವಾಗಿದೆ. ಸಾಹಿತ್ಯ ಕೃತಿಗಳ ಪ್ರಕಟಣೆಗೆ ಸಂಬಂಧಿಸಿದಂತೆ ಕಛೇರಿಯಲ್ಲಿ ಎಷ್ಟೇ ಒತ್ತಡಗಳಿದ್ದರೂ ಆ ನಡುವೆಯೇ ಇತರ ಕೆಲಸಗಳನ್ನು ಕೂಡ ಅಷ್ಟೇ ಕಾಳಜಿ ವಹಿಸಿ ನಿರ್ವಹಿಸುತ್ತಿದ್ದರು ಎಂಬ ವಿಷಯ ದಾಖಲೆಗಳನ್ನು ನೋಡಿದಾಗ ಸ್ಪಷ್ಟವಾಗುತ್ತದೆ.

ಪಠ್ಯ ಪುಸ್ತಕಗಳಿಗೆ ಸಂಬಂಧಿಸಿದ ನಿಯಮಗಳಿಗೆ ಸದಾ ಬದ್ಧರಾಗಿರುತ್ತಿದ್ದರು. ಕೇವಲ ಕರ್ನಾಟಕ ರಾಜ್ಯ ಸರ್ಕಾರದ ನಿಯಮಗಳನ್ನಷ್ಟೇ ಅಲ್ಲದೆ ಆಂಧ್ರಪ್ರದೇಶದ ಸರ್ಕಾರದ ನಿಯಮಗಳಿಗೆ ಕೂಡ ಬದ್ದರಾಗಿರುತ್ತಿದ್ದರು. ಎಂಬ

ಅಂಶಗಳು ಅಧ್ಯಯನ ಸಂದರ್ಭದಲ್ಲಿ ದೊರಕಿವೆ. ಆಂಧ್ರ ಪ್ರದೇಶದ Govt. Exams ನ ಕಮೀಶನರ್ ಅವರು ೧೫-೧೨-೧೯೫೭ ರಂದು ಒಂದು ಪತ್ರ ಕಳುಹಿಸಿದ್ದಾರೆ. ಅದರಲ್ಲಿ ಆಂಧ್ರ text book committee ಯು exiting Rules ಒಳಗೊಂಡಿದೆ. ನೀವು ಇದರಲ್ಲಿ ಒಪ್ಪಂದ ಮಾಡಿಕೊಳ್ಳುವುದಾದರೆ ನೊಂದಾವಣಿ ಮಾಡಿಕೊಳ್ಳಿ ಎಂದು ತಿಳಿಸಿದ್ದಾರೆ.

ಆಂಧ್ರ ಪ್ರದೇಶದ ಪಠ್ಯ ಪುಸ್ತಕಗಳ ನಿಯಮಗಳಿಗೆ ಬದ್ದರಾದ ಮೇಲೆ ಅವರ ನಿಯಮದಂತೆಯೇ ಅವರಿಗೆ ಅಗತ್ಯವಾದ ಪುಸ್ತಕಗಳನ್ನು ಪ್ರಕಟಿಸಬೇಕಿತ್ತು. ೧೯೫೯-೬೦ನೇ ಸಾಲಿನ ಹೈದರಾಬಾದ್ ಕರ್ನಾಟಕ ಭಾಗದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಂತದ ಪಠ್ಯ ಪುಸ್ತಗಳನ್ನು ಮುದ್ರಿಸಿ ಬೇಗ ಕಳುಹಿಸಿಕೊಡಿ ಎಂದು ಕೇಳಿಕೊಂಡಿರುವ ವಿಚಾರ ತಿಳಿದುಬರುತ್ತದೆ. ಹೀಗೆ ಕರ್ನಾಟಕ ಮತ್ತು ಆಂಧ್ರ ಭಾಗದ ಮಕ್ಕಳಿಗೆ ಸರ್ಕಾರ ಆಯ್ಕೆ ಮಾಡಿದ ಪಠ್ಯಗಳನ್ನು ಪ್ರಕಟ ಪಡಿಸಿಕೊಡುತ್ತಿತ್ತು.

ಲೇಖಕರ ಕೃತಿಗಳನ್ನು ಪಠ್ಯಗಳಾಗಿ ಮುದ್ರಿಸಿರುವ ವಿಚಾರ

ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅನೇಕ ಸಂದರ್ಭಗಳಲ್ಲಿ ಸಾಹಿತಿಗಳ ಕೃತಿಗಳನ್ನು ಪಠ್ಯವನ್ನಾಗಿ ಆಯ್ಕೆ ಮಾಡಿರಲಾಗುತ್ತಿತ್ತು. ಆಗ ಆ ಕೃತಿಗಳ ಪ್ರಕಟಣೆಯ ಹಕ್ಕುಗಳನ್ನು ಪಡೆದಿರುವ ಪ್ರಕಾಶಕರ ಒಳ ಅನುಮತಿ ಕೇಳುವ ಅಗತ್ಯವಿರುತ್ತದೆ. ಪ್ರಕಾಶಕರು ಒಪ್ಪಿದ ಮೇಲೆ ಅವರೇ ಮುದ್ರಿಸಿ ಕೊಡಬೇಕಾಗುತ್ತದೆ. ಈ ನಿಟ್ಟಲ್ಲಿ ಕಾವ್ಯಾಲಯ ಸಾಕಷ್ಟು ಕೃತಿಗಳನ್ನು ಪಠ್ಯಗಳನ್ನಾಗಿ ಪ್ರಕಟಿಸಿದೆ. ಇದಕ್ಕೆ ಸಂಬಂಧಿಸಿದ ಮಾಹಿತಿಗಳು ಪತ್ರ ರೂಪದಲ್ಲಿ ದೊರಕಿಲ್ಲ. ಆದರೆ ಕಾವ್ಯಾಲಯದಿಂದ ಮರು ಮುದ್ರಣಗೊಂಡ ಕೃತಿಗಳನ್ನು ಗಮನಿಸಿದಾಗ 'ಅರಿಕೆ' ಅಥವಾ ಪ್ರಕಾಶಕರ ನುಡಿ ಅಥವಾ ಮುನ್ನುಡಿಯ ಭಾಗಗಳಲ್ಲ ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಪಷ್ಟ ಮಾಹಿತಿ ದೊರಕುತ್ತದೆ. ತೀ.ನಂ.ಶ್ರೀ ಯವರ ರಾಕ್ಷಸನ ಮುದ್ರಿಕೆ, ಕೂಡಲಿ ಚಿದಂಬರಂ ಅನುವಾದಿಸಿರುವ ಎವರೆಸ್ಟ್ ವೀರ ತೇನ್‌ಸಿಂಗ್, ಹೀಗೆ ಹಲವಾರು ಕೃತಿಗಳ ಭಾಗಗಳು ಅಥವಾ ಕೃತಿಗಳು ಪಠ್ಯವಾಗಿ ಆಯ್ಕೆಯಾಗಿದ್ದವು.

ಸಾಹಿತ್ಯ ಕೃತಿಗಳು ಪಠ್ಯವಾಗಿರುವ ವಿಷಯ ಕೆಲವು ಪತ್ರಗಳಿಂದ ಸ್ಪಷ್ಟವಾಗುತ್ತದೆ. ರಾಳಪಲ್ಲಿ ಅನಂತಕೃಷ್ಣ ಶರ್ಮರ 'ಸಾಹಿತ್ಯ ಮತ್ತು ಜೀವನ ಕಲೆ' ಎಂಬ ಕೃತಿ ಬಿ.ಎ.ತರಗತಿಗಳಿಗೆ ಪಠ್ಯವಾಗಿ ಆಯ್ಕೆಯಾಗಿರುವ ವಿಷಯ ೬-೫-೧೯೫೮ ರ ಪತ್ರದಲ್ಲಿ ತಿಳಿಯುತ್ತದೆ. Text book officer, Fort, Trivandrum ಇಲ್ಲಿನ ಮುಖ್ಯಸ್ಥರು ಕಾವ್ಯಾಲಯಕ್ಕೆ ಪತ್ರ ಬರೆದಿದ್ದರು. 8ನೇ ತರಗತಿ ವಿದ್ಯಾರ್ಥಿಗಳಿಗೆ 'ಗಿಳಿವಿಂಡು' ಸಂಕಲನದಿಂದ 'ಕನ್ನಡಿಗರ ತಾಯಿ' ಎಂಬ ಕವನವನ್ನು ಪಠ್ಯಕ್ಕೆ ಸೇರಿಸುತ್ತೇವೆ. ಇದಕ್ಕೆ ಅನುಮತಿ ನೀಡಿ ಎಂದು ಕೇಳಿದ್ದಾರೆ. ಕೇರಳ ಸರ್ಕಾರದ ಕಾಸರಗೋಡು ಭಾಗದ 7ನೇ ತರಗತಿಯ ಕನ್ನಡ ಭಾಷೆ ಆಯ್ಕೆಯ ಮಕ್ಕಳಿಗೆ ಗೋವಿಂದಪೈ ಅವರ 'ತಾಳವ ಮಾತೆ' ಕವನವನ್ನು ಪಠ್ಯಕ್ಕೆ ಆಯ್ಕೆ ಮಾಡಿರುವ ವಿಚಾರವನ್ನು

೨೧.೯.೧೯೬೪ರ ಪತ್ರದ ಮೂಲಕ ಶಿಕ್ಷಣ ಸಚಿವರು ತಿಳಿಸಿದ್ದಾರೆ. ಸಂಗೀತಕ್ಕೆ ಸಂಬಂಧಿಸಿದ ಪಠ್ಯಪುಸ್ತಕದಲ್ಲಿ ಗೋವಿಂದ ಪೈ ಅವರ 'ತಾಯೆ ಬಾರ ಮೊಗವ ತೋರೆ' ಕವನವನ್ನು ಸೇರಿಸಿರುವ ವಿಚಾರವನ್ನು Deputy director of public Instruction ಅವರು ತಿಳಿಸಿದ್ದರು.

ಟಿ.ಸಿ.ಹೆಚ್ ಪದವಿಯ ಪಠ್ಯಕ್ಕೆ ಗೋವಿಂದ ಪೈ ಅವರ 'ಗೊಲ್ಗೊಥಾ' ಕೃತಿಯ 'ಮೆಲ್ಲಮೆಲ್ಲಗೆ ತೆಗೆದುದ ಕತ್ತಲ್' ಭಾಗವನ್ನು ಸೇರಿಸಿಕೊಳ್ಳಲು Deputy director ಅನುಮತಿ ಕೇಳಿದ್ದರು. ಧಾರವಾಡದಲ್ಲಿ ಕುವೆಂಪು ಅವರ 'ಜಲಗಾರ ನಾಟಕವು ಪಠ್ಯವಾಗಿ ಆಯ್ಕೆಯಾಗಿದೆ. ಅದನ್ನು ಕಳುಹಿಸಿ ಎಂದು ಮನೋಹರ ಗ್ರಂಥ ಭಂಡಾರದಿಂದ ಇವರು ೧೪-೬-೪೪ರಂದು ಪತ್ರ ಬರೆದಿದ್ದರು.

ಚ.ವಾಸುದೇವಪ್ಪನವರ 'ಭೀಷ್ಮ ಚರಿತ್ರೆ' ಕೃತಿಯ 'ಭೀಷ್ಮ ಪ್ರತಿಜ್ಞೆ'ಭಾಗವು ೮ನೇ ತರಗತಿಗೆ ಪಠ್ಯವಾಗಿ. 'ಆರ್ಯಕೀರ್ತಿ' ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಗೆ ಪ್ರವೇಶಿಕ ಪರೀಕ್ಷೆಗೆ ಪಠ್ಯವಾಗಿ ಆಯ್ಕೆಯಾಗಿರುವ ವಿಚಾರ ೩೦ ಮತ್ತು ೫೨ರ ಪತ್ರದಲ್ಲಿದೆ. ಹೀಗೆ ಪಟ್ಟಿ ಮಾಡುತ್ತ ಹೋದರೆ ಅನೇಕ ಲೇಖಕರ ಪುಸ್ತಕಗಳು ಪಠ್ಯಗಳನ್ನಾಗಿ ಆಯ್ಕೆ ಮಾಡಿಕೊಂಡಿರುವ ವಿಚಾರ ತಿಳಿದುಬರುತ್ತದೆ. ಈ ಮೂಲಕ ಸಾಹಿತ್ಯ ಬೆಳವಣಿಗೆಯು ತಿರುವನ್ನು ಪಡೆದುಕೊಳ್ಳುತ್ತಿತ್ತು. ಇದನ್ನೆಲ್ಲಾ ಗಮನಿಸಿದಾಗ ಪ್ರಕಟಣೆಗಳ ಅನನ್ಯತೆ ತಿಳಿದುಬರುತ್ತದೆ.

ಪ್ರಕಾಶಕರ ಮಾತು ಅಥವಾ ಅರಿಕೆ

ಕಾವ್ಯಾಲಯದಿಂದ ಪ್ರಕಟವಾಗುತ್ತಿದ್ದಂತಹ ಪ್ರತಿಯೊಂದು ಕೃತಿಗಳೂ ಒಂದೊಂದು ಹಿನ್ನೆಲೆಯಲ್ಲಿ, ಭಿನ್ನ ಭಿನ್ನ ಉದ್ದೇಶವನ್ನಿಟ್ಟುಕೊಂಡು ರಚನೆಯಾಗುತ್ತಿದ್ದವು. ಈ ಅಂಶಗಳು ಕೃತಿಯನ್ನು ಸಂಪೂರ್ಣವಾಗಿ ಗ್ರಹಿಸಿದಾಗ ತಿಳಿದು ಬರುತ್ತದೆ. ಅಷ್ಟೇ ಅಲ್ಲದೇ ಇದನ್ನು ಸೂಕ್ಷ್ಮವಾಗಿ ಪ್ರಕಾಶಕರ ಮಾತಿನಲ್ಲಿ ಮತ್ತು ಅರಿಕೆಯಲ್ಲಿ ತಿಳಿದುಕೊಳ್ಳಬಹುದು. ಕಾವ್ಯಾಲಯದಿಂದ ಕೇವಲ ಸಾಹಿತ್ಯ ಕೃತಿಗಳಷ್ಟೇ ಪ್ರಕಟವಾಗುತ್ತಿರಲಿಲ್ಲ. ವಿಜ್ಞಾನ, ರಾಜಕೀಯ, ತತ್ವಜ್ಞಾನ, ಸಮಾಜ ಹೀಗೆ ಹಲವಾರು ಅಂಶಗಳನ್ನು ಒಳಗೊಂಡ ವಿಭಿನ್ನ ಕೃತಿಗಳು ರಚನೆಯಾಗುತ್ತಿದ್ದವು. ಈ ಬಗೆಯ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸುವುದು ಸೂಕ್ತವೆನಿಸಿ, ಕಾವ್ಯಾಲಯದಿಂದ ಪ್ರಕಟವಾದಂತಹ ಕೆಲವು ಕೃತಿಗಳ ಅರಿಕೆಯನ್ನು ಆಯ್ಕೆ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅನೇಕ ಕೃತಿಗಳು ಪತ್ರಿಕೆಗಳಲ್ಲಿ ಸಂಚಿಕೆಗಳಾಗಿ ಪ್ರಕಟವಾಗುತ್ತಿದ್ದವು. ಅವುಗಳಲ್ಲಿ ಕೆಲವು ಕೃತಿ ರೂಪದಲ್ಲಿ ಪ್ರಕಟವಾಗುತ್ತಿದ್ದವು. ಕೆಲವು ಹಾಗೆಯೇ ಉಳಿದು ಬಿಡುತ್ತಿದ್ದವು. ಹೀಗೆ ಪತ್ರಿಕೆಗಳಿಗೇನೇ ಸೀಮಿತವಾಗಿ ಉಳಿದು ಬಿಡುತ್ತಿದ್ದ ಕೃತಿಗಳನ್ನು, ಲೇಖಕರನ್ನು ಓದುಗ ವರ್ಗಕ್ಕೆ ಪರಿಚಯಿಸುವ ಕೆಲಸವನ್ನು ಚಿದಂಬರಂ ಮಾಡುತ್ತಿದ್ದರು.

ಆದರೆ ಕೆಲವೊಮ್ಮೆ ಲೇಖಕರು ಒಪ್ಪುತ್ತಿರಲಿಲ್ಲ, ಮರೆಯಲ್ಲಿಯೇ ಇರಲು ಇಷ್ಟಪಡುತ್ತಿದ್ದರು. ದೇವಕಿ ಮೂರ್ತಿಯವರ ಉಪಾಸನೆ, ಕೆಂಪುಗುಲಾಬಿ, ನಿರೀಕ್ಷೆ ಈ ಬರಹಗಳು ಮೊದಲು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಆನಂತರ ಚಿದಂಬರಂ ಒಟ್ಟಾಗಿ ಸೇರಿಸಿ ಪ್ರಕಟಪಡಿಸಿದ್ದರು.

ಎಸ್.ಜಿ.ಶಾಸ್ತ್ರಿ ಎಂಬ ಲೇಖಕರ ಕಥೆಗಳು ಒಂದಕ್ಕೊಂದು ಸಂಬಂಧವಿದ್ದರೂ ಅವುಗಳನ್ನು ಒಟ್ಟಾಗಿ ಗ್ರಹಿಸಲು ಸಾಧ್ಯವಿರಲಿಲ್ಲ. ಏಕೆಂದರೆ ಪತ್ರಿಕೆಗಳಲ್ಲಿ ಸಂಚಿಕೆ ರೂಪದಲ್ಲಿ ಪ್ರಕಟವಾಗಿದ್ದವು. ಇದನ್ನು ತಿಳಿದು ಪ್ರಕಾಶಕರು ಅವುಗಳನ್ನು ಪ್ರಕಟಿಸುವ ಇಚ್ಛೆ ತೋರಿಸಿದರೆ ಅವರು ಒಪ್ಪಿರಲಿಲ್ಲ. ಆನಂತರ ಆನಂದರ ಬಳಿ ಹೇಳಿಸಿ ಒಪ್ಪಿಸಿ 'ಇದ್ದರೂ ಇರಬಹುದು' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿದ್ದರು. ಈ ಮೂಲಕ ಕಾವ್ಯಾಲಯ ಲೇಖಕರ ಬೆಳವಣಿಗೆಗೆ ಒತ್ತಾಸೆಯನ್ನು ನೀಡಿದುದನ್ನು ಗುರುತಿಸಬಹುದು. ಜೀವನಕ್ಕೆ ಸಂಬಂಧಿಸಿದ ಸ್ವಾಭಾವಿಕವೆನಿಸುವ ಕಥೆಗಳನ್ನು ಪ್ರಕಟಿಸುತ್ತಿದ್ದರು. ಏಕೆಂದರೆ ಅವುಗಳಲ್ಲಿ ಕಲ್ಪನೆ. ರಂಜನೆಗಿಂತ ಯಥಾರ್ಥತೆ, ನೈಸರ್ಗಿಕತೆ ಹೆಚ್ಚಾಗಿ ಇರುತ್ತಿದ್ದವು. ಕ.ಶಂಕರ ಅವರ 'ಪ್ರೇಮ ಪ್ರಕರಣ'ವನ್ನು ಪ್ರಕಟಿಸುವಾಗ ಈ ಉದ್ದೇಶವನ್ನಿಟ್ಟುಕೊಂಡಿದ್ದರು. ಅವರ ಪ್ರಕಾರ ಈ ಕೃತಿಯ 'ಒದು ನಿಯಮಿತ ವೇಳೆಯಲ್ಲಿ ತಲುಪುವ ಸುಖಪ್ರಯಾಣದ ರೈಲಿನ ನೆನಪು'.

ಕೃತಿಗಳನ್ನು ಅನುವಾದ ಮಾಡಿ ಜನರಿಗೆ ತಲುಪಿಸುತ್ತಿದ್ದರು. ಈ ಮೂಲಕ ಜನರಲ್ಲಿ ವಿಶೇಷ ಅರಿವು ಮೂಡಿಸಲಾಗುತ್ತಿತ್ತು. ಆರ್.ಪಿ.ಮಸನಿಯವರ 'ದಾದಾಬಾಯಿ ನವರೋಜಿ' ಎಂಬ ಕೃತಿಯನ್ನು ಸ್ವತಃ ಚಿದಂಬರಂ ಅನುವಾದ ಮಾಡಿದ್ದರು. ಈ ಕೃತಿಯ ಅನುವಾದದ ಹಿಂದೆ ಮಹತ್ವವಾದ ಉದ್ದೇಶವಿತ್ತು ಎಂಬುದು ಅರಿಕೆಯಿಂದ ಸ್ಪಷ್ಟವಾಗುತ್ತದೆ. ನಮ್ಮ ದೇಶದ ಅಪರಿಮಿತವಾದ ದುಃಖದಾರಿದ್ರ್ಯಗಳನ್ನು ಕಂಡುಕೊಂಡು ಅವುಗಳ ನಿವಾರಣೆಗೆ ಸ್ವಾವಳಿತ ಪದ್ಧತಿಯೇ ಪರಮ ಪರಿಹಾರವೆಂದು ತಿಳಿದು ಸ್ವದೇಶದಲ್ಲಿಯೂ, ಹೊರಗೂ ರಾಜಕೀಯ ಚಳುವಳಿಯನ್ನು ಹೂಡಿದವರಲ್ಲಿ ನವರೋಜಿ ಮೊದಲಿಗ ೫೦ ವರ್ಷಗಳಿಗೂ ಮೇಲ್ಪಟ್ಟ ದೇಶಸೇವೆಯಿಂದ ದಾದಾಬಾಯಿ ಭಾರತೀಯ ಮಹಾಕುಲ ವೃದ್ಧನೆಂದು ಜನರಿಂದ ಸನ್ಮಾನ್ಯನಾದನು. ಹೀಗೆ ಪೂಜ್ಯನೂ ಸ್ವರಾಜ್ಯ ಸ್ಥಾಪಕರಲ್ಲಿ ಅಗ್ರಗಣ್ಯನೂ ಆದ ಈ ದೇಶಭಕ್ತನ ಚರಿತ್ರೆಯನ್ನು, ಜನ ಸ್ವರಾಜ್ಯವನ್ನು ಅನುಭವಿಸುತ್ತಿರುವ ಈ ಸಮಯದಲ್ಲಿ ಆದರದಿಂದ ಬರಮಾಡಿಕೊಳ್ಳುವರೆಂಬ ನಿರೀಕ್ಷೆಯಲ್ಲಿ ಈ ಕೃತಿಯನ್ನು ಹೊರತರುತ್ತಿದ್ದೇನೆ ಎಂದು ತಿಳಿಸಿದ್ದಾರೆ.

ಇದೇ ರೀತಿ ಮಹಾತ್ಮಗಾಂಧಿಯವರ ಜೀವನ ವಿಚಾರಗಳನ್ನು ಜನತೆಗೆ ತಲುಪಿಸುವ ಉದ್ದೇಶದಿಂದ ಲೂಯಿ ಫಿಷರ್ ಅವರ ಕೃತಿಯನ್ನು 'ಮಹಾತ್ಮಗಾಂಧಿ-ಜಗತ್ತಿಗೆ ಅವರ ಸಂದೇಶ' ಎಂಬುದಾಗಿ ಹೆಚ್.ವಿ.ಸಾವಿತ್ರಮ್ಮ ಅನುವಾದಿಸಿದುದನ್ನು ಪ್ರಕಟಿಸಿದ್ದರು. ಅವರ ಜೀವನ ಸಾಧನೆಗನ್ನು' ಭಾರತೀಯರಿಗೆ ಬಿಳಿಯರೊಡನೆ ಸಮಾನ

ಹಕ್ಕುಗಳನ್ನು ಗಳಿಸಿಕೊಡಲು ದಕ್ಷಿಣ ಆಫ್ರಿಕದಲ್ಲಿ ನಡೆಸಿದ ಸತ್ಯಾಗ್ರಹ, ಭಾರತಕ್ಕೆ ಹಿಂದಿರುಗಿದ ಮೇಲೆ ಸ್ವಾತಂತ್ರ್ಯ ಸಾಧನೆಯಲ್ಲಿ ತೋರಿದ ಅಸಾಮಾನ್ಯ ಸಾಮರ್ಥ್ಯಗಳನ್ನು ತಿಳಿಸುವ ಉದ್ದೇಶವನ್ನು ಈ ಕೃತಿ ಹೊಂದಿತ್ತು. ಜಗತ್ತಿನ ಕೋಟ್ಯಾಂತರ ಜನರ ಜೀವನವನ್ನು ಪ್ರಭಾವಿಸಿದ ಮಹಾತ್ಮರ ಬೋಧನೆಯ ಅರ್ಥ ತಿಳಿಸುವ ಹಿನ್ನೆಲೆ ಈ ಕೃತಿಗಿದೆ ಎಂದು ಅರಿಕೆಯಲ್ಲಿ ತಿಳಿಸಲಾಗಿದೆ.

ಇನ್ನು ಜವಾಹರಲಾಲ್‌ಗೆ ಸಂಬಂಧಿಸಿದಂತೆ 'ಭಾರತ ದರ್ಶನ' ಎಂಬ ಕೃತಿಯು ಪ್ರಕಟವಾಗಿತ್ತು. ಆ ಕೃತಿಯಲ್ಲಿ ಭಾರತಕ್ಕೆ ಸಂಬಂಧಿಸಿದಂತೆ ಹಲವಾರು ವಿಚಾರಗಳಿವೆ. ಬಹುಹಿಂದೆ ಪ್ರಪಂಚದ ಬಹುಭಾಗ ಅಜ್ಞಾನದಲ್ಲಿ ಮುಳುಗಿದ್ದಾಗ ಭಾರತ ಶ್ರೀಮಂತವಾದ ಸಂಸ್ಕಾರ, ಉದಾತ್ತಧರ್ಮ ತತ್ವ ಮೆರೆದು ಬೆಳಕಾಯಿತು. ಇಂತಹ ಚೈತನ್ಯವನ್ನು ಕಳೆದುಕೊಂಡು ಭಾರತ ಇಂಗ್ಲೆಂಡ್‌ಗೆ ಹೇಗೆ ವಶವಾಯಿತು? ಹೀಗೆ ಹಲವಾರು ಪ್ರಶ್ನೆಗಳು ಹುಟ್ಟಿಕೊಂಡಿದ್ದು ನೆಹರೂರವರ ವಿಚಾರ ಲಹರಿಯಲ್ಲಿ. ಇವೆಲ್ಲವುಗಳ ಅವಲೋಕನ ಈ ಕೃತಿಯಲ್ಲಿದೆ. ಪ್ರತಿಯೊಬ್ಬ ಭಾರತೀಯನೂ ಓದಬೇಕಾದ ಕೃತಿ ಇದು. ಆಶಾವಾದಿಯಾದ ಭಾರತೀಯನಿಗೆ ಮಾರ್ಗದರ್ಶನ ಕೃತಿ ಇದು ಎಂಬ ವಿಚಾರದ ಹಿನ್ನೆಲೆಯಲ್ಲಿ ಈ ಕೃತಿ ಪ್ರಕಟಿಸಲಾಗಿತ್ತು.

ಸ್ವಾತಂತ್ರ್ಯ ಹೋರಾಟಗಾರರ ಆದರ್ಶವನ್ನು ಜನರಲ್ಲಿ ಮೂಡಿಸುವ ಉದ್ದೇಶದಿಂದ ಕೂಡ ಕೆಲವು ಕೃತಿಗಳು ಪ್ರಕಟವಾದವು. ಅವುಗಳಲ್ಲಿ ಮುಖ್ಯವಾದುದು 'ಝಾನ್ಸಿಯ ರಾಣಿ ಲಕ್ಷ್ಮೀಬಾಯಿ'. ಕೇವಲ ೨೩ ವರ್ಷ ಇರುವಾಗಲೇ ಇಂಗ್ಲಿಷ್‌ರೊಡನೆ ಹೋರಾಟ ಮಾಡಿ ಮಡಿದಂತಹ ಆಕೆಯ ದೇಶ ಪ್ರೇಮ, ಶೌರ್ಯ, ಸಾಹಸ, ತ್ಯಾಗ ಭಾರತೀಯರಿಗೆ ಇಂದಿಗೂ ಸ್ಫೂರ್ತಿದಾಯಕವಾಗಬಹುದು ಎಂಬ ಉದ್ದೇಶದಿಂದ ಪ್ರಕಟಿಸಲಾಗಿದೆ ಎಂದು ತಿಳಿಸಿದ್ದಾರೆ. ಹಾಗೆಯೇ ಕನ್ನಡಿಗರಿಗೆ ಪರಿಚಯಿಸುವ ಉದ್ದೇಶದೊಂದಿಗೆ ರಚನೆಯಾಗಿದೆ ಎನ್ನಲಾಗಿದೆ.

ಒಂದೇ ಪರಂಪರೆಯನ್ನು ಅನುಕರಿಸಿ ಸಾಕಷ್ಟು ಸಾಹಿತ್ಯ ಕೃತಿಗಳು ರಚನೆಯಾಗುತ್ತಿದ್ದವು. ಈ ಸಂದರ್ಭದಲ್ಲಿ ಸರಳ ಶೈಲಿಯಲ್ಲಿ ಭಿನ್ನ ತಂತ್ರದಲ್ಲಿ ಎಂ.ಎಸ್.ಪುಟ್ಟಣ್ಣನವರ ಕೃತಿಗಳು ರಚನೆಯಾದವು. ಅದುವರೆಗೂ ಸಮಾಜದ ಬದುಕನ್ನು ಮರೆತು ರಾಮಾಯಣ, ಮಹಾಭಾರತಗಳನ್ನೇ ಅವಲಂಬಿಸಿ ಕಾವ್ಯಗಳನ್ನು ರಚಿಸುತ್ತಿದ್ದರು. ಇನ್ನೊಂದೆಡೆ ಬಂಗಾಳಿ ಕಾದಂಬರಿಗಳ ಪ್ರಭಾವಕ್ಕೆ ಒಳಗಾಗಿ ರಚನಾ ಶೈಲಿ, ಕೃತಿಯ ಶೀರ್ಷಿಕೆಗಳು ಕೂಡ ಬಂಗಾಳಿ ಅನುಕರಣೆಗೊಳಗಾಗಿದ್ದವು. ಇಂತಹ ಸಂಕ್ರಮಣ ಸನ್ನಿವೇಶದಲ್ಲಿ ರಚನೆಯಾದ ಎಂ.ಎಸ್.ಪುಟ್ಟಣನವರ ಕೃತಿಗಳನ್ನು ಜನರಿಗೆ ತಲುಪಿಸುವಲ್ಲಿ ನಿಜವಾದ ಅರ್ಥವಿದೆ ಎಂಬ ಹಿನ್ನೆಲೆಯಲ್ಲಿ ಈ ಕೃತಿಯನ್ನು ಪ್ರಕಟಿಸಲಾಗಿತ್ತು. ಹೀಗೆ ಸಮಾಜಮುಖಿ ಚಿಂತನೆಗಳನ್ನು ಒಂದು ಕೃತಿಯ ಮೂಲಕವೂ ಓದುಗರಿಗೆ ತಲುಪಿಸುವ ಆಶಯ ಪ್ರಕಾಶಕರದಾಗಿತ್ತು. ಮಕ್ಕಳಿಗಾಗಿ ಹಲವಾರು ಕೃತಿಗಳನ್ನು ಪ್ರಕಟಿಸಿದರು. ಮಕ್ಕಳ ಮನಸ್ಸನ್ನು ವಿಕಾಸಗೊಳಿಸುವಲ್ಲಿ ಕೃತಿಗಳು ಪ್ರಮುಖ ಪಾತ್ರವಹಿಸುತ್ತವೆ. ಎಂಬ ಉದ್ದೇಶದಿಂದ ಮಕ್ಕಳಿಗಾಗಿ ವಿಶೇಷ

ಮಾಲೆಯನ್ನೇ ಹೊರತಂದರು. ಕಲಾವಿದರನ್ನು ಆಯ್ಕೆ ಮಾಡಿ ಆಕರ್ಷಕ ಚಿತ್ರಗಳನ್ನು ಬರೆಸಿ ಮಕ್ಕಳ ಮನಸ್ಸನ್ನು ವಿಚಾರಲಹರಿಗೆ ಹರಿಬಿಡುತ್ತಿದ್ದರು. ಎಂ.ಎಸ್.ಪುಟ್ಟಣನವರ 'ಸುಮತಿ ಮದನ ಕುಮಾರ ಚರಿತ್ರೆ' 'ನೀತಿ ಚಿಂತಾಮಣಿ' ಕೃತಿಗಳ ಮೂಲಕ ವಿಭಿನ್ನ ಶಿಕ್ಷಣ ನೀಡುವ ಪ್ರಯತ್ನವನ್ನಿಟ್ಟುಕೊಂಡು ಪ್ರಕಟಿಸಿದರು.

ಪು.ತಿ.ನ ಅವರ 'ದೋಣಿಯ ಬಿನದ ಮತ್ತು ಕವಿ' ಎಂಬ ಕೃತಿಯನ್ನು ಪ್ರಕಟಿಸಲು ಅನೇಕ ಕಾರಣಗಳಿದ್ದವು. ಈ ಕೃತಿಯ ಮೂಲಕ ಕನ್ನಡಕ್ಕೆ ಹೊಸ ಬಗೆಯ ರಚನೆಗಳು ಮುಂದೆ ಬರಲು ಅನುಕೂಲವಾಗುತ್ತದೆಂಬ ಉದ್ದೇಶವಿದೆ. ವಿಶ್ವವ್ಯಾಪಕ ದೃಷ್ಟಿಯನ್ನು ಹರಿಸುವ ಇಂತಹ ಕೃತಿಗಳು ಸಾಹಿತ್ಯ ಲೋಕಕ್ಕೆ ದೊರಕಿದರೆ, ಎಂತಹ ದುರ್ಭಿಕ್ಷ ಕಾಲದಲ್ಲಿಯೂ ಇದು ಮೌಲ್ಯಯುತ ಎಂಬ ಕಾರಣ ವನ್ನಿಟ್ಟುಕೊಂಡು ಪ್ರಕಟವಾಯಿತು. ಪ್ರಪಂಚದ ಸಮೃದ್ಧ ಸಾಹಿತ್ಯದ ಬಿಂದು ಮುಖವನ್ನು ತೋರಿಸುವ ಉದ್ದೇಶದಿಂದ 'ರಷ್ಯಾದ ಹತ್ತು ಸಣ್ಣ ಕಥೆಗಳು' ಕೃತಿಯನ್ನು ಪ್ರಕಟಿಸಲಾಯಿತು. ಕೇವಲ ನಮ್ಮ ಪರಿಧಿಯೊಳಗೆ ಸುತ್ತುವುದರಿಂದ ಯಾವುದೇ ರೀತಿಯ ಅನ್ಯಜ್ಞಾನ ದೊರಕುವುದಿಲ್ಲ. ಬೇರೆ ಭಾಷೆಯ ಸಾಹಿತ್ಯದ ಪರಿಚಯ ಮಾಡಿಕೊಂಡರೆ ಪ್ರಪಂಚದ ನಾನಾ ಮುಖಗಳು ತಿಳಿಯುತ್ತವೆ. ರಷ್ಯಾದ ಪ್ರಸಿದ್ಧ ಕಥೆಗಾರರಾದ ದಾಸ್ತೋವಸ್ಕಿ, ಗಾರ್ಪಿನ್, ಚೆರೋವ್, ಮ್ಯಾಕ್ಸಿಂ ಗಾರ್ಕಿ, ಟಾಲ್‌ಸ್ಟಾಯ್ ಮುಂತಾದವರ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದರು. ಈ ಒಂದು ಪ್ರಯತ್ನ ಲೇಖಕ ಮತ್ತು ಓದುಗ ಇಬ್ಬರಿಗೂ ಮಾದರಿಯಾಯಿತು. ಈ ಬಗೆಯ ಪ್ರಯತ್ನಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಖಂಡಿತ ಯಶಸ್ವಿಯಾಗಿವೆ ಎಂದರೆ ಅತಿಶಯೋಕ್ತಿಯೆನಿಸದು. ಕಾವ್ಯಾಲಯ ವೈಜ್ಞಾನಿಕ ಕೃತಿಗಳ ಪ್ರಕಟಣೆಗೂ ಅವಕಾಶ ನೀಡಿತು. ಆರ್.ಎಲ್.ನರಸಿಂಹಯ್ಯರ 'ಜಗತ್ತುಗಳ ಹುಟ್ಟು ಸಾವು' ಎಂಬ ಕೃತಿಯು ವಿಭಿನ್ನ ಪ್ರಯತ್ನ, ಕನ್ನಡದಲ್ಲಿ ಶಾಸ್ತ್ರೀಯ ಗ್ರಂಥಗಳು, ವಿಜ್ಞಾನದ ಪಾರಿಭಾಷಿಕ ವಿಷಯಗಳನ್ನು ತಿಳಿಸುವ ಕೃತಿಗಳು ವಿರಳ. ಅಲ್ಪವಾದರೂ ಇರುವ ಕೃತಿಗಳು ಇಂಗ್ಲೀಷ್‌ರಿಗೆ ಗ್ರಾಹ್ಯವಾಗುವಂತಹದು. ವಿಜ್ಞಾನದ ವಿಷಯಗಳನ್ನು ಕನ್ನಡದಲ್ಲಿ ತಿಳಿಸುವುದು ಕಷ್ಟ ಎಂಬ ಮಾತನ್ನು ಈ ಕೃತಿ ಸುಳ್ಳು ಮಾಡಿದೆ. ಬಹುಶ್ರಮದ ಫಲದಿಂದ ಈ ಕೃತಿ ಹೊರಬಂದಿದೆ. ಕನ್ನಡಿಗರಿಗೆ ಅಪರೂಪವಾದ ಕಾಣಿಕೆ ಈ ಕೃತಿ ಅವರು ಬಹುಸಂಖ್ಯೆಯಲ್ಲಿ ಇದರ ಲಾಭ ಪಡೆಯಲೇಬೇಕೆಂಬ ಉದ್ದೇಶದೊಂದಿಗೆ ಈ ಕೃತಿ ಪ್ರಕಟವಾಯಿತು. ಸಾಮಾನ್ಯವಾಗಿ ಕೃತಿಗಳ ಆಯ್ಕೆ ಓದುಗನದು. ಆದರೆ ಈ ಕೃತಿಯ ಆಯ್ಕೆಯನ್ನು ಪ್ರಕಾಶಕರೇ ಮಾಡಿಕೊಡುತ್ತಾರೆ ಎಂದಾದರೆ ಆ ಕೃತಿಯ ಮೌಲ್ಯ ಮಹತ್ತರವಾದುದು ಎನ್ನುವುದರಲ್ಲಿ ಎರಡು ಮಾತಿಲ್ಲ.

ಸಾಹಿತ್ಯಲೋಕದಲ್ಲಿ ಅಪವಾದಗಳು ಸರ್ವೇಸಾಮಾನ್ಯ. ಅದು ಯಾವುದೇ ಕಾರಣಕ್ಕಾಗಿ ಯಾದರೂ ಆಗಿರಬಹುದು. ಈ ಅಪವಾದಗಳನ್ನು ಮೀರಿಸಿ ಸಾಹಿತ್ಯ ರಚನೆಯಾಗಬೇಕು. ತೀ.ನಂ.ಶ್ರೀ ಯವರ 'ಬಿಡಿಮುತ್ತು' ಕೃತಿ ಈ

ಹಿನ್ನೆಲೆಯಲ್ಲಿಯೇ ರಚನೆಯಾದುದು. ಸಂಸ್ಕೃತದ ಮುಕ್ತಕಗಳನ್ನು ಈ ಮೂಲಕ ಕನ್ನಡಕ್ಕೆ ತಂದಿದ್ದಾರೆ. ಬಿ.ಎಂ. ಶ್ರೀಯವರು ಸಾಹಿತ್ಯದ ಮೇಲೆ ಒಂದು ಅಪವಾದವನ್ನು ಹೊರಿಸಿದ್ದರು. ಅದೇನೆಂದರೆ ನಮ್ಮ ದೇಶದ ಭಾಷೆಗಳಲ್ಲಿ ಶೃಂಗಾರರಸವನ್ನು ಸೂಕ್ಷ್ಮವಾಗಿ, ಸ್ವಾಭಾವಿಕವಾಗಿ ಗ್ರಹಿಸಿಲ್ಲ ಎಂದಿದ್ದರು. ಅದಕ್ಕಾಗಿ ತೀ.ನಂ.ಶ್ರೀ ಮುಕ್ತಕಗಳಲ್ಲಿ ಈ ಅಂಶಗಳನ್ನು ಗುರುತಿಸಬಹುದು ಎಂದು ತಿಳಿಸಿದರು. ಹೀಗೆ ಲೇಖಕ ಮತ್ತು ಲೇಖಕರ ನಡುವೆ ಮಥಿಸಿದ ವಿಚಾರಗಳನ್ನು ಪ್ರಕಾಶಕರ ತಿಳುವಳಿಕೆಗೂ ತಲುಪಿಸುವ ಉದ್ದೇಶದಿಂದ ಪ್ರಕಟಿಸಿದರು. 'ಎವರೆಸ್ಟ್ ವೀರ ತೇನ್‌ಸಿಂಗ್' ಕೃತಿಯನ್ನು ಕನ್ನಡಕ್ಕೆ ಅನುವಾದ ಮಾಡುವ ಹಿನ್ನೆಲೆಯಲ್ಲಿ ಚಿದಂಬರಂ ಬಹಳ ಶ್ರಮಪಟ್ಟಿದ್ದಾರೆ ಎಂಬ ವಿಷಯ ಅಧ್ಯಯನದ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ. ನೇರವಾಗಿ ತೇನ್‌ಸಿಂಗ್ ಜೊತೆಗೇನೆ ಪತ್ರ ವ್ಯವಹಾರವನ್ನು ಚಿದಂಬರಂ ನಡೆಸಿದ್ದಾರೆ. ಈ ಕೃತಿಯ ಪ್ರಕಟಣೆಯ ಮೂಲ ಉದ್ದೇಶ ಪ್ರತಿ ವ್ಯಕ್ತಿಯ ಮನದಲ್ಲೂ ಛಲ, ಧೈರ್ಯ, ಸಾಹಸ, ನಂಬಿಕೆಯನ್ನು ಮೂಡಿಸುವಂತಹದ್ದು. ತೇನ್‌ಸಿಂಗನ ಆದರ್ಶಗಳು ಓದುಗನಿಗೆ ಮಾದರಿಯಾಗಲಿ ಎಂಬ ಆಶಯದೊಂದಿಗೆ ಪ್ರಕಟಿಸಿದ್ದರು. ಒಂದು ಕೃತಿಯ ಪ್ರವೇಶವನ್ನು ಮಾಡಿಸುವ ಜವಾಬ್ದಾರಿ ಪ್ರಕಾಶಕರಿಗೆ ಕೂಡ ಇರುತ್ತದೆ ಎಂಬ ಹಿನ್ನೆಲೆಯಲ್ಲಿ ಈ ಅರಿಕೆಗಳನ್ನು ಗ್ರಹಿಸಲಾಗಿದೆ.


ಅಧ್ಯಾಯ – ೬
ಕಾವ್ಯಾಲಯ ಮತ್ತು ಇತರ ಸಂಬಂಧಗಳು

೬.೧ ಲೇಖಕರೊಂದಿಗಿನ ಪತ್ರ ವ್ಯವಹಾರ

ಪುಸ್ತಕ ಪ್ರಕಟಿಸುವ ಸಂದರ್ಭದಲ್ಲಿ ಪ್ರಕಾಶಕರಿಗೆ ಹಲವಾರು ಸಮಸ್ಯೆಗಳಿರುತ್ತವೆ. ಅವುಗಳನ್ನೆಲ್ಲ ಪರಿಹರಿಸಿಕೊಂಡು ಪ್ರಕಾಶಕ ಮುಂದೆ ಹೋಗಬೇಕಾಗುತ್ತದೆ. "ಪುಸ್ತಕಗಳ ಅಚ್ಚುಕಟ್ಟಿನಲ್ಲಿ ಸಂಸ್ಥೆ ಸಂಸ್ಥೆಗೆ ವ್ಯತ್ಯಾಸ ತೋರುವುದೂ ಸಹಜ. ಬೇರೆ ಬೇರೆ ಪ್ರಕಾಶಕರ ಕಾರ್ಯ ವಿಧಾನಗಳೂ ನೀತಿಯೂ ಬೇರೆ ಬೇರೆಯಾದರೂ ಅವರೆಲ್ಲರ ಕಾರ್ಯಕ್ಷೇತ್ರ ಒಂದೇ. ಗುರಿ ಒಂದೇ ಹಸ್ತಪ್ರತಿಗಳನ್ನು ಸಂಪಾದಿಸುವುದು, ಪರಿಷ್ಕರಿಸುವುದು, ಗ್ರಂಥಕರ್ತರೊಡನೆ ಒಪ್ಪಂದಕ್ಕೆ ಬರುವುದು ಸ್ವೀಕೃತಿ ಹಸ್ತಪ್ರತಿಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸಿ ಪ್ರಕಟಿಸುವುದು, ಅಚ್ಚಾದ ಗ್ರಂಥಗಳು ಜನರಿಗೆ ಮುಖ್ಯವಾಗಿ ಪುಸ್ತಕ ವ್ಯಾಪಾರಿಗಳ ಮೂಲಕ ಬೆಲೆಗೆ ದೊರೆಯುವಂತೆ ಮಾಡುವುದು ಇವು ಪ್ರಕಾಶಕರಿಗೆಲ್ಲ ಸರ್ವಸಾಧಾರಣವಾದ ಕರ್ತವ್ಯಗಳು."[೧]

ಕೃತಿಗಳು ಪ್ರಕಟಿಸುವಾಗ ಲೇಖಕರ ಜೊತೆಗೆ ಹಲವಾರು ವಿಷಯಗಳ ಕುರಿತು ಚರ್ಚೆ ಮಾಡಿಕೊಂಡಿರಬೇಕು. ಕಥಾ ಹಂದರದ ಬಗ್ಗೆ ಕರಾರುಗಳ ಬಗ್ಗೆ ಕೃತಿಗೆ ಸಂಬಂಧಿಸಿದ ಇತರೇ ವಿಚಾರಗಳ ಬಗ್ಗೆ ಮೊದಲೇ ತೀರ್ಮಾನ ಮಾಡಿಕೊಂಡಿರಬೇಕು. ಕಾವ್ಯಾಲಯ ಈ ಎಲ್ಲಾ ಮುನ್ನೆಚ್ಚರಿಕೆಗಳನ್ನು ಕರಾರುವಕ್ಕಾಗಿ ಮಾಡಿಕೊಂಡಿತ್ತು ಎಂಬುದಕ್ಕೆ ಸಾಕಷ್ಟು ಪತ್ರಗಳು ನಮಗೆ ಅವರ ಸಂಗ್ರಹದಲ್ಲಿ ಸಿಗುತ್ತವೆ. ಅವುಗಳಲ್ಲಿ ಕೆಲವೊಂದನ್ನು ಅಗತ್ಯವಾಗಿ ಈ ಅಧ್ಯಯನದಲ್ಲಿ ಸೂಚಿಸಬೇಕೆಂದು ಮನಗಂಡು ಅಭಿವ್ಯಕ್ತಪಡಿಸುತ್ತಿದ್ದೇನೆ.

ಡಿ.ವಿ.ಜಿ ಯವರು ಕಾಲೇಜು ಶಿಕ್ಷಣ ಪಡೆಯದಿದ್ದರೂ ಸಾಹಿತ್ಯಕ್ಷೇತ್ರಕ್ಕೆ ಅವರ ಸೇವೆ ಅಗ್ರಗಣ್ಯವಾದುದು. 'ಶ್ರೀ ಚೆನ್ನಕೇಶವ ಅನ್ತಃಪುರಗೀತೆ ' ಇದನ್ನು ಡಿ.ವಿ.ಜಿಯವರು ಬರೆದು ಗುಟ್ಟಾಗಿ ಇಟ್ಟಿದ್ದರು. ಪ್ರಕಟಣೆಗೆ ಒಪ್ಪಿರಲಿಲ್ಲ. ಆದರೆ ಚಿದಂಬರಂ ಅದನ್ನು ಹೊರತೆಗೆದು ತಿದ್ದುಪಡಿ ಮಾಡಿ ಪ್ರಕಟಿಸಿರುವ ವಿಚಾರ ಡಿ.ವಿ.ಜಿ ಯವರೆ ಒಂದೆಡೆ ಹೇಳಿಕೊಳ್ಳುತ್ತಾರೆ. ಇವುಗಳಿಗೆ ಸಂಬಂಧಿಸಿದ ಕಲಾಕೃತಿಗಳನ್ನು ಮೈಸೂರಿನ ಶ್ರೀನಿವಾಸನ್ ಎಂಬುವವರ ಸಲಹೆ ಮೇರೆಗೆ 'ಪ್ರಾಚೀನಾನ್ವೇಷಣಾ ಶಾಖೆ ' ಯಿಂದ ತರಿಸಿಕೊಟ್ಟಿದ್ದರು. ಇದನ್ನೆಲ್ಲಾ ಗಮನಿಸಿದಾಗ ಚಿದಂಬರಂ ಲೇಖಕರ ಬೆಳವಣಿಗೆಗೆ ಹೇಗೆ ಒತ್ತನ್ನು ನೀಡಿದ್ದರು ಎಂಬುದು ಸ್ಪಷ್ಟವಾಗುತ್ತದೆ.



ಕೃತಿಗಳಿಗೆ ಪೂರಕವಾದ ಯಾವುದೇ ವಿಚಾರಗಳು ಎಲ್ಲಿಯೇ ದೊರೆತರೂ ಅವುಗಳ ಕಡೆಗೆ ಕೂಡಲೇ ಗಮನ ಹರಿಸುತ್ತಿದ್ದರು. 'ಶ್ರೀರಾಮ ಪರೀಕ್ಷಣಂ' ಕೃತಿಯ ಮುಖಪುಟಕ್ಕೆ ಬೇಕಾದ ಚಿತ್ರದ ಬಗ್ಗೆ ಚಿದಂಬರಂ ಡಿ.ವಿ.ಜಿ ಚರ್ಚೆ ನಡೆಸಿದರು. ಜಾನ್ಸಿ ಜಿಲ್ಲೆಯ 'ಡಿಯೋಗ್ರಾಹ್' ಎಂಬ ಸ್ಥಳದಲ್ಲಿ 'ಅಹಲ್ಯೆ ರಾಮನಿಂದ ಶಾಪಮುಕ್ತಳಾಗಿ ಸ್ತ್ರೀಯಾಗುವ ದೃಶ್ಯ' ವನ್ನು ಜೆನೆರಲ್ ಆಫ್ ಆರ್ಕೋಲಾಜಿಕಲ್ ಸರ್ವೆ ಇನ್ ಇಂಡಿಯಾ ಡೆಲ್ಲಿ ಇವರು ಸಂಗ್ರಹಿಸಿದ್ದರು ಎಂಬ ವಿಷಯ ತಿಳಿದ ಕೂಡಲೇ ಆ ಚಿತ್ರವನ್ನು ತರಿಸಿಕೊಳ್ಳಲು ಏರ್ಪಾಡು ಮಾಡಿದರು. ಈ ವಿಚಾರವನ್ನು ೧೩. ಫೆಬ್ರವರಿ, ೧೯೪೯ರ ಪತ್ರದಲ್ಲಿತಿಳಿಯಬಹುದು. ಹೀಗೆ ಇತರೆ ಕೃತಿಗಳ ಪ್ರಕಟಣೆಯ ವಿಷಯದಲ್ಲಿ ಕೂಡ ಇದೇ ಬಗೆಯ ಕಾಳಜಿ ವಹಿಸಿ ಕೆಲಸ ಮಾಡುತ್ತಿದ್ದರು ಎಂಬುದು ತಿಳಿದುಬರುತ್ತದೆ. ಡಿ.ವಿ.ಜಿ ಮತ್ತು ಚಿದಂಬರಂ ನಡುವೆ ಕಲಾಕೃತಿಗಳ ವಿಚಾರವಾಗಿಯೂ ಸಾಕಷ್ಟು ಪತ್ರವ್ಯವಹಾರಗಳು ನಡೆದಿದ್ದವು. ಡಿ.ವಿ.ಜಿ ಯವರ ಮಂಕುತಿಮ್ಮನ ಕಗ್ಗ ಕೃತಿಯನ್ನು 'ಭಾರತೀಯ ಜ್ಞಾನಪೀಠ ಪ್ರಕಾಶನ' ದವರು ಹಿಂದಿಯಲ್ಲಿ ಪ್ರಕಟಿಸಲು ಅನುಮತಿ ಕೋರಿ ಮಾರ್ಚ್ ೫ ೧೯೬೬ ರಂದು ಕಾವ್ಯಾಲಯ ಪತ್ರ ಬರೆದಿದ್ದರು. ಇದನ್ನು ಗಮನಿಸಿದಾಗ ಒಂದು ಕೃತಿಯ ಮೇಲೆ ಲೇಖಕನಿಗೆ ಎಷ್ಟು ಹಕ್ಕು ಇರುತ್ತದೆಯೇ ಅಷ್ಟೇ ಹಕ್ಕು ಪ್ರಕಾಶಕರ ಮೇಲು ಇರುತ್ತದೆ ಎಂಬುದು ಸ್ಪಷ್ಟವಾಗುತ್ತದೆ.



ಡಿ.ವಿ.ಜಿಯವರು 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ' ಯಲ್ಲಿ ಕೆಲಸ ಮಾಡುತ್ತಿದ್ದಾಗ ಸಂಸ್ಥೆಗೆ ಸಂಬಂಧಿಸಿದ ಎಲ್ಲಾ ಬರವಣಿಗೆಗಳನ್ನು ಕಾವ್ಯಾಲಯದಲ್ಲೇ ಪ್ರಕಟಿಸುತ್ತಿದ್ದರು. ಡಿ.ವಿ.ಜಿ ಮತ್ತು ಚಿದಂಬರಂ ನಡುವೆ ವ್ಯವಹಾರಿಕ ಸಂಬಂಧವಿತ್ತು ಎನ್ನುವುದಕ್ಕಿಂತಲೂ ಆತ್ಮೀಯ ಸಂಬಂಧವೇ ಹೆಚ್ಚಾಗಿತ್ತು ಎಂಬುದು ಅಧ್ಯಯನ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ. ಗೋವಿಂದ ಪೈ ಅವರ ಬರವಣಿಗೆಯನ್ನು ಪ್ರಕಟಿಸುವಾಗ ನಡೆದ ಪತ್ರ ವ್ಯವಹಾರಗಳು ಕೂಡ ಸಾಕಷ್ಟು ದೊರೆತಿವೆ. ತುಕಾರಾಂ ಪೈ ಎಂಬುವವರು ಗೋವಿಂದ ಪೈ ಬಗೆಗೆ ಹೆಚ್ಚು ಪತ್ರಗಳನ್ನು ಕಳುಹಿಸಿದ್ದಾರೆ. ಗೋವಿಂದ ಪೈ ಅವರು ಅನಾರೋಗ್ಯದಿಂದ ಆಸ್ಪತ್ರೆ ಸೇರಿದಾಗ ಅವರ ಪರವಾಗಿ ತುಕಾರಾಂ ಪೈ ಕೃತಿಗಳ ಪ್ರಕಟಣೆಗೆ ಸಂಬಂಧಿಸಿದ ವಿಚಾರಗಳನ್ನು ತಿಳಿಸುತ್ತಿದ್ದರು. 'ಗೊಲ್ಗೊಥಾ ಮತ್ತು ವೈಶಾಖಿ' ಕೃತಿಯ ಬೈಂಡಿಂಗ್ ಬಗ್ಗೆ, ನಂದಾದೀಪದ ಬರವಣಿಗೆಯನ್ನು ಯಾವ ಕಾಗದದಲ್ಲಿ ಮುದ್ರಿಸುವುದು ಎಂಬುದರ ಬಗ್ಗೆ, ಗೋವಿಂದ ಪೈ ಬಗ್ಗೆ ಹೆಚ್ಚು ಮಾಹಿತಿಯನ್ನು ಸಂಗ್ರಹಿಸುವ ಬಗ್ಗೆ, ಶ್ರೀಕೃಷ್ಣ ಚರಿತ್ರೆ ಬಗ್ಗೆ, ಲೇಖಕರಿಗೆ ಆದ ಗೊಂದಲಗಳ ಬಗ್ಗೆ ಹೀಗೆ ಹಲವಾರು ವಿಚಾರಗಳ ಬಗ್ಗೆ ಪತ್ರ ವ್ಯವಹಾರಗಳು ನಡೆದಿವೆ. ಪತ್ರ ಬರೆಯುವಾಗ ಕೇವಲ ಪ್ರಕಟಣೆಗೆ ಸಂಬಂಧಿಸಿದಂತೆ ಮಾತ್ರವಲ್ಲದೆ, ಬೇರೆ ಬೇರೆ ಕೃತಿಗಳ, ಲೇಖಕರ ನಿಯಮಗಳ ವಿಚಾರವಾಗಿಯೂ ಚರ್ಚೆ ಮಾಡುತ್ತಿದ್ದರು.

ಶೈಲಶ್ರೀ ಪ್ರೊಡಕ್ಷನ್‌ನ ಎಸ್.ಕೆ. ಭಗವಾನ್ ಅವರು ಕಾವ್ಯಾಲಯಕ್ಕೆ ಒಂದು ಪತ್ರ ಬರೆದಿದ್ದರು. ಅದರಲ್ಲಿ 'ಕುಲವಧು' ಎಂಬ ಸಿನಿಮಾಕ್ಕೆ ಗೋವಿಂದ ಪೈ ಅವರ 'ಕನ್ನಡಿಗರ ತಾಯೇ' ಕವನವನ್ನು ಬಳಸಿಕೊಳ್ಳಲು ಅನುಮತಿಯನ್ನು ಕೇಳಿದ್ದಾರೆ. ಹೀಗೆ ಪ್ರಕಟವಾದ ಕೃತಿಗಳ ಎಲ್ಲಾ ಹಕ್ಕುಗಳನ್ನು ಪ್ರಕಾಶಕರೇ ಹೊಂದಿರುತ್ತಿದ್ದರು. ಕವನಗಳಿಗೆ ಸಂಭಾವನೆಯನ್ನು ನಿರ್ಧರಿಸುವುದು ಕೂಡ ಇವರ ಕರ್ತವ್ಯವಾಗಿತ್ತು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರೊಂದಿಗೆ ದಿನಾಂಕ ೭.೬.೬೧ರಂದು ನಡೆಸಿದ ಪತ್ರವ್ಯವಹಾರದಲ್ಲಿ ಉಸಬು, ವಸಂತ ಚಂದನ, ಹಳ್ಳಿಯಬಾಳು ಈ ಕೃತಿಗಳಿಗೆ ಸಂಬಂಧಿಸಿದ ಆರ್ಥಿಕ ವ್ಯವಹಾರದ ವಿಚಾರಗಳಿವೆ. 'ಬೆಸ್ತರ ಕರಿಯ' ಕೃತಿ ರಚನೆಗೆ ಪ್ರಕಾಶನದ ಸಲಹೆ, ಸೂಚನೆಗಳನ್ನು ಕೇಳಿ ತಿಳಿದುಕೊಂಡಿರುವ ವಿಚಾರಗಳು ಸ್ಪಷ್ಟವಾಗುತ್ತವೆ.

ಎಸ್.ವಿ. ಪರಮೇಶ್ವರ ಭಟ್ ಅವರು 'ಮನೆ ಮನೆಗೆ ಸರಸ್ವತಿ' ಎಂಬ ಕಾರ್ಯಕ್ರಮದ ಸಂಚಾಲಕರಾಗಿ ಮಂಗಳೂರಿನಲ್ಲಿ ೧೯೬೯ನೇ ಇಸವಿಯ ನವೆಂಬರ್ ತಿಂಗಳಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು ಎಂಬ ವಿಷಯ ೨೯. ೧೦. ೬೯ರ ಪತ್ರದಲ್ಲಿ ತಿಳಿಯುತ್ತದೆ. ಈ ಕಾರ್ಯಕ್ರಮಕ್ಕೆ ಕಾವ್ಯಾಲಯದ ಪುಸ್ತಕಗಳನ್ನು ಆಹ್ವಾನಿಸಿದ್ದರು. ಲೇಖಕರು ಕೇವಲ ಬರವಣಿಗೆಯ ಮೂಲಕ ಸಾಹಿತ್ಯ ಪ್ರಚಾರ ಮಾಡದೆ, ಕೆಲವು ಕಾರ್ಯಕ್ರಮಗಳ ಮೂಲಕವೂ ನಡೆಸುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಕೆಲವು ಬರವಣಿಗೆಗಳು ನೇರವಾಗಿ ಪ್ರಕಾಶನವನ್ನು ಹುಡುಕಿಕೊಂಡು ಬರುತ್ತವೆ. ಇನ್ನೂ ಕೆಲವು ಕಾಲದ ಗರ್ಭದಲ್ಲಿ ಹುದುಗಿಹೋಗಿರುತ್ತವೆ. ಇಂತಹ ಬರವಣಿಗೆಗಳನ್ನು ಹುಡುಕುವ ಕೆಲಸ ಒಂದೆಡೆ ಸಂಶೋಧಕರು ಮಾಡಿದರೆ, ಇನ್ನೊಂದೆಡೆ ಪ್ರಕಾಶಕರು ಕೂಡ ಮಾಡಬೇಕಾಗುತ್ತದೆ. ಯಾವಾಗಲೋ ಮುದ್ರಣವಾಗಿ ಜನಸಾಮಾನ್ಯರಿಂದ ದೂರವಾದ ಕೃತಿಗಳನ್ನು ಮತ್ತೆ ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದರು. ಎಂ. ಎಸ್ ಪುಟ್ಟಣ್ಣನವರು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅವರ ಪುತ್ರ ಎಂ.ಪಿ. ಸೋಮಶೇಖರ ಅವರೊಂದಿಗೆ ನಡೆಸಿದ ಪತ್ರವ್ಯವಹಾರಗಳನ್ನು ಗುರುತಿಸಬಹುದು. ೮.೧೦.೧೯೪೯ರಂದು ಎಂ.ಪಿ. ಸೋಮಶೇಖರರಾವ್ ಅವರು ವಿವರಗಳನ್ನು ತಿಳಿಸಿದ್ದರು. ಎಂ.ಎಸ್. ಪುಟ್ಟಣ್ಣ ಅವರ ಬಾಲ್ಯ, ವಿದ್ಯಾಭ್ಯಾಸ, ವೃತ್ತಿ, ಸಾಹಿತ್ಯ ರಚನೆಯ ಉದ್ದೇಶ, ಭಾವಚಿತ್ರ ಇವುಗಳ ಬಗೆಗೆ ಯಾರೂ ಮಾಹಿತಿ ಸಂಗ್ರಹಿಸಿರಲಿಲ್ಲ. ಚಿದಂಬರಂ ಈ ಉದ್ದೇಶದಿಂದ ಸೋಮಶೇಖರರಾವ್ ಅವರೊಂದಿಗೆ ಪತ್ರದಲ್ಲಿ ಸಂಪರ್ಕಿಸಿ ಸಾಹಿತ್ಯಲೋಕಕ್ಕೆ ಹೊಸ ಸೇರ್ಪಡೆ ಮಾಡಿದ್ದರು. ಪು.ತಿ.ನರಸಿಂಹಾಚಾರ್ ಅವರು ೧೧.೧.೧೯೪೫ರಂದು ಚಿದಂಬರಂ ಅವರಿಗೆ ಬರೆದ ಪತ್ರದಲ್ಲಿ ಕೆಲವು ಮುಖ್ಯವಾದ ವಿಷಯಗಳನ್ನು ಚರ್ಚಿಸಿದ್ದರು. ಕೇವಲ ಪದ್ಯ ಬರೆಯಬೇಡಿ, ಗದ್ಯವನ್ನೂ ಬರೆಯಿರಿ ಎಂದು ಚಿದಂಬರಂ ಸಲಹೆ ನೀಡಿದ್ದಕ್ಕೆ ಪ್ರತಿಕ್ರಿಯೆಯನ್ನು ಪತ್ರ ಮೂಲಕ ನೀಡಿದ್ದಾರೆ. ಗದ್ಯ ಬರೆಯಲು ನನ್ನಿಂದ ಸಾಧ್ಯವಿಲ್ಲ, ನನ್ನಿಂದ ಆ ಶೈಲಿ ರೂಪುಗೊಳ್ಳುವುದೇ ಇಲ್ಲ ಎಂದು ತಿಳಿಸಿದ್ದಾರೆ. ಇದನ್ನೆಲ್ಲಾ ಗಮನಿಸಿದಾಗ ಪ್ರಕಾಶಕರು ಪುಸ್ತಕ ಪ್ರಕಟಣೆ ಮಾತ್ರವಲ್ಲದೇ ಲೇಖಕರನ್ನು ತಿದ್ದುವ, ಬೆಳೆಸುವ, ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದರು. ಕೆ.ಎಸ್. ನರಸಿಂಹಸ್ವಾಮಿ ಅವರೊಂದಿಗೆ ಕೂಡ ಪ್ರಕಟಣೆಗೆ ಸಂಬಂಧಿಸಿದ ವಿಚಾರವಾಗಿ ಪತ್ರ ಬರೆಯುತ್ತಿದ್ದರು. ಇರುವಂತಿಗೆ, ನಳ-ದಮಯಂತಿ, ಮನೆಯಿಂದ ಮನೆಗೆ ಈ ಕೃತಿಗಳ ಪ್ರಕಟಣೆಗೆ ಸಂಬಂಧಿಸಿದಂತೆ, ಹಣದ ವಿಚಾರವಾಗಿ ಚರ್ಚೆಗಳು ನಡೆದಿವೆ. ಕೆಲವು ಕೃತಿಗಳಿಗೆ ಬೇರೆ ಲೇಖಕರು ಬರೆದ ಮುನ್ನುಡಿಯನ್ನು ಸೇರಿಸಬೇಕೆ? ಬೇಡವೇ? ಈ ಬಗೆಯ ವಿಷಯಗಳನ್ನು ಚರ್ಚಿಸಿದ್ದರು.

ಕೆಲವೊಮ್ಮೆ ಕನ್ನಡ ಸರಿಯಾಗಿ ಬಾರದೆ ಇರುವವರು ಪ್ರಕಾಶಕರ ಬಳಿ ಸಲಹೆಯನ್ನು ಕೇಳಿಕೊಳ್ಳುತ್ತಿದ್ದರು. ಶೇಷನಾರಾಯಣ ಎಂಬುವರು 'ಮೂಲಾನಕ್ಷತ್ರ' ಕೃತಿಯನ್ನು ರಚನೆ ಮಾಡುವ ಸಂದರ್ಭದಲ್ಲಿ ಅವರಿಗೆದುರಾದ ಸಮಸ್ಯೆಯನ್ನು ಚಿದಂಬರಂ ಬಳಿ ಕೇಳಿ ಪರಿಹರಿಸಿಕೊಳ್ಳುತ್ತಿದ್ದ ವಿಚಾರಗಳು ೨೬. ೦೩. ೧೬೫೪ರ ಪತ್ರದಲ್ಲ ತಿಳಿದು ಬರುತ್ತದೆ. ಕುವೆಂಪು ಅವರೊಂದಿಗೆ ನಡೆಸಿದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅಧ್ಯಯನ ಸಂದರ್ಭದಲ್ಲಿ ದೊರಕಿದುದು ಒಂದೇ ಪತ್ರ. ನವೆಂಬರ್ ೨. ೧೯೫೧ ರಂದು ಪತ್ರದಲ್ಲಿ 'ಜೇನಾಗುವ' ಕೃತಿಯ ಪ್ರಕಟಣೆಗೆ ಸಂಬಂಧಿಸಿದ ನಿಯಮಗಳ

ವಿಚಾರವನ್ನು ಪ್ರಸ್ತಾಪಿಸಲಾಗಿತ್ತು. ಪೂರ್ಣಚಂದ್ರ ತೇಜಸ್ವಿಯವರು, ಮಾರಾಟವಾಗದೆ ಉಳಿದುಹೋಗಿದ್ದ ಕುವೆಂಪು ಕೃತಿಗಳ ವಿಚಾರವಾಗಿ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ.

ಚಂದ್ರಶೇಖರ ಪಾಟೀಲ್ ಚಿದಂಬರಂ ಅವರೊಂದಿಗೆ ೨. ೪. ೭೯ರಂದು ಪತ್ರ ಸಂಬಂಧ ಬೆಳೆಸಿದ್ದರು. ಸಂಕ್ರಮಣ ವಿಶೇಷಾಂಕ ಪತ್ರಿಕೆಯನ್ನು ಹೊರತರುವ ವಿಚಾರವನ್ನು, ಅದರಲ್ಲಿ ಕಾವ್ಯಾಲಯ ಪ್ರಕಾಶನದ ಜಾಹೀರಾತನ್ನು ನೀಡಬೇಕೆಂದು ಕೋರಿಕೊಂಡಿದ್ದಾರೆ. ಹೀಗೆ ಕೃತಿಗಳ ಪ್ರಕಟಣ ವಿಚಾರವಾಗಿ ಅಷ್ಟೇ ಅಲ್ಲದೆ, ಬೇರೆ ಬೇರೆ ವಿಚಾರಗಳ ಸಲುವಾಗಿಯೂ ಕಾವ್ಯಾಲಯ ಪತ್ರ ವ್ಯವಹಾರ ನಡೆಸುತ್ತಿತ್ತೆಂದು ಗಮನಿಸಬಹುದು. ಇಷ್ಟೇ ಅಲ್ಲದೆ ಇನ್ನೂ ಹಲವಾರು ವಿಚಾರಗಳಿಗೆ ಸಂಬಂಧಿಸಿದಂತೆ ಪತ್ರಗಳು ಸಂಗ್ರಹದಲ್ಲಿವೆ. ಕೃತಿಗಳಿಗೆ ಅಗತ್ಯವಾದ ಕಲಾಕೃತಿಗಳನ್ನು ಸಂಗ್ರಹಿಸುವಲ್ಲಿಯೇ ಸಾಕಷ್ಟು ಪತ್ರಗಳು ಸಿಗುತ್ತವೆ. ಇತಿಹಾಸ ವಿಭಾಗದವರೊಂದಿಗೆ, ಅಧಿಕಾರಿಗಳೊಂದಿಗೆ ಹೀಗೆ ಹಲವರ ಜೊತೆ ಸಂಪರ್ಕ ಇಟ್ಟುಕೊಂಡಿದ್ದಂತಹ ವಿವರಗಳು ನಮಗೆ ದೊರಕುತ್ತವೆ.

೬.೨ ಕಾವ್ಯಾಲಯ : ಆಕಾಶವಾಣಿ ಜೊತೆಗಿನ ಸಂಬಂಧ

ಕೃತಿಗಳು, ಪತ್ರಿಕೆಗಳು ಹೇಗೆ ಪ್ರಬಲ ಮಾಧ್ಯಮಗಳಾಗಿ ಜನರನ್ನು ತಲುಪುತ್ತಿದ್ದವೋ, ಹಾಗೆಯೇ ಆಕಾಶವಾಣಿ ಕೂಡ ಪ್ರಬಲ ಮಾಧ್ಯಮವಾಗಿ ಜನರನ್ನು ಸೆಳೆಯಿತು. ಆಕಾಶವಾಣಿ ಜಗತ್ತಿನ ಪ್ರತೀ ವಿಚಾರಗಳನ್ನು, ಮನೋರಂಜನೆಯನ್ನು ತರಂಗಗಳ ಮೂಲಕ ಜನರನ್ನು ತಲುಪಿಸುತ್ತಿತ್ತು. ಒಂದು ಸಂದರ್ಭದಲ್ಲಿ ಆಕಾಶವಾಣಿ ಸಾಹಿತ್ಯ ಬೆಳವಣಿಗೆಗೆ ಪೂರಕವಾಗಿ ಸಹಕರಿಸುತ್ತಿತ್ತು. ಸಾಹಿತ್ಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಉಪನ್ಯಾಸಗಳ ರೂಪದಲ್ಲಿ ಪ್ರಸಾರ ಮಾಡಲಾಗುತ್ತಿತ್ತು. ಕಾವ್ಯಾಲಯ ಆಕಾಶವಾಣಿಯ ಜೊತೆಗೆ ಸಂಪರ್ಕವನ್ನು ಬೆಳೆಸಿಕೊಂಡಿತ್ತು. ಸಾಹಿತ್ಯ ಉಪನ್ಯಾಸಗಳನ್ನು ಕೇಳಿಸಿಕೊಂಡು ಅವು ಮಹತ್ವದ್ದೆಂದು ಅನ್ನಿಸಿದರೆ ಅವುಗಳನ್ನು ಕೃತಿ ರೂಪದಲ್ಲಿ ಪ್ರಕಟ ಮಾಡುವ ವಿಚಾರ ಮಾಡುತ್ತಿದ್ದರು. ಅದಕ್ಕೆ ಸಂಬಂಧಿಸಿದಂತೆ ಆಕಾಶವಾಣಿಯ ನಿರ್ದೇಶಕರಲ್ಲಿ ಪ್ರಸ್ತಾಪ ಮಾಡಲಾಗುತ್ತಿತ್ತು. ಅದೇನೆ ನಿಯಮಗಳಿದ್ದರೂ, ಅವುಗಳಿಗೆ ಬದ್ಧರಾಗಿ ಪ್ರಕಟಣಾ ಕಾರ್ಯವನ್ನು ಕೈಗೊಳ್ಳುತ್ತಿದ್ದರು. ಇದರಿಂದಾಗಿ ಆ ಕೃತಿಯು ಲೇಖಕನು ಸಾಕಷ್ಟು ಪ್ರಚಾರ ಪಡೆದುಕೊಳ್ಳಲು ಸಹಕಾರಿಯಾಗುತ್ತಿತ್ತು.

ರಾಳಪಲ್ಲಿ ಅನಂತ ಕೃಷ್ಣ ಶರ್ಮ ಎಂಬುವವರು 'ಕಲಾಮಯ ಜೀವನ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದ್ದರು. ಇದನ್ನು ಕೃತಿರೂಪದಲ್ಲಿ ಪ್ರಕಟಿಸಲು ಕಾವ್ಯಾಲಯ ಆಕಾಶವಾಣಿ, ಮೈಸೂರು ಕೇಂದ್ರದಲ್ಲಿ ಅನುಮತಿ ಕೇಳಿದ್ದರು. ನಿಯಮಗಳನ್ನು ಪಾಲಿಸಿ, ಕೃತಿ ಪ್ರಕಟಿಸಿದ ದಾಖಲೆ ೨೨. ೦೩. ೧೯೫೪ರ ಪತ್ರದ ಮೂಲಕ ತಿಳಿದು ಬರುತ್ತದೆ.

ಸ್ವತಃ ಪ್ರಕಾಶಕರೇ ಆಕಾಶವಾಣಿಯಲ್ಲಿ ಉಪನ್ಯಾಸ ನೀಡಿದ ದಾಖಲೆ ಅಧ್ಯಯನ ಸಂದರ್ಭದಲ್ಲಿ ಸಾಗುತ್ತದೆ. ದಿನಾಂಕ - ೧೫.೦೮.೫೪ ರಂದು ಚಿದಂಬರಂ ಅವರು ಮೈಸೂರು ಆಕಾಶವಾಣಿ ಕೇಂದ್ರದಲ್ಲಿ 'ನವ ಸಾಹಿತ್ಯ ನಿರ್ಮಾಣ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದ್ದರು. ಸಾಹಿತ್ಯವನ್ನು ಜನರಿಗೆ ಯಾವ ಯಾವ ಮಾರ್ಗದಲ್ಲಿ ತಲುಪಿಸಲು ಸಾಧ್ಯವೋ ಆ ಎಲ್ಲಾ ಮಾರ್ಗಗಳಲ್ಲಿ ತಲುಪಿಸುವ ಕೆಲಸ ಚಿದಂಬರಂ ಮಾಡುತ್ತಿದ್ದರು.

'ಗೀತ ಶಾಕುಂತಲ' ಕೃತಿಯ ಬಗ್ಗೆ ವಿಮರ್ಶಾ ರೂಪದ ಉಪನ್ಯಾಸವನ್ನು ಡಿ.ವಿ.ಜಿ ಯವರು ಬೆಂಗಳೂರು ಆಕಾಶವಾಣಿಯಲ್ಲಿ ನೀಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಗೋವಿಂದ ಪೈ ಅವರ ಜೀವನ ಸಾಧನೆಗಳ ಬಗ್ಗೆ ಪ್ರಸಾರ ಮಾಡುವ ಉದ್ದೇಶವನ್ನು ಆಕಾಶವಾಣಿಯ ಸಿಬ್ಬಂದಿಯವರು ಕಾವ್ಯಾಲಯಕ್ಕೆ ತಿಳಿಸಿದ್ದರು. ಅದಕ್ಕೆ ಅಗತ್ಯವಾದ ಮಾಹಿತಿಯನ್ನು ಕಾವ್ಯಾಲಯ ಒದಗಿಸಿರುವ ವಿಚಾರ ಫೆಬ್ರವರಿ ೯. ೧೯೬೫ರ ಪತ್ರದಲ್ಲಿ ಸ್ಪಷ್ಟವಾಗುತ್ತದೆ. ಹೀಗೆ ಆಕಾಶವಾಣಿ ಕೇಂದ್ರಗಳು ಕೂಡ ಜನರಲ್ಲಿ ಉತ್ತಮ ಅಭಿರುಚಿ ಮೂಡಿಸುವ ಕೆಲಸವನ್ನು ಮಾಡುತ್ತಿದ್ದವು.

೬.೩ ಕಾವ್ಯಾಲಯದ ಪ್ರಕಟಣೆಗಳು ಮತ್ತು ವಿಮರ್ಶಾ ಬರಹಗಳು

ಯಾವುದೇ ಕೃತಿಯನ್ನು ವ್ಯಕ್ತಿ ಮನನ ಮಾಡಿಕೊಂಡ ನಂತರ ಅವನ ಮನಸಲ್ಲಿ ಅಭಿಪ್ರಾಯಗಳು ಮೂಡುವುದು ಸಹಜ. ಆ ಅಭಿಪ್ರಾಯಗಳು ಕೃತಿಗೆ ಪೂರಕವಾಗಿಯಾಗಿಯಾದರೂ ಇರಬಹುದು. ವಿರೋಧವಾಗಿಯಾಗಿಯಾದರೂ ಇರಬಹುದು ಅವುಗಳನ್ನು ಬರಹದ ಮೂಲಕ ವ್ಯಕ್ತಪಡಿಸಲಾಗುತ್ತಿತ್ತು. ಒಂದು ಸಂದರ್ಭದಲ್ಲಿ ಈ ಬಗೆಯ ಅಭಿಪ್ರಾಯಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿತ್ತು. ಹೀಗೆ ವ್ಯಕ್ತವಾದ ಅಭಿಪ್ರಾಯಗಳಿಂದ ನಾನಾ ಬಗೆಯ ಅನುಕೂಲತೆಗಳುಂಟಾಗುತ್ತವೆ. ವಿಮರ್ಶಾ ಅಭಿಪ್ರಾಯಗಳಿಂದ ಓದುಗ ಒಂದು ಕೃತಿಯನ್ನು ಅರ್ಥೈಸಿಕೊಳ್ಳುವ ನೆಲೆ ಭಿನ್ನವಾಗುತ್ತದೆ. ಹಾಗೆಯೇ ರಚನೆಕಾರನಿಗೆ ತನ್ನ ತಪ್ಪುಗಳನ್ನು ಎಲ್ಲೆಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕೆಂಬ ಅರಿವು ಉಂಟಾಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಅಭಿಪ್ರಾಯಗಳು ಸೂಕ್ತವೆನಿಸುತ್ತವೆ. ಒಂದು ಕೃತಿಗೆ ಮೌಲ್ಯವನ್ನು ಕಟ್ಟಲು ಅನುಕೂಲವಾಗುತ್ತದೆ.

ಹೀಗೆ ಒಂದು ಕೃತಿಯ ಬಗೆಗೆ ವ್ಯಕ್ತವಾದ ಅಭಿಪ್ರಾಯಗಳನ್ನು ಕ್ರೋಢಿಕರಿಸುವ ಕೆಲಸವನ್ನು ಎಲ್ಲಾ ಪ್ರಕಾಶಕರು ಮಾಡುತ್ತಾರೆ. ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಕಾವ್ಯಾಲಯ ಪ್ರಕಟಿಸಿದ ಕೃತಿಗಳ ವಿಮರ್ಶೆಯನ್ನು ನೋಡುವ ಅಗತ್ಯವಿದೆ. ಕಾವ್ಯಾಲಯ, ಹೀಗೆ ವ್ಯಕ್ತವಾದ ಎಲ್ಲಾ ಅಭಿಪ್ರಾಯಗಳನ್ನು ಒಂದೆಡೆ ಸೇರಿಸಿ, ಮುಂದೆ ಪ್ರಕಟವಾಗುವ ಕೃತಿಗಳ ಕೊನೆಯ ಪುಟದಲ್ಲಿ ಸೇರಿಸುತ್ತಿತ್ತು. ಇದೊಂದು ಉತ್ತಮ ಕ್ರಿಯೆಯಾಗಿತ್ತು. ಈ ಬಗೆಯ ಕಾರ್ಯದಿಂದ ಓದುಗರಿಗೆ, ಲೇಖಕರಿಗೆ

ಅನುಕೂಲವಾಗುತ್ತಿತ್ತು. ಲೇಖಕರ ಬಳಿ ಕೃತಿಗಳ ಹಿಂದೆ ವಿಮರ್ಶೆ ಮುದ್ರಿಸಬಹುದೇ? ಎಂದು ಕೇಳಿಕೊಂಡು ಮುದ್ರಿಸುತ್ತಿದ್ದರು.

ಆ ಸಂದರ್ಭದಲ್ಲಿ ಪ್ರಬುದ್ಧ ಕರ್ಣಾಟಕ, ಪ್ರಜಾಮತ, ಕರ್ಮವೀರ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ದ ಇಂಡಿಯನ್ ಎಕ್ಸ್‌ಪ್ರೆಸ್, ದ ಹಿಂದೂ, ಕನ್ನಡ ನುಡಿ, ದ ಸಂಡೆ ಸ್ಟಾಂಡರ್ಡ್, ತಾಯಿನಾಡು, ದೇಶಬಂಧು, ಮಾತೃಭೂಮಿ ಮುಂತಾದ ಹಲವಾರು ಪತ್ರಿಕೆಗಳಲ್ಲಿ ವಿಮರ್ಶಾ ಬರಹಗಳು ಪ್ರಕಟವಾಗುತ್ತಿದ್ದವು. ಹೆಚ್ಚಾಗಿ ಅಭಿಪ್ರಾಯಗಳು ಉತ್ತಮ ಲೇಖಕರಿಂದಲೇ ವ್ಯಕ್ತವಾಗುತ್ತಿದ್ದವು ಎಂದರೆ ತಪ್ಪಾಗುವುದಿಲ್ಲ. ಜಿ.ಪಿ.ರಾಜರತ್ನಂ, ದ.ರಾ. ಬೇಂದ್ರೆ, ಶಿವರಾಮ ಕಾರಂತ, ತ್ರಿವೇಣಿ, ಎಂ. ಹಿರಿಯಣ್ಣ ಕುವೆಂಪು, ಕೆ.ಎಸ್ ನರಸಿಂಹಸ್ವಾಮಿ, ಮಾಸ್ತಿ, ಎಂ. ಗೋವಿಂದ ಪೈ, ಪು.ತಿ.ನ. ಮುಂತಾದ ಉತ್ತಮ ಕವಿಗಳನ್ನು ಈ ನಿಟ್ಟಿನಲ್ಲಿ ಹೆಸರಿಸಬಹುದು.

ಕಾವ್ಯಾಲಯದಿಂದ ಪ್ರಕಟವಾದಂತಹ ಕೃತಿಗಳಲ್ಲಿ ಅಭಿಪ್ರಾಯಗಳಿಗೆ ಒಳಗಾದ ಕೆಲವು ಕೃತಿಗಳ ವಿಮರ್ಶಾ ಬರಹಗಳನ್ನು ಇಲ್ಲಿ ನೀಡಲಾಗಿದೆ.

ಗೀತರೂಪಕಗಳು :

ಅಹಲ್ಯೆ: ಕ್ರೌನ್ ೮. xxiv + ೧೨೪, ಬೆಲೆ, ರೂ. ೨—೦—೦ ; ರೂ. ೩—೦—೦.

"ಅಹಲ್ಯೆ, ಇಂದ್ರ, ಗೌತಮ,—ಈ ಮೊದಲಾದವರ ನಡೆವಳಿಕೆಯ ರೀತಿಯೇನು, ಅರ್ಥವೇನು? ಇವರನ್ನು ಉದ್ರೇಕಿಸಿದ ಭಾವಗಳೇನು? ಇವರ ಕಥೆಯಲ್ಲಿ ಅಡಕವಾಗಿರುವ ಸಮಸ್ಯೆಯೇನು? . . . (ಇವನ್ನು) ನಮ್ಮ ಮುಂದಿರುವ ಕೃತಿ ತೋರಿಸುತ್ತದೆ.

ಇದರಲ್ಲಿ ಹಿನ್ನೆಲೆ ಮುನ್ನೆಲೆಯೆಂಬ ಭೇದವಿಲ್ಲದೆ, ಪ್ರಕೃತಿಯೊಂದಿಗೆ ಪಾತ್ರಗಳೂ ಪಾತ್ರಗಳೊಂದಿಗೆ ಪ್ರಕೃತಿಯೂ ಸಮಪ್ರಧಾನವಾಗಿ ಎದ್ದು ನಿಂತಿರುವುದನ್ನು ನೋಡಬಹುದು. ಈ ನಾಟಕದ ಉದ್ದಕ್ಕೂ ಬರುವ ವರ್ಣನೆಗಳಂತೂ ಉಜ್ವಲ ಪ್ರತಿಭೆಯಿಂದಲ್ಲದೆ ಹೊಮ್ಮುವುದು ಅಸಂಭವ. . . . ಇನ್ನು ಅವಿರತವಾಗಿ ಗೋಚರಿಸುವ ನಾಟಕಕಾರರ ಸೂಕ್ಷ್ಮದೃಷ್ಟಿ, ಧ್ವನಿಪೂರ್ಣವಾಗಿ ಮಾತುಗಳನ್ನೂ ಸಂಗತಿಗಳನ್ನೂ ಜೋಡಿಸುವ ಶಕ್ತಿ, ಛಂದಸ್ಸಿನಲ್ಲಿ ಬಗೆಬಗೆಯ ಪ್ರಯೋಗಗಳನ್ನು ನಡಸಿ ಹೊಸ ಸೊಗಸುಗಳನ್ನು ಹಲವೆಡೆಗಳಲ್ಲಿ ಸಾಧಿಸಿರುವ ಕೌಶಲ—ಈ ಮೊದಲಾದದ್ದನ್ನೆಲ್ಲಾ ಇಲ್ಲಿ ವಿವರಿಸಲು ಅವಕಾಶವಿಲ್ಲ. . . ."

—ತೀ. ನಂ. ಶ್ರೀಕಂಠಯ್ಯನವರ ಪ್ರಸ್ತಾವನೆಯಿಂದ.

It has more than half-a-dozen songs of entrancing, haunting melody which are sure to keep fresh through time. The verse dialogue, the solo songs and choruses, the beauties of nature and other description score all along in memorable utterence; the flexibility and variety of the metres employed, suiting situation or the prevaling need and mood are evidence of a high technical achievement.

—*The Hindu.*

ಗೋಕುಲ ನಿರ್ಗಮನ: ಕ್ರೌನ್ ೮. ೧೦ + ೭೨, ಬೆಲೆ, ರೂ. ೧—೦—೦.

ಕೃಷ್ಣನು ಮಥುರೆಗೆ ಹೋಗುವ ಮುನ್ನ ದಿನ ಕೊನೆಯ ಬಾರಿ ಕೊಳಲೂದಿ ವೃಂದಾವನದ ಭಕ್ತರನ್ನೆಲ್ಲ ಕರೆಸಿದ ಸನ್ನಿವೇಶವನ್ನು ಆಧಾರವಾಗಿಟ್ಟುಕೊಂಡು ಈ ನಾಟಕವನ್ನು ರಚಿಸಿದ್ದಾರೆ. . . .

ಪು. ತಿ. ನರಸಿಂಹಾಚಾರ್ಯರಿಂದ ಕಾವ್ಯರಚನೆಯಾಗುವುದು ಸರಸವಾಗಿ ಇಂಪಾದ ರಾಗಗಳಲ್ಲಿ. ಸೊಂಪಾಗಿ ಹಾಡಬಲ್ಲ ಗೀತಗಳನ್ನು ರಚಿಸಿರುವವರು ಅವರು. ಸುತ್ತಲಿನ ಜಗತ್ತನ್ನು ತೆರೆದ ಕಣ್ಣಿನಿಂದ ನಿರೀಕ್ಷಿಸುತ್ತಿರುವ ಇವರು ತಮ್ಮ ಗೀತಗಳಲ್ಲಿ ಲೋಕಾನುಭವವನ್ನು ತುಂಬಿದ್ದಾರೆ. ವೃಂದಾವನಕ್ಕೇ ತನ್ನ ಕೊಳಲಿನುಲಿಯಿಂದ ಮೋಹಿನಿಯನ್ನು ಬೀರಿದ ಕೃಷ್ಣನ ಪಾತ್ರನಿರ್ಮಾಣದಲ್ಲಿ ವಿಶೇಷ ಪರಿಶ್ರಮ ತೋರಿದ್ದಾರೆ.

. . . ವೃಂದಾವನವನ್ನು ಕೃಷ್ಣನು ಬಿಡುವಾಗ ಎಲ್ಲರಲ್ಲಿಯೂ ಮೂಡಿದ ದುಗುಡದ ಸನ್ನಿವೇಶ ಕವಿಯ ಮನಸ್ಸನ್ನು ಆವರಿಸದೆ ಬಿಟ್ಟಿಲ್ಲ.

—ಕರ್ಮವೀರ.

ಶ್ರೀ ಚೆನ್ನಕೇಶವ

ಅನ್ತಃಪುರಗೀತೆ

[illegible]
[illegible]

ಅಭಿಪ್ರಾಯಗಳು

. . . beautiful book.

—C. RAJAGOPALACHARI

I am charmed with your recent publication [illegible] . . .

—R. R. DIWAKAR

Such a rare jewel.

. . . The book is so full of such exquisite illustrations that they themselves are a treat to the eyes, apart from the wealth of poetry contained in it. . . .

—*Rashtrakavi* M. GOVINDA PAI

Indeed this is a distinct contribution to our literature and music and every Kannadiga will love to read it over and over again.

—*The Hindu*

Attractive, informing and entertaining.

—*The Indian Express*

How singable these lyrics are, and are reminiscent of the rhythms of Purandara and Tirumalarya.

—*National Standard*

. . . "[illegible]" is a gem in Kannada literature—rare, unique and original in conception and execution. It is an artistic production complete and satisfying. . . .

. . . It is a superb and artistic production—a joy to clean minds, and a cleansing agent to gross minds.

—S. G. SASTRY

ಕಾವ್ಯಾಲಯ * ಪ್ರಕಾಶಕರು * ಮೈಸೂರು

ಮಂಕುತಿಮ್ಮನ ಕಗ್ಗ

ಡಿ.ವಿ.ಜಿ.

[illegible]

ಮೂರು ಚಿತ್ರಗಳು, ಕ್ಲಿಷ್ಟಪದಗಳ ಅರ್ಥ, ಟಿಪ್ಪಣಿ, ಉಪಮಾನ ದೃಷ್ಟಾಂತಗಳ ಆಕಾರಾದಿ ಮತ್ತು ಪದ್ಯಾರಂಭದ ಆಕಾರಾದಿ ಪಟ್ಟಿಗಳಿಂದ ಕೂಡಿದೆ

[illegible]

ಅಭಿಪ್ರಾಯಗಳು

All the important truths of Vedanta appear to me to be in it; . . . But it is not mere philosophy that we have here; the book also contains much genuine poetry, descriptive and lyrical. It is, in brief, a classic of popular Vedanta; and I hope that it will soon come to be regarded so in the whole of the Kannada country.

—PROF. M. HIRIYANNA

I . . . find in it the cream of your life's philosophy expounded in choice Kannada. . . . Drawing upon the best armoury of ancient India and the best in modern progressive idealism and fusing them in the fire of your personality, you have given us what I believe to be the finest philosophical poem of our time in Kannada.

—PROF. B. M. SRIKANTIA

[illegible] —PROF. K.V.P.

ಕಾವ್ಯಾಲಯ * ಪ್ರಕಾಶಕರು * ಮೈಸೂರು



ಭಾರತದರ್ಶನ

[DISCOVERY OF INDIA]

ಜವಹರಲಾಲ್ ನೆಹರು

ಅನುವಾದಕರು:

ಎಸ್. ವಿ. ಕೃಷ್ಣಮೂರ್ತಿರಾವ್

ರಾಯಲ್ ಅ. ೮ + ೫೧೫ ಪು. ನೆಹರು ಭಾವಚಿತ್ರದೊಡನೆ.

ಎರಡು ಭಾಗಗಳು ಸೇರಿದ ಪ್ರತಿಗೆ ಬೆಲೆ: ರೂ. ೧೧.

ಎರಡನೆಯ ಭಾಗಕ್ಕೆ ಬೆಲೆ: ರೂ. ೫ ಮಾತ್ರ.

ಬಹುಕೋಟಿ ಪ್ರಜಾಸಂಖ್ಯೆಯುಳ್ಳ ಭಾರತದಂಥ ಸಂಪದ್ಯುಕ್ತವಾದ ಪುರಾತನ ಭೂಖಂಡ ಸಾವಿರಾರು ಮೈಲಿಗಳ ದೂರದಲ್ಲಿರುವ ಇಂಗ್ಲೆಂಡಿನಂಥ ಸಣ್ಣ ರಾಜ್ಯವೊಂದಕ್ಕೆ ಹೇಗೆ ವಶವಾಗಿ ಅಧೀನವಾಯಿತು? ಬಹು ಹಿಂದೆ ಪ್ರಪಂಚದ ಬಹು ಭಾಗ ಅಜ್ಞಾನದಲ್ಲಿ ಮುಳುಗಿದ್ದಾಗ ಭಾರತ ಶ್ರೀಮಂತವಾದ ಸಂಸ್ಕಾರವನ್ನೂ ಉದಾತ್ತವಾದ ಧರ್ಮ ತತ್ತ್ವಗಳನ್ನೂ ಮೆರೆದು ಧರೆಗೆ ಬೆಳಕಾಯಿತಲ್ಲವೆ? ಆ ಬೆಳಕಿನ ಶಕ್ತಿಮೂಲ ಯಾವುದು? ಭಾರತ ಅದನ್ನು ಹೇಗೆ ಕಳೆದುಕೊಂಡಿತು? ಪೂರ್ಣವಾಗಿ ಕಳೆದುಕೊಂಡಿದೆಯೆ? ಯಾವ ದೋಷದೌರ್ಬಲ್ಯಗಳಿಗೊಳಗಾಗಿ ಈ ದೇಶ ಶತಶತಮಾನಗಳ ಕಾಲ ದೇಶ ವಿದೇಶದ ಜನರ ತಂಡೋಪತಂಡಗಳ ಧಾಳಿಗೊಳಪಟ್ಟು ಪರಾಧಿಪತ್ಯಕ್ಕೆ ಬಲಿಯಾಗಿ ನರಳಿತು? ಆದರೂ, ಬೇರೆ ಬೇರೆ ರಾಜ್ಯ ಸಾಮ್ರಾಜ್ಯಗಳು ಪರಧಾಳಿಗಳಿಂದ ನಿರ್ನಾಮವಾಗಿರುವಾಗ ಯಾವ ದುರ್ದಮ್ಯವಾದ ಅಂತಃಶಕ್ತಿಯಿಂದ ಈ ಭಾರತ ಪುನಃ ಪುನಃ ತಲೆಯೆತ್ತಿಕೊಳ್ಳುತ್ತಿದೆ, ಪ್ರಬಲವಾದ ಬ್ರಿಟಿಷ್ ಸಾಮ್ರಾಜ್ಯವನ್ನೂ ಎದುರಿಸಿ ದಾಸ್ಯವನ್ನು ತೊಡೆದು ನಿಂತಿದೆ? ಪುರಾತನ ನೂತನ ಭಾರತಗಳಿಗೆ ಸಂಬಂಧವಿದೆಯೆ? ಧರ್ಮ ತತ್ತ್ವ ಸಂಸ್ಕಾರಗಳ ಭಾರತ ನೂತನ ವಿಜ್ಞಾನದ ಆಧುನಿಕ ಯುಗದೊಡನೆ ಹೊಂದಿಕೊಳ್ಳಬಲ್ಲುದೆ? ಇಂದಿನ ಬಲಪ್ರಧಾನವಾದ ತುಮುಲ ಪ್ರಪಂಚದಲ್ಲಿ ಮುದಿಭಾರತ ಇನ್ನೊಮ್ಮೆ ಸತ್ತ್ವಶಾಲಿಯಾಗಿ ಪ್ರಭಾವಶಾಲಿಯಾಗಿ ಪುನರ್ನೂತನವಾಗಿ ಬಾಳಬಲ್ಲುದೆ? ಯೋಚನಾಪರನಾದ ದೇಶಪ್ರೇಮಿಯ ಅಂತರಂಗದಲ್ಲಿ ಹೀಗೆ ಉದ್ಭವಿಸುವ ನಾನಾ ಪ್ರಶ್ನೆಗಳನ್ನು ಮಥಿಸುತ್ತ ಶ್ರೀ ಜವಹರಲಾಲರು ಈ ಗ್ರಂಥದಲ್ಲಿ ಭಾರತದ ಇತಿಹಾಸವನ್ನು, ಆತ್ಮವನ್ನು, ಪುರಾತನ–ನೂತನ ಶಕ್ತಿ ಮೂಲವನ್ನು ತಮ್ಮದೇ ಆದ ಉದಾರವಾದ ದೃಷ್ಟಿಯಿಂದ ಅವಲೋಕಿಸಿದ್ದಾರೆ, ವಿವೇಚಿಸಿದ್ದಾರೆ, ವಿಮರ್ಶಿಸಿದ್ದಾರೆ. ಭಾರತದ ಭವಿಷ್ಯತ್ತಿನಲ್ಲಿ ಆಶಾವಾದಿಯಾದ ಯಾವ ಭಾರತೀಯನೂ ಈ ಮಹತ್ಕೃತಿಯನ್ನು ಓದಿ ಸಂತೋಷಗೊಳ್ಳದಿರಲಾರನು.

P. T. O.

ಅಭಿಪ್ರಾಯಗಳು

Mr. Krishna Murthy Rao has done a good job of the task he has undertaken and earned the gratitude of Kannada Readers for making available to them this masterly work which has earned world-wide reputation.

—The Hindu

ಇಂಗ್ಲೀಷ್ ಭಾಷೆಯಲ್ಲಿ ಬರೆದಿರುವ ಪುಸ್ತಕವನ್ನು ಶ್ರೀ ಸಂ. ವಾ. ಕೃಷ್ಣಮೂರ್ತಿ ರಾಯರು ಇಂಗ್ಲಿಷ್ ತಿಳಿಯದ ಕನ್ನಡಿಗರಿಗೆಲ್ಲರಿಗೂ ಅರ್ಥವಾಗುವ ಹಾಗೆ ತಿಳಿಗನ್ನಡದಲ್ಲಿ ಅನುವಾದ ಮಾಡಿ ಪ್ರಶಂಸಾರ್ಹರಾಗಿರುತ್ತಾರೆ.

—ಪುಸ್ತಕ ಪ್ರಪಂಚ

ಅನುವಾದಕರಾದ ಶ್ರೀ. ಕೃಷ್ಣಮೂರ್ತಿರಾಯರು ತುಂಬ ಶ್ರಮವಹಿಸಿದ್ದಾರೆ. ಅವರದು ಒಳ್ಳೆಯ ತಿಳಿಯಾದ ಭಾಷೆ, ಮೃದುವಾದ ನುಡಿ....ಗ್ರಂಥಕರ್ತೃರ ಪ್ರಯತ್ನ ಸಾರ್ಥಕವಾಗಿದೆ ಎಂದು ಮುಕ್ತಕಂಠದಿಂದ ಹೇಳಬಹುದು.

—ಕರ್ಮವೀರ

ಕೃಷ್ಣಮೂರ್ತಿರಾಯರು ಇದನ್ನು ಅನುವಾದಿಸಿ ಇದೀಗ ಕನ್ನಡಿಗರಿಗರ್ಪಿಸಿದ್ದಾರೆ.....ಇವರ ಈ ಪುಸ್ತಕವೂ ಕನ್ನಡಿಗರಿಗೆ ಪ್ರಿಯವಾಗುವುದು ಖಂಡಿತ.

—ದೇಶಬಂಧು

ಲೂಯಿ ಪಾಶ್ಚರ್

ಎಸ್. ವಿ. ಕೃಷ್ಣಮೂರ್ತಿರಾವ್

ಕ್ರೌ. ಅ. viii + ೧೪೭ ಬೆಲೆ: ೨-೪-೦

ಸ್ವಾರಸ್ಯ ಕಾದಂಬರಿಯಂತೆ ಇದೆ, ಈ ಪುಸ್ತಕ.

—ತಾಯಿನಾಡು

ಕಾವ್ಯಾಲಯ ಪ್ರಕಟಿಸಿದಂತಹ ಈ ಬಗೆಯ ವಿಮರ್ಶಾ ಬರಹಗಳನ್ನು ಗಮನಿಸಿದಾಗ ಕೆಲವೊಂದು ವಿಚಾರಗಳು ಸ್ಪಷ್ಟವಾಗುತ್ತವೆ. ಓದುಗರ ಅಭಿಪ್ರಾಯವನ್ನು ಪ್ರಕಾಶಕ ಲೇಖಕರುವುದರಿಂದ ಅವರಲ್ಲಿದ್ದಂತಹ ಅವರ ಜವಾಬ್ದಾರಿಗಳು ಭಿನ್ನ ನೆಲೆಯನ್ನು ಪಡೆದುಕೊಳ್ಳುತ್ತೇವೆ. ಇದುವರೆಗೂ ಅನುಸರಿಸಿದ ಮಾರ್ಗಗಳಿಗೆ ಹೊಸ ಆಲೋಚನೆಗಳು ಸೇರ್ಪಡೆಯಾಗುತ್ತವೆ. ವಿಮರ್ಶಾ ಬರಹಗಳು ಪತ್ರಿಕೆಗಳಲ್ಲಿ ಹಂಚಿ ಹೋದರೆ ಅವುಗಳನ್ನು ಒಟ್ಟಾರಿ ಗ್ರಹಿಸಲು ಸಾಧ್ಯವಿಲ್ಲ. ಆದ್ದರಿಂದ ಅವುಗಳನ್ನು ಸಂಗ್ರಹಿಸಿ ಕೃತಿಗಳಲ್ಲಿ ಮುದ್ರಣ ಮಾಡಿದರೆ ಓದುಗರಿಗೆ ಕೃತಿಗಳ ಸಮಗ್ರ ವಿಚಾರಗಳು ಸುಲಭವಾಗಿ ತಿಳಿಯುತ್ತವೆ. ಪ್ರಕಾಶಕರ ಬಗೆಯ ನಿಲುವುಗಳು ಖಂಡಿತ ಅಭಿನಂದನಾರ್ಹ ಎನ್ನಬಹುದು.

ಅಧ್ಯಾಯ - ೭

ಕಾಪ್ಯಾಲಯ ಮತ್ತು ಒಪ್ಪಂದಗಳು

೭.೧ ಕಾಪ್ಯಾಲಯ ಮತ್ತು ಗ್ರಂಥಸ್ವಾಮ್ಯ ಕಾಯಿದೆ

ಒಂದು ಸಂದರ್ಭದಲ್ಲಿ ಶರತ್ತುಗಳೆಂದರೆ ಸಂಭಾವನೆಯನ್ನು ಗೊತ್ತುಪಡಿಸುವುದಕ್ಕೆ ಮಾತ್ರ ಸೀಮಿತವಾಗಿತ್ತು. ಲೇಖಕ ಪ್ರಕಾಶಕರ ಸಂಖ್ಯೆ ಹೆಚ್ಚಾದಂತೆ, ಪುಸ್ತಕ ವ್ಯಾಪಾರ ಬೆಳೆದಂತೆ ಪ್ರಕಾಶನದ ವಿಷಯದಲ್ಲಿ ಜಟಿಲತೆಗಳು ತೋರಿಬಂದು ಲೇಖಕ ಪ್ರಕಾಶಕರ ಬಾಂದವ್ಯದಲ್ಲಿ ವೈಮನಸ್ಸುಗಳುಂಟಾದವು. ಲೇಖಕರು ತಮಗೆ ಪ್ರಕಾಶಕರಿಂದ ದೊರೆಯಬೇಕಾದ ಸಹಾಯ ಸಂಭಾವನೆಗಳನ್ನು ಖಚಿತ ಪಡಿಸಿಕೊಳ್ಳಲು ಇಷ್ಟಪಟ್ಟರು. ನಂತರ ಲೇಖಕ ಪ್ರಕಾಶಕರ ಸಂಬಂಧ ಲಿಖಿತ ಕರಾರುಗಳ ಮೂಲಕ ಸ್ಪಷ್ಟಗೊಳ್ಳುವುದು ಸರ್ವ ಸಾಧಾರಣ ಪದ್ಧತಿಯಾಯಿತು. ಪಾಶ್ಚಾತ್ಯ ದೇಶಗಳಲ್ಲಿ ಕರಾರುಗಳು ಮುಖ್ಯವಾಗಿ ಎರಡು ರೀತಿಯದಾಗಿರುತ್ತದೆ.

೧. ರಾಯಲ್ಟಿ ಅಗ್ರಿಮೆಂಟ್ ೨. ಪ್ರಾಫಿಟ್ ಶೇರಿಂಗ್ ಅಗ್ರಿಮೆಂಟ್ ಪ್ರಪಂಚದಾದ್ಯಂತ ಪದ್ಧತಿ ಪ್ರಕಾರ, ಕರಾರುಗಳು ಗ್ರಂಥದ ಪೂರ್ಣ ಜೀವಾವಧಿಗೆ ಅಂದರೆ ಗ್ರಂಥದ ಕಾಪಿರೈಟಿನ ಪೂರ್ಣ ಅವಧಿಗೆ ಅನ್ವಯವಾಗುವಂತೆ ಏರ್ಪಟ್ಟಿರುತ್ತವೆ. ಜ್ಞಾನ ಪ್ರಸಾರದ ದೃಷ್ಟಿಯಿಂದಲೂ ವ್ಯಾಪಾರದ ಬೆಳವಣಿಗೆ ದೃಷ್ಟಿಯಿಂದಲೂ ಲೇಖಕ ಪ್ರಕಾಶಕರ ಹಿತರಕ್ಷಣೆಯ ದೃಷ್ಟಿಯಿಂದಲೂ ಅವು ಕರಾರಿನ ವಿಷಯಗಳಾಗುವುದು ಒಳಿತೆಂದು ಹೇಳಬಹುದು.

ಕಾಪ್ಯಾಲಯದ ಕಾಪಿರೈಟ್ ವಿಚಾರವಾಗಿ ಇಂಗ್ಲೆಂಡ್ ರೂಪಿಸಿರುವ ನಿಯಮಗಳನ್ನು ಅನುಸರಿಸುತ್ತಿತ್ತು. ಪ್ರಕಟಣೆಯ ಸಂದರ್ಭದಲ್ಲಿ ಆಗುತ್ತಿದ್ದಂತಹ ಪ್ರತಿ ಸಮಸ್ಯೆಗಳನ್ನೂ ಅವರ ಬಳಿಯೇ ಹೇಳಿ ಪರಿಹರಿಸಿಕೊಳ್ಳುತ್ತಿದ್ದರು. ಉದಾಹರಣೆಗೆ ಲೇಖಕರ, ಪ್ರಕಾಶಕರ ನಡುವೆ ನಡೆಯುವ ತತ್ವಗ್ರಹಿಕೆಗಳನ್ನು ಕಾಪಿರೈಟ್ ಮುದ್ರಿಸುವ ಸಂದರ್ಭದಲ್ಲಿ ಆಗುವ ಗೊಂದಲಗಳನ್ನು ಹೇಳಿ ಪ್ರತಿಕ್ರಿಯೆ ಪಡೆಯುತ್ತಿದ್ದರು. ಹಾಗೆಯೇ ಕೆಲವೊಮ್ಮೆ ನಿಯಮಗಳನ್ನು ವಿರೋಧಿಸಿರುವ ಸಂದರ್ಭಗಳು ಕೂಡ ದೊರಕುತ್ತವೆ. ಇಂಗ್ಲೆಂಡ್ ನಿರ್ಧರಿಸಿದ್ದ ರಾಯಲ್ಟಿ ಅಗ್ರಿಮೆಂಟ್ ಅನ್ನು ಕಾಪ್ಯಾಲಯ ವಿರೋಧಿಸಿ, ಅದನ್ನು ತಿದ್ದುಪಡಿ ಮಾಡಿಕೊಂಡ ವಿಚಾರವಿದೆ. ಕಾನೂನಿನ ಪ್ರಕಾರ ಗ್ರಂಥಸ್ವಾಮ್ಯ ಕಾಯ್ದೆಯನ್ನು ತಿಳಿದುಕೊಳ್ಳಲು ದ ಕಾಪಿರೈಟ್ ಆ್ಯಕ್ಟ್,, ದ ಕಾಪಿರೈಟ್ ರೂಲ್ಸ್ - 1958 ಈ ಕೃತಿಗಳನ್ನು ಬಳಸಿದರು.

೭.೨ ಕಾರ್ಯಾಲಯ ಮತ್ತು ಲೇಖಕರ ನಡುವಿನ ಒಪ್ಪಂದಗಳು

ಕಾರ್ಯಾಲಯ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ಇಂಗ್ಲೆಂಡಿನ ನಿಯಮಗಳನ್ನು ಅನುಸರಿಸುತ್ತಿತ್ತು. ಅವುಗಳನ್ನು ಈ ಕೆಳಕಂಡಂತೆ ಒಂದೊಂದಾಗಿ ಪಟ್ಟಿಮಾಡಲಾಗಿದೆ.

- ಲೇಖಕರು ಮತ್ತು ಪ್ರಕಾಶಕರು ಒಪ್ಪಂದ ಮಾಡಿಕೊಳ್ಳುವ ದಿನಾಂಕ.
- ಲೇಖಕರ ಹೆಸರು ಮತ್ತು ಪ್ರಕಾಶಕರ ಹೆಸರು
- ಲೇಖಕ ರಚಿಸಿರುವ ಕೃತಿಯ ಹೆಸರು, ಯಾವ ವಿಷಯಕ್ಕೆ ಸಂಬಂಧಿಸಿದ ಕೃತಿ, ಯಾವ ಪ್ರಕಾರದ ಕೃತಿ ಎಂಬುದರ ಸ್ಪಷ್ಟನೆ.

ಎರಡು ವ್ಯಕ್ತಿಗಳ ನಡುವೆ ಆಗುವ ಒಪ್ಪಂದಗಳು

೧. ಲೇಖಕ ಸರಿಯಾದ ಸಮಯಕ್ಕೆ ಹಸ್ತಪ್ರತಿಗಳನ್ನು ಮುದ್ರಣಕ್ಕೆ ನೀಡಬೇಕು. ನಂತರದ ಜವಾಬ್ದಾರಿ ಪ್ರಕಾಶಕರದು. ಸ್ವತಃ ಸಮಸ್ಯೆಯನ್ನು ತೆಗೆದುಕೊಂಡು ಕೆಲಸ ಪೂರೈಸಬೇಕು. ಉತ್ಪಾದನಾ ವೆಚ್ಚ, ಪ್ರಕಾಶನದ ಕೆಲಸ ಇವೆಲ್ಲವೂ ಮೊದಲೇ ನಿಗದಿ ಮಾಡಿಕೊಂಡ ಸಮಯದೊಳಗೆ ಆಗಬೇಕು.

ಲೇಖಕ ನಕಲು ಪ್ರತಿಯನ್ನು ತೆಗೆದುಕೊಂಡು, ಬೇಗ ತಿದ್ದುಪಡಿ ಮಾಡಿದ ಪ್ರತಿಯನ್ನು, ಮತ್ತೊಮ್ಮೆ ಬರೆದು ನೀಡಬೇಕು, ಅದನ್ನೇ ನೀಡುವಂತಿಲ್ಲ.

ಭಾವಚಿತ್ರಗಳು, ಕಲಾಕೃತಿಗಳು, ರೇಖಾಚಿತ್ರಗಳು, ಭೂಪಟಗಳು ಇತ್ಯಾದಿ ಇವುಗಳನ್ನು ನೀಡುವಾಗ ಯಾವ ಜಾಗದಲ್ಲಿ ಹಾಕಬೇಕು ಎಂದು ಮೊದಲೆ ತಿಳಿಸಬೇಕು.

ಒಂದು ವೇಳೆ ಲೇಖಕ ನೀಡುವ ಕಾಪಿರೈಟ್ ಅವನದಲ್ಲದಿದ್ದರೆ, ಲೇಖಕ ಅವನ ಸ್ವಂತ ಖರ್ಚಿನಲ್ಲಿ ಕಾಪಿರೈಟ್‌ನ ನಿಜವಾದ ಹಕ್ಕುದಾರನ ಬಳಿ ಬರವಣಿಗೆ ಮೂಲಕ ಅನುಮತಿ ಕೇಳಿ, ಪುನಃ ಅದನ್ನು ಮುದ್ರಿಸಿ ಅವನ ಮಾತಿನಂತೆ ಹಾಕಬೇಕು. ಲೇಖಕ ಮುದ್ರಣದ ಸಂದರ್ಭದಲ್ಲಿ ಅಗತ್ಯವಾಗಿ ಪ್ರಕಾಶಕರಿಗೆ ಇಂಡೆಕ್ಸ್ ನೀಡಬೇಕು.

೨. ಲೇಖಕರು ಕೆಲವು ಸಂದರ್ಭಗಳಲ್ಲಿ ಪ್ರಕಾಶಕರ ವಿರುದ್ಧ ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದು. ಆ ಬಗೆಯ ಸಂದರ್ಭಗಳೆಂದರೆ : -

  - ಕಾಪಿರೈಟ್‌ನ ಬಗ್ಗೆ ಮೊದಲೇ ಮಾಡಿಕೊಂಡಿದ್ದ ಕರಾರುಗಳು ಮಧ್ಯದಲ್ಲಿ ಮುರಿದು ಬಿದ್ದಾಗ,
  - ಸರ್ಕಾರ ರೂಪಿಸಿದ ನೀತಿ ನಿಯಮಗಳು, ಅಥವಾ ಆಜ್ಞೆಗಳು ಒಪ್ಪಂದಕ್ಕೆ ವಿರುದ್ಧವಾಗಿದ್ದಾಗ, ಪ್ರಶ್ನಾರ್ಥವಾಗಿದ್ದಾಗ, ಕಳಪೆಯಾಗಿದ್ದಾಗ

- ಪ್ರಕಾಶಕರು ಲೇಖಕರ ಸಾಮಗ್ರಿಗಳನ್ನು ಹಾಳುಮಾಡಿದಾಗ, ಕಳೆದಾಗ ಈ ಎಲ್ಲಾ ಸಂದರ್ಭಗಳಲ್ಲಿ ಲೇಖಕ ಪ್ರಕಾಶಕರ ವಿರುದ್ಧ ಕ್ರಮಕೈಗೊಳ್ಳಬಹುದು.

3. ಗ್ರಂಥ ಸ್ವಾಮ್ಯ ಕಾಯಿದೆ ಲೇಖಕನದ್ದು. ಲೇಖಕ ಕೆಲಸ ಮುಗಿಯುವ ಮೊದಲೇ ಸಂಭಾವನೆ ಪಡೆದಿದ್ದರೆ, ಕೃತಿಯ ಪುನರ್‌ಮುದ್ರಣದ ಕರ್ತವ್ಯ ಲೇಖಕನದಾಗಿರುತ್ತದೆ. ಪ್ರಕಾಶಕ ಎಷ್ಟು ಪ್ರತಿ ಹೇಳುತ್ತಾನೋ ಅಷ್ಟನ್ನು ಬರೆದುಕೊಡಬೇಕು.

೪. ಪ್ರಕಟಣೆಗೆ ಸಂಬಂಧಿಸಿದಂತೆ ಮುದ್ರಣ ವೆಚ್ಚ, ಪುನರ್‌ಮುದ್ರಣವೆಚ್ಚ, ಜಾಹೀರಾತು ವೆಚ್ಚ ಇವುಗಳನ್ನು ಪ್ರಕಾಶಕನೇ ಭರಿಸಬೇಕು. ಉಚಿತ ಪ್ರತಿಗಳ ವಿಚಾರವನ್ನು ಕೂಡ ಪ್ರಕಾಶಕನಿಗೆ ಬಿಟ್ಟದ್ದು. ತಿದ್ದುಪಡಿ, ಪುನರ್‌ಸೇರ್ಪಡೆ ಇವುಗಳ ವೆಚ್ಚವನ್ನು ಹೇಗೆ ನಿರ್ಧರಿಸಲಾಗುತ್ತದೆಂದರೆ, ಮೊದಲ ಮುದ್ರಣಕ್ಕೆ ಆಗುವ ವೆಚ್ಚದ 10% ಲೇಖಕ ನೀಡಬೇಕು.

೫. ಕೃತಿಯ ಬೆಲೆಯನ್ನು ಮೊದಲೇ ನಿರ್ಧರಿಸಲಾಗಿರುತ್ತದೆ. ಮೂರು ವರ್ಷದೊಳಗೆ ಪ್ರಕಾಶಕ ಆ ಬೆಲೆಯನ್ನು ಹೇಗೆ ಬೇಕಾದರೂ ಬದಲಾಯಿಸಬಹುದು.

ಒಂದು ವೇಳೆ ಪ್ರತಿಗಳು ಮಾರಾಟವಾಗದೆ ಉಳಿದರೆ ಅವುಗಳನ್ನು ಪ್ರಕಾಶಕರು ಲೇಖಕರಿಗೆ ಹಿಂದಿರುಗಿಸಬಹುದು.

ಲೇಖಕ ಕೂಡ ಅದು ಬೇಡ ಎನ್ನಬಹುದು. ಆದರೆ ೨ ವಾರದೊಳಗೆ ಅದು ನಡೆಯಬೇಕು.

೬. ಕಾಪಿರೈಟ್ ಹಕ್ಕು ಲೇಖಕನದ್ದು, ಆದರೆ ಕೃತಿಗಳನ್ನು ಪುನರ್‌ಮುದ್ರಿಸುವ, ಸಂಕ್ಷಿಪ್ತಗೊಳಿಸುವ ಕೆಲಸವನ್ನು ಲೇಖಕ ಯಾವಾಗ ಬೇಕಾದರೂ ಮಾಡಬಹುದು.

೭. ಪ್ರಕಾಶಕನಿಗೆ ಲೇಖಕ, ಕೆಲವೊಂದು ವಿಚಾರದಲ್ಲಿ ಸಹಕರಿಸಬೇಕು.

- ಪ್ರಕಾಶಕನಿಗೆ ಕೃತಿಯಲ್ಲಿ ಅನಗತ್ಯವಾದ ಭಾಗವನ್ನು ತೆಗೆಯುವ ಅಧಿಕಾರವಿರುತ್ತದೆ.
- ಕೃತಿಯ ಶೀರ್ಷಿಕೆಯನ್ನು ಬದಲಿಸುವ ಅಧಿಕಾರ ಕೂಡ ಪ್ರಕಾಶಕನಿಗಿರುತ್ತದೆ.

೮. ಪ್ರಕಾಶನ ಪ್ರಕಟಣೆಗೆ ಸಂಬಂಧಿಸಿದ ಆರ್ಥಿಕ ವ್ಯವಹಾರವನ್ನು ಪ್ರತಿವರ್ಷದ ಮಾರ್ಚ್ ೩೧ ರಂದು ತೋರಿಸಬೇಕು.

- ‘ಲೇಖಕ ಮೂರು ತಿಂಗಳೊಳಗೆ ಪ್ರಕಾಶಕನಿಗೆ ಕೊಡಬೇಕಾದ ಹಣವನ್ನು ಕೊಡಬೇಕು.

೯. ಲೇಖಕ ಈಗಾಗಲೇ ಪ್ರಕಟವಾಗಿರುವ ಕೃತಿಗೆ ಸಂಬಂಧಿಸಿದ ವಿಚಾರವನ್ನೇ ಮುಂದುವರಿಸಿ ಅಥವಾ ಈಗಾಗಲೇ ಪ್ರಕಟವಾಗಿರುವ ಕೃತಿಯನ್ನೇ ಮತ್ತೆ ಬೇರೊಂದು ಪ್ರಕಾಶಕರ ಹತ್ತಿರ ಮಾಡಿಸುವಂತಿಲ್ಲ.

೧೦. ಲೇಖಕ ಪ್ರಕಾಶನದಿಂದ ತೆಗೆದುಕೊಂಡ ಮೊದಲ ಆರು ಪ್ರತಿಗಳನ್ನು ಮತ್ತು ಕೊಂಡುಕೊಂಡ ಇತರ ಪ್ರತಿಗಳನ್ನು ಮತ್ತು ಕೊಂಡುಕೊಂಡ ಇತರ ಪ್ರತಿಗಳನ್ನು ಸ್ವಂತಕ್ಕಾಗಿ ಬಳಸಿಕೊಳ್ಳಬಹುದೇ ಹೊರತು, ಅವುಗಳನ್ನು ನಿಯಮದ ಪ್ರಕಾರ ಮಾರಾಟ ಮಾಡುವಂತಿಲ್ಲ.

೧೧. ಕೃತಿಗೆ ಅಗತ್ಯವಾದ ಎಲ್ಲಾ ಕೆಲಸಗಳನ್ನು ಲೇಖಕನೇ ಮಾಡಬೇಕು.

- ಪುನರ್ ಮುದ್ರಣದಲ್ಲಿ ಲೇಖಕ ಅಗತ್ಯವಾದ ವಿಚಾರಗಳನ್ನು ಸಂಭಾವನೆ ಇಲ್ಲದೆ ಸೇರಿಸಬಹುದು.
- ಒಂದು ವೇಳೆ ಈ ಕೆಲಸವನ್ನು ಲೇಖಕ ಬೇಜವಬ್ದಾರಿಯಿಂದ ಮಾಡಿದರೆ ಅಥವಾ ಮಾಡದಿದ್ದರೆ, ಅಥವಾ ಇನ್ನೇನೋ ಕಾರಣ ಹೇಳಿ ತಪ್ಪಿಕೊಳ್ಳುವ ನೆಪ ಹೂಡುತ್ತಿದ್ದರೆ, ಪ್ರಕಾಶಕ ಆ ಕೆಲಸವನ್ನು ಇನ್ನೊಬ್ಬರಿಂದ ಮಾಡಿಸಬಹುದು.
- ಈ ಕೆಲಸ ಮಾಡುವ ಬೇರೆ ವ್ಯಕ್ತಿಗೆ ಲೇಖಕನಿಗೆ ಕೊಡಬೇಕಾಗಿದ್ದ ಸಂಭಾವನೆಯ ಹಣವನ್ನೇ ನೀಡಲಾಗುವುದು.

೧೨. ಮೊದಲ ಕೃತಿಗೆ ಮಾಡಿಕೊಂಡ ಒಪ್ಪಂದವೇ, ನಂತರದ ಎರಡು ಪ್ರಕಟಣೆಗೆ ಅನ್ವಯವಾಗುತ್ತದೆ.

- ಒಂದು ವೇಳೆ ಮೂರು ತಿಂಗಳ ನಂತರ ಮಾಡಿದ ಬರವಣಿಗೆಯನ್ನು ಲೇಖಕ ಪ್ರಕಾಶಕನಿಗೆ ನೀಡಿದಾಗ, ಅದನ್ನು ಅವರು ತಿರಸ್ಕರಿಸಿದರೆ ಲೇಖಕ ಬೇರೊಬ್ಬ ಪ್ರಕಾಶಕರ ಬಳಿ ಅದನ್ನು ಪ್ರಕಟಣೆಗೆ ನೀಡಬಹುದು

೧೩. ಪ್ರಕಾಶಕ ಮೊದಲು ಮಾಡಿಕೊಂಡಿರುವ ಒಪ್ಪಂದಗಳನ್ನು ಒಂದು ತಿಂಗಳಲ್ಲಿ ಪೂರೈಸುವಲ್ಲಿ ಅಸಮರ್ಥನಾದರೆ ಲೇಖಕ ಅವನ ವಿರುದ್ಧ ನೋಟಿಸ್ ಕಳುಹಿಸಬಹುದು.

- ನಿರ್ದಿಷ್ಟ ಅವಧಿಯೊಳಗೆ ಪ್ರತಿಗಳು ಮುಗಿದುಹೋದರೆ, ಪ್ರಕಾಶಕ ಲೇಖಕನ ಬಳಿ ಹೊಸ ಮುದ್ರಣಕ್ಕೆ ಮನವಿ ಮಾಡಿಕೊಳ್ಳಬೇಕು.
- ಪ್ರಕಾಶಕ ಕೃತಿಗಳಿಗೆ ಸಂಬಂಧಿಸಿದ ಚಿತ್ರಗಳು, ಕಲಾಕೃತಿಗಳನ್ನು ಪುನಃ ಲೇಖಕನಿಂದ ನಿರ್ದಿಷ್ಟ ಬೆಲೆಗೆ ತೆಗೆದುಕೊಳ್ಳಬಹುದು.

೧೪. ಒಪ್ಪಂದದ ಪ್ರಕಾರ ಸಂಭಾವನೆಯನ್ನು ಲೇಖಕರಿಗೆ ಕಾನೂನಾತ್ಮಕವಾಗಿ ನೀಡಲಾಗುತ್ತದೆ.

- ಸಂಭಾವನೆ ಮುದ್ರಣಗಳಿಗನುಗುಣವಾಗಿರುತ್ತದೆ. ಪ್ರಥಮ, ಮುದ್ರಣ ಹೀಗೆ ಎಲ್ಲಾ ಸಂದರ್ಭದಲ್ಲೂ ಬದಲಾಗುತ್ತಿರುತ್ತದೆ.
- ಒಮ್ಮೆ ನಿರ್ಧರಿಸಿದ ಬೆಲೆಗಳು ಪರಿಸ್ಥಿತಿಗಳಿಗನುಗುಣವಾಗಿರುತ್ತದೆ. ಲೇಖಕರು ಎಲ್ಲಾ ಹಕ್ಕುಗಳನ್ನು ಪ್ರಕಾಶಕರಿಗೆ ಬಿಟ್ಟುಕೊಡಬೇಕಾಗುತ್ತದೆ.

೧೫. ಸಂಭಾವನೆಗಳನ್ನು ಕೊಡದಿರುವ ಸಂದರ್ಭಗಳು

- ಗೌರವ ಪ್ರತಿಗಳ ಮುದ್ರಣಕ್ಕೆ
- ಪ್ರತಿಗಳು ಬೆಂಕಿ ಮಳೆಯಿಂದ ನಾಶವಾದಾಗ.

೧೬. ಒಪ್ಪಂದ ನಡೆದ ಮೇಲೆ ಲೇಖಕ ಮತ್ತು ಪ್ರಕಾಶಕರ ನಡುವೆ ಭಿನ್ನಾಭಿಪ್ರಾಯಗಳು ಮೂಡಿದಾಗ ಕಾನೂನಿನ ಪ್ರಕಾರ ಮಧ್ಯವರ್ತಿಗಳನ್ನಿಟ್ಟುಕೊಂಡು ಬಗೆಹರಿಸಿಕೊಳ್ಳಬಹುದು.

೧೭. ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳಿದ್ದರೂ ಅವುಗಳನ್ನು ಅಧಿಕೃತವಾಗಿ ಮಾಡಿಕೊಳ್ಳಬೇಕು.

೭.೨ - ಪ್ರಕಾಶಕ ಮತ್ತು ಪ್ರಕಾಶಕರ ನಡುವೆ ನಡೆಯುವ ಒಪ್ಪಂದಗಳು

ಒಂದು ಪ್ರಕಾಶನ ಅನ್ಯಭಾಷೆಯ ಕೃತಿಯನ್ನು ತನ್ನ ಭಾಷೆಗೆ ಅನುವಾದ ಮಾಡಿಕೊಳ್ಳಬೇಕಾದರೆ ಆ ಕೃತಿಯ ಹಕ್ಕನ್ನು ಪಡೆದ ಪ್ರಕಾಶನದ ಬಳಿ ಮೊದಲು ಅನುಮತಿ ಪಡೆದು, ಅವರ ಕರಾರುಗಳಿಗೆ ಒಪ್ಪಿಕೊಂಡು ಮುಂದಿನ ಕಾರ್ಯ ಪ್ರಾರಂಭಿಸಬೇಕು. ಇವರ ನಡುವೆ ನಡೆಯುತ್ತಿದ್ದಂತಹ ಒಪ್ಪಂದಗಳು ಹೀಗಿವೆ.

- ಒಪ್ಪಂದ ಮಾಡಿಕೊಂಡ ದಿನಾಂಕ
- ಒಪ್ಪಂದ ಮಾಡಿಕೊಳ್ಳುತ್ತಿರುವ ಸಂಸ್ಥೆ ಹೆಸರು
- ಒಪ್ಪಂದ ಮಾಡಿಕೊಳ್ಳಲಿರುವ ಸಂಸ್ಥೆಯ ಹೆಸರು
- ಅನುವಾದ ಮಾಡುಕೊಳ್ಳುತ್ತಿರುವ ಕೃತಿಯ ಹೆಸರು ಮತ್ತು ಲೇಖಕರ ಹೆಸರು
- ಯಾವ ಭಾಷೆಯಿಂದ ಯಾವ ಭಾಷೆಗೆ ಅನುವಾದ ಮಾಡಲಾಗುತ್ತದೆ ಎಂಬುದರ ಸ್ಪಷ್ಟನೆ.

ಎರಡೂ ಸಂಸ್ಥೆಗಳು ಒಪ್ಪಿಕೊಂಡ ನಿಯಮಗಳು

೧. ನಿರ್ದಿಷ್ಟ ಅವಧಿಯೊಳಗೆ ಕೃತಿಯ ಮುದ್ರಣ ಮತ್ತು ಪ್ರಕಟಣೆ ಸ್ವಂತ ಖರ್ಚಿನಿಂದ, ಜವಾಬ್ದಾರಿಯಿಂದ ಮುಗಿಸಬೇಕು.

೨. ಕೃತಿಗೆ ಬಳಸುವ ಕಾಗದ, ಆಕಾರ, ಬೈಂಡಿಂಗ್, ಸೌಂದರ್ಯ ಸಾಮಗ್ರಿಗಳನ್ನು ಅನುವಾದ ಮಾಡಿಕೊಳ್ಳುವವನು ನಿರ್ಧರಿಸಬೇಕು.

ಬೆಲೆಯನ್ನು ಎರಡೂ ಸಂಸ್ಥೆಯವರು ಸೇರಿ ನಿರ್ಧರಿಸಿಕೊಳ್ಳಬೇಕು.

೩. ಎಷ್ಟು ಪ್ರತಿಗಳನ್ನು ಪ್ರಕಟಪಡಿಸುತ್ತೇವೆ ಎಂಬುದನ್ನು ಮೊದಲೇ ನಿರ್ಧರಿಸಿರಬೇಕು.

- ಅನುಮತಿ ಪಡೆದ ಸಂಸ್ಥೆಗೆ ಎಷ್ಟು ಪ್ರತಿಗಳನ್ನು ನೀಡಬೇಕು ಎಂಬ ಸ್ಪಷ್ಟನೆ
- ಅವುಗಳಲ್ಲಿ ಯಾವುದನ್ನೂ ಮಾರಾಟ ಮಾಡಬಾರದು, ಸ್ವಂತ ಬಳಕೆಗೆ ಬಳಸಬೇಕು.
- ಅವುಗಳಲ್ಲಿ ಇಂತಿಷ್ಟು ಪ್ರತಿಗಳನ್ನು ವಿಮರ್ಶೆಗೆ ಬಳಸಬಹುದು ಎಂಬುದರ ಸ್ಪಷ್ಟನೆ.

೪. ಪ್ರಕಟವಾದ ಮೇಲೆ ಎಷ್ಟು ಕಮೀಷನ್ ಅನುಮತಿ ನೀಡಿದ ಸಂಸ್ಥೆಗೆ ನೀಡಬೇಕೆಂಬ ಸ್ಪಷ್ಟನೆ.

೫. ಪ್ರಕಟಗೊಂಡ ಪ್ರತಿ ಕೃತಿಯ ೧೦೭. ಭಾಗದ ಹಣವನ್ನು ಅನುಮತಿ ನೀಡಿದ ಪ್ರಕಾಶನಕ್ಕೆ ನೀಡಬೇಕು. ಮೊದಲೇ ನಿರ್ಧಾರವಾಗಿದ್ದ ಕೊನೆಯ ದಿನಾಂಕ ಕಳೆದು ಎರಡು ತಿಂಗಳೊಳಗೆ ಹಣವನ್ನು ನೀಡಬೇಕು.

೬. ಪ್ರಕಟಣೆಗೆ ಸಂಬಂಧಿಸಿದ ವೆಚ್ಚವನ್ನು ವರ್ಷಕ್ಕೆ ಎರಡು ಬಾರಿ ಅನುಮತಿ ನೀಡಿದ ಪ್ರಕಾಶನಕ್ಕೆ ತೋರಿಸಬೇಕು. ಎಲ್ಲಾ ಬಗೆಯ ವ್ಯವಹಾರದ ವಿವರಗಳನ್ನು ಜೂನ್ ಮತ್ತು ಡಿಸೆಂಬರ್ ತಿಂಗಳಲ್ಲಿ ತೋರಿಸಬೇಕು.

೭. ಪ್ರಕಟವಾದ ಕೃತಿಯ ಸಂಕ್ಷಿಪ್ತ ಆವೃತಿಯನ್ನು ಮತ್ತೆ ಅದೇ ಭಾಷೆಯಲ್ಲಿ ಅದೇ ಪ್ರಕಾಶಕರಿಂದ ಪ್ರಕಟ ಮಾಡಲು ಇದೇ ಕರಾರನ್ನು ಮುಂದುವರಿಸುವಂತಿಲ್ಲ

೮. ಪ್ರಕಟವಾದ ಕೃತಿಗೆ ಸಂಬಂಧಿಸಿದಂತೆ ಇನ್ನೊಂದು ಬರಹವನ್ನು ಬರೆಯುವಂತಿಲ್ಲ. ಅನುಮತಿ ಪಡೆದೇ ಬರೆಯಬೇಕು.

ಈ ಎಲ್ಲಾ ಬಗೆಯ ಒಪ್ಪಂದಗಳು ನಡೆದ ಮೇಲೆಯೇ ಕೃತಿಯ ಪ್ರಕಟ ಸಾಧ್ಯವಾಗುವುದು. ಒಂದು ಸಂದರ್ಭದಲ್ಲಿ ಯಾವುದೇ ಬಗೆಯ ಕರಾರುಗಳಿಲ್ಲದೆ ಪ್ರಕಟಣಾ ಕಾರ್ಯ ನಡೆಯುತ್ತಿತ್ತು. ಕೇವಲ ನಂಬಿಕೆ, ವಿಶ್ವಾಸಗಳ ಮೇಲೆ ಎಲ್ಲಾ

ವ್ಯವಹಾರಗಳನ್ನು ನಡೆಸಲಾಗುತ್ತಿತ್ತು. ಉಧ್ಯಮದಲ್ಲಿ ವ್ಯವಹಾರದ ದೃಷ್ಟಿಕೋನ ಹೆಚ್ಚಾದಂತೆಲ್ಲ ಅವ್ಯವಹಾರಗಳು ನಡೆಯಲಾರಂಭಿಸಿದವು. ಅವ್ಯವಹಾರಗಳನ್ನು ನಿಯಂತ್ರಿಸುವ ನಿಟ್ಟನಲ್ಲಿ ಒಪ್ಪಂದಗಳು ಅನಿವಾರ್ಯವಾದವು.

ಅಧ್ಯಾಯ ೮
ಸಮಾರೋಪ

ನವೋದಯ ಸಂದರ್ಭದಲ್ಲಿ ಸ್ಥಾಪನೆಯಾದಂತಹ ಸಂಸ್ಥೆ ಕಾವ್ಯಾಲಯ. ಅಗ ಎಲ್ಲೆಡೆ ಸಂದಿಗ್ಧ ವಾತಾವರಣ ಮತ್ತು ಸಂಕ್ರಮಣ ಸ್ಥಿತಿಯು ನಿರ್ಮಾಣವಾಗಿತ್ತು. ಈ ಕಾರಣದಿಂದಾಗಿ ಕಾವ್ಯಾಲಯ ಬಹುಎಚ್ಚರಿಕೆಯಿಂದ ಸಂಸ್ಥೆಯನ್ನು ಮುನ್ನಡೆಸಬೇಕಾಯಿತು. ಶಿವಮೊಗ್ಗ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಸಾಹಿತ್ಯ ಕೃತಿಗಳ ಪ್ರಕಟಣೆಯನ್ನು ಮಾಡತೊಡಗಿದ್ದರು. ನಂತರ ವಿಚಾರವಾಹಿನಿ ಪತ್ರಿಕೆಯ ಮೂಲಕ ಜನರಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸಲಾರಂಭಿಸಿದ್ದರು.ಈ ನಡುವೆಯೇ ಕಾವ್ಯಾಲಯ ಪ್ರಕಾಶನ ಸ್ಥಾಪನೆಯಾಯಿತು. ಹಲವು ಉದ್ದೇಶಗಳನ್ನಿಟ್ಟುಕೊಂಡು ಈ ಸಂಸ್ಥೆ ಬೆಳೆಯಲಾರಮಭಿಸಿತು.ಅದರಂತೆಯೇ ಹಲವು ವಿಚಾರಗಳಲ್ಲಿ ಯಶಸ್ಸನ್ನು ಪಡೆದುಕೊಂಡಿತು. ಇನ್ನೂ ಕೆಲವು ವಿಚಾರಗಳಲ್ಲಿ ಅನಿವಾರ್ಯವಾಗಿ ಫಲವಾಗಬೇಕಾಯಿತು. ಪ್ರಬಂಧದ ಪ್ರಾರಂಭದಿಂದ ಕೊನೆಯವರೆಗೂ ಕಾವ್ಯಾಲಯ ಪ್ರಕಾಶನ ಇಟ್ಟುಕೊಂಡಿದ್ದ ಹಲವಾರು ಉದ್ದೇಶಗಳನ್ನು ಗಮನಿಸಲಾಗಿದೆ.

ಪುಸ್ತಕೋದ್ಯಮ ಎಂಬುದು ಪಾಶ್ಚಾತ್ಯ ದೇಶಗಳನ್ನು ನೋಡಿ ಅನುಸರಿಸಿದ,ಸ್ವೀಕರಿಸಿದ ಒಂದು ಉದ್ಯಮ. ಬರವಣಿಗೆಯ ಕಲ್ಪನೆ ಮೂಡದಿದ್ದಾಗ ಸಾಹಿತ್ಯವನ್ನು ಸುರಕ್ಷಿತವಾಗಿ ಇಡುವ ಕ್ರಮ ಬೇರೆ ಇತ್ತು. ಕೈಗರಿಕಾ ಕ್ರಾಂತಿಯ ಫಲದಿಂದಾಗಿ ಪ್ರಪಂಚದಾದ್ಯಂತ ಸಾಕಷ್ಟು ಬದಲಾವಣೆಗಳು ಆದವು. ಈ ಕ್ರಾಂತಿಯು ಜನಜೀವನದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿತ್ತು. ಜನರ ಆಚಾರ ಆಲೋಚನೆಗಳು ಬದಲಾದವು.ಆಗ ಸಾಹಿತ್ಯಕ್ಷೇತ್ರ ಕೂಡ ಭಿನ್ನ ಭಿನ್ನ ಆಯಾಮಗಳನ್ನು ಪಡೆದುಕೊಂಡಿತು. ಹೀಗೆ ಆದಂತಹ ಬದಲಾವಣೆಗಳನ್ನು ಭಾರತದ ಸಂದರ್ಭದಲ್ಲಿ, ವಿದೇಶಿ ಸಂದರ್ಭದಲ್ಲಿ,ಕನ್ನಡದ ಸಂದರ್ಭದಲ್ಲಿ ಗುರುತಿಸುವ ಪ್ರಯತ್ನಗಳನ್ನು 'ಪುಸ್ತಕೋದ್ಯಮದ ಹಿನ್ನೆಲೆ-ಮುನ್ನೆಲೆ' ಅಧ್ಯಾಯದಲ್ಲಿ ಮಾಡಲಾಗಿದೆ.

ಸಂಕ್ಷಿಪ್ತವಾಗಿ ಕಾವ್ಯಾಲಯ ಬೆಳೆದು ಬಂದ ವಿಚಾರಗಳನ್ನು ಗ್ರಹಿಸಲಾಗಿದೆ. ಕಾವ್ಯಾಲಯದ ಪ್ರಕಟನೆಗಳನ್ನು, ದಾಖಲೆಗಳನ್ನು ನೋಡುವ ಉದ್ದೇಶ ಈ ಅಧ್ಯಯನಕ್ಕಿರುವುದರಿಂದ ಕಾವ್ಯಾಲಯ ಸಂಸ್ಥೆಯ ಇತಿಹಾಸದ ಬಗ್ಗೆ ಹೆಚ್ಚು ಗಮನನೀಡಲಿಲ್ಲ.ಕಾವ್ಯಾಲಯವು ಜನರ ಮನಸ್ಸಿನಲ್ಲಿ ಇಂದಿಗೂ ಉಳಿದಿರುವ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಕಾವ್ಯಾಲಯ ಎಲ್ಲಾ ಬಗೆಯ ಲೇಖಕರನ್ನು ತಿದ್ದಿ, ಅವರಿಗೆ ಎಲ್ಲಾ ಬಗೆಯ ಪ್ರೋತ್ಸಾಹವನ್ನು ನೀಡಿ ಬೆಳೆಸುತ್ತಿತ್ತು ಎಂಬುದು ಅಧ್ಯಯನದ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ.

ಕಾವ್ಯಾಲಯ ಪ್ರಕಾಶನವು ಹಲವು ವಿಚಾರಗಳನ್ನು ಮಾದರಿಯನ್ನಾಗಿ ಇಟ್ಟುಕೊಂಡು ಕೆಲಸ ಮಾಡುತ್ತಿತ್ತು. ಸಂಸ್ಥೆಯಿಂದ ಪ್ರಕಟವಾಗುವ ಕೃತಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು, ಮಾದರಿ ಸಂಸ್ಥೆಯನ್ನಾಗಿ ರೂಪಿಸಲು ಪಾಶ್ಚಾತ್ಯ ದೇಶಗಳ ನಿಯಮಗಳನ್ನು ಅನುಕರಿಸುತ್ತಿತ್ತು.ಮುದ್ರಣ ಯಂತ್ರಗಳ ಮಾದರಿಯನ್ನು ತಿಳಿದುಕೊಳ್ಳಲು ಪ್ರಪಂಚದಾದ್ಯಂತ ಮಾಹಿತಿಗಳನ್ನು ಸಂಗ್ರಹಿಸಿ ಅಧುನಿಕ ಯಂತ್ರಗಳನ್ನು ತರಿಸಿಕೊಳ್ಳುತ್ತಿತ್ತು. ಪ್ರಕಟಣೆಯ ವಿಚಾರದಲ್ಲಿ ಒಂದು ಕೃತಿಯ ಬಾಹ್ಯ ಸೌಂದರ್ಯವನ್ನು ಕಾಪಾಡಲು ಸಾಕಷ್ಟು ಪ್ರಯತ್ತಪಟ್ಟಿತ್ತು. ಅದಕ್ಕೆ ಅನುಕೂಲವಾಗುವಂತೆ ಇಂಗ್ಲೇಂಡಿನಿಂದ ಪುಸ್ತಕ ಪ್ರಕಟಣೆಗೆ ಸಂಬಂಧಿಸಿದ ವಿವರಗಳನ್ನು ತರಿಸಿಕೊಂಡು ಕೆಲಸ ಮಾಡಲಾಗುತ್ತಿತ್ತು. ಕಾಗದದ ಬಳಕೆ, ಬೈಂಡಿಂಗ್, ಕಲಾಕೃತಿ ಹೀಗೆ ಹಲವು ವಿಚಾರಗಳಲ್ಲಿ ಸಾಕಷ್ಟು ಆಸಕ್ತಿಯನ್ನು ಹೊಂದಲಾಗಿತ್ತು.ಈ ಎಲ್ಲಾ ವಿಚಾರಗಳನ್ನು 'ಪ್ರಕಾಶನದ ಮಾದರಿ ವಿಚಾರಗಳು' ಅಧ್ಯಾಯದಲ್ಲಿ ವಿವರಿಸಲಾಗಿದೆ.

ವಿಚಾರವಾಹಿನಿ ಪತ್ರಿಕೆಯ ಮೂಲಕ ಜನರಲ್ಲಿ ಸಾಹಿತ್ಯದ ಬಗ್ಗೆ ಅಭಿರುಚಿ ಬೆಳೆಸಲಾರಂಭಿಸಿದರು. ವಿಚಾರವಾಹಿನಿ ಸಾಹಿತ್ಯ ಮತ್ತು ಸಾಹಿತ್ಯೇತರ ವಿಚಾರಗಳನ್ನು ಒಳಗೊಂಡು ಜನಮನ್ನಣೆ ಗಳಿಸಿತ್ತು ಎಂಬ ವಿಷಯಕ್ಕೆ ಪೂರಕವಾಗಿ ಹಲವಾರು ವಿಚಾರಗಳನ್ನು ಅಧ್ಯಾಯದಲ್ಲಿ ತಿಳಿಸಲಾಗಿದೆ. ಮಕ್ಕಳ ಸಾಹಿತ್ಯದ ವಿಚಾರದಲ್ಲಿ, ಅನುವಾದ ಕೃತಿಗಳ ವಿಚಾರದಲ್ಲಿ, ಶಾಲಾಕಾಲೇಜುಗಳಿಗೆ ಪಠ್ಯಪುಸ್ತಕಗಳನ್ನು ಪ್ರಕಟಿಸುವಲ್ಲಿ, ಕೃತಿಗೆ 'ಅರಿಕೆ'ಯನ್ನು ಬರೆಯುವ ವಿಚಾರದಲ್ಲಿ ಕಾವ್ಯಾಲಯ ವಿಶೇಷ ಗಮನ ನೀಡಿತ್ತು.ಅದಕ್ಕೆ ಸಂಬಂಧಪಟ್ಟ ವಿಶೇಷ ವ್ಯಕ್ತಿಗಳೊಂದಿಗೆ ಸಂಪರ್ಕಟ್ಟುಕೊಂಡು ಪ್ರಕಟಣಾ ಕಾರ್ಯವನ್ನು ಮಾಡುತ್ತಿತ್ತು. ಈ ಎಲ್ಲಾ ವಿಷಯಗಳನ್ನು ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

ಪ್ರಕಾಶಕರು ಕೆಲವು ಮಾಧ್ಯಮಗಳೊಂದಿಗೆ ವಿಚಾರಗಳನ್ನು ವಿನಿಮಯ ಮಾಡಿಕೊಂಡು ಸಂಸ್ಥೆಯನ್ನು ಬೆಳೆಸುತ್ತಿದ್ದರು. ಆಕಾಶವಾಣಿ,ಪತ್ರಿಕೆಗಳು, ಪತ್ರಗಳು ಈ ಮೂಲಕ ಎಷ್ಟೋ ಗಹನವಾದ ವಿಚಾರಗಳನ್ನು ಚರ್ಚೆ ಮಾಡುತ್ತಿದ್ದರು. ಅಗತ್ಯವಾದ ಅಂಶಗಳನ್ನು ಈ ಎಲ್ಲಾ ಮಾಧ್ಯಮಗಳಿಂದ ಪಡೆದುಕೊಳ್ಳುತ್ತಿದ್ದರು.ಲೇಖಕರೊಂದಿಗೆ ಪತ್ರವ್ಯವಹಾರ ನಡೆಸಿ ಸಾಹಿತ್ಯದ ಬೆಳವಣಿಗೆಗೆ ಸಹಾಯಮಾಡುತ್ತಿದ್ದರು. ಇಂತಹ ಮುಖ್ಯವಾದ ಚರ್ಚೆಗಳನ್ನು ಅಧ್ಯಾಯಗಳಲ್ಲಿ ಮಾಡಲಾಗಿದೆ.

ಕೃತಿಗಳ ಪ್ರಕಟಣೆಗೆ ಸಂಬಂಧಿಸಿದಂತೆ ಲೇಖಕರ ಜೊತೆಗೆ,ಬೇರೆ ಪ್ರಕಾಶಕರೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಲಾಗುವ ವಿಚಾರಗಳನ್ನು ತಿಳಿಸಿದ್ದೇನೆ. ಲೇಖಕರಿಗೆ ಪ್ರಕಾಶಕರಿಗೆ ಅನುಕೂಲವಾಗುವ, ಕಾನೂನಾತ್ಮಕವಾಗಿರುವ ಒಪ್ಪಂದಗಳನ್ನು ವಿವರಿಸಲಾಗಿದೆ.ಹಾಗೇಯೇ ಕಾವ್ಯಾಲಯದಿಂದ ಪ್ರಕಟಗೊಂಡಂತಹ ಕೃತಿಗಳ

ಪಟ್ಟಿಯನ್ನು ಕೊಡುವ ಪ್ರಯತ್ನಮಾಡಿದ್ದೇನೆ. ಯಾವ ಯಾವ ಮೂಲಗಳಿಂದ ಸಂಗ್ರಹಿಸಲು ಸಾಧ್ಯವಾಗಿದೆಯೋ ಅಲ್ಲಿಂದೆಲ್ಲ ಕೃತಿಗಳ ಹೆಸರನ್ನು ಸಂಗ್ರಹಿಸಿದ್ದೇನೆ.

ನನ್ನ ಅಧ್ಯಯನದ ಮಿತಿಯೊಳಗೆ ಈ ಎಲ್ಲಾ ವಿಷಯಗಳನ್ನು ಸಂಗ್ರಹವಾಗಿ ಹೇಳುವ ಪ್ರಯತ್ನ ಮಾಡಿದ್ದೇನೆ.ನನ್ನ ಅದ್ಯಯನದಿಂದ ಹೊರಗುಳಿದ ಅನೇಕ ವಿಚಾರಗಳನ್ನು ಇನ್ನೊಂದು ಪ್ರಬಂಧಕ್ಕೆ ಒಳಪಡಿಸಬಹುದು.ಕಾವ್ಯಾಲಯಕ್ಕೆ ಸಂಬಂಧಿಸಿದ ಪ್ರಕಟಣೆಗಳಲ್ಲಿ ಮುನ್ನುಡಿ, ಹಿನ್ನುಡಿಯನ್ನು ಮಾತ್ರ ಸಮಗ್ರವಾಗಿ ನೋಡುವ ಅಗತ್ಯವಿದೆ. ಹಾಗೇಯೇ ಕಾವ್ಯಾಲಯ ಕಲಾಕೃತಿಗಳ ಬಗ್ಗೆ ತೋರಿದ ಆಸಕ್ತಿ ಕುತೂಹಲದಾಯಕವಾದುದು. ಈ ಕಲಾಕೃತಿಗಳನ್ನು ಭಿನ್ನ ಭಿನ್ನ ನೆಲೆಯಲ್ಲಿ ನೋಡಿ ಇವುಗಳನ್ನೇ ಕೇಂದ್ರಿಕರಿಸಿ ಕೆಲಸ ಮಾಡಬಹುದು.ಯಾವುದೇ ಅಧ್ಯಯನಕಾರರಾದರೂ ಈ ನೆಲೆಯಲ್ಲಿ ಯೋಚನೆ ಮಾಡಲು ಅವಕಾಶವಿದೆ.

ಕಾವ್ಯಾಲಯ ಜನಮನ್ನಣೆ ಗಳಿಸಿದಂತಹ ಸಂದರ್ಭದಲ್ಲಿ ಕರ್ನಾಟಕದ ಇತರೇ ಭಾಗಗಳಲ್ಲಿ ಇನ್ನು ಹಲವಾರು ಪ್ರಕಾಶನ ಸಂಸ್ಥೆಗಳಿದ್ದವು. ಇವುಗಳು ಕೂಡ ಸದ್ಭಾವನೆಯಿಂದ ಸದಭಿರುಚಿಯ ಸಾಹಿತ್ಯ ಪ್ರಚಾರಕ್ಕೆ ಕೈ ಹಾಕಿದವು.ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಮನೋಹರ ಗ್ರಂಥಮಾಲೆ, ಸಮಾಜ ಪುಸ್ತಕಾಲಯ, ಸಾಹಿತ್ಯಭಂಡಾರ, ಶಾರದಾಮಂದಿರ, ಅಕ್ಷರ ಪ್ರಕಾಶನ ಇಂತಹ ಕೆಲವುಪ್ರಕಾಶನಗಳು ಅಸ್ಥಿತ್ವದಲ್ಲಿದ್ದವು. ಇವರು ಕೂಡ ಲೇಖಕರನ್ನು ಹುರಿದುಂಬಿಸಿ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡುತ್ತಿದ್ದರು. ಇಂತಹ ಸಂಸ್ಥೆಗಳ ವಿಚಾರವಾಗಿ ಕೂಡ ಅಧ್ಯಯನ ಕೈಗೊಳ್ಳಬಹುದು. ಈ ಬಗೆಯ ಕಾರ್ಯವನ್ನು ಅಧ್ಯಯನಕಾರರು ಕೈಗೊಂಡರೆ ಸಾಹಿತ್ಯ ಲೋಕಕ್ಕೆ ಹೊಸ ಹೊಸ ವಿಚಾರಗಳು ಸೇರ್ಪಡೆಯಾಗುತ್ತವೆ ಎಂಬುದರಲ್ಲಿ ಅನುಮಾನವಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ಲೇಖಕರೇ ಪ್ರಕಾಶನವನ್ನು ಕೈಗೊಂಡತಹ ನಿದರ್ಶನಗಳಿವೆ. ಶಿವರಾಮ ಕಾರಂತರು ಪುತ್ತೂರಿನ ಹರ್ಷ ಪ್ರಕಾಶನದ ಮೂಲಕ,ಕುವೆಂಪು ಉದಯರವಿ ಪ್ರಕಾಶನದ ಮೂಲಕ ಮಾಸ್ತಿಯವರು ಬೆಂಗಳೂರಿನ ಗವೀಪುರದ ಜೀವನ ಕಾರ್ಯಾಲಯದ ಮೂಲಕ ಪುಸ್ತಕಗಳನ್ನು ಹೊರತರುತ್ತಿದ್ದರು. ಈ ಬಗೆಯ ವಿಚಾರಗಳನ್ನು ಕೂಡ ಅಧ್ಯಯನಕ್ಕೆ ಆಯ್ದುಕೊಳ್ಳಬಹುದು.

'ಕನ್ನಡ ಪುಸ್ತಕ ಸಂಸ್ಕೃತಿ–ಕಾವ್ಯಾಲಯ' ಎಂಬ ಪ್ರಬಂಧದಲ್ಲಿ ಕಾವ್ಯಾಲಯದ ಸಾಧಕಬಾಧಕಗಳನ್ನು ಗ್ರಹಿಸುವ ಪ್ರಯತ್ನ ಮಾಡಿದ್ದೇನೆ.ಹಾಗಾಗಿ ಇದೊಂದು ಹೊಸ ಪ್ರಯತ್ನವೆಂದು ಭಾಸಿದ್ದೇನೆ.

ಅನುಬಂಧಗಳು

೧. ಕಾವ್ಯಾಲಯದಿಂದ ಪ್ರಕಟಗೊಂಡ ಪುಸ್ತಕಗಳ ಪಟ್ಟಿ

೨. ಆಕರಗಳು

೩. ಪರಾಮರ್ಶನ ಗ್ರಂಥಗಳು

೪. ಪತ್ರಿಕೆಗಳು

೧. ಕಾವ್ಯಾಲಯದಿಂದ ಪ್ರಕಟಗೊಂಡ ಪುಸ್ತಕಗಳ ಪಟ್ಟಿ

ಅನಂತಕೃಷ್ಣ ಶರ್ಮ	-	ಗಾನಕಲೆ, ಸಾಹಿತ್ಯ ಮತ್ತು ಜೀವನಕಲೆ,
ಹೆಚ್.ಎಸ್. ಅಣ್ಣಯ್ಯಗೌಡ	-	ಮೃಗ ಪ್ರಭುತ್ವ, ರಷ್ಯಾದ ಹತ್ತು ಸಣ್ಣಕಥೆಗಳು, ಜಾರ್ಜ್ ಆಲಿವಿನ್
ಅಹೋಬಲ ಶಂಕರ	-	ಅಪರಾಜಿತೆ , ಮಹಾಯಾತ್ರಿಕ ,
ಅಮೇರಿಕನ್ ಸಾಹಿತ್ಯ	-	ಹೆಲನ್ ಕೆಲರ್, ಸಂಯುಕ್ತ ಸಂಸ್ಥಾನಗಳ ಭೂಗೋಳ ಬೆಳವಣಿಗೆ, ಅಮೇರಿಕ ಜನತೆಯ ಆರ್ಥಿಕ ನಿರ್ವಹಣೆ, ಪರಮಾಣು ಅದರ ವಿವರಣೆ - ಸೆಲಗ್ ಹೆಗ್ಸ್, ಕಲೆಗಳು ಮತ್ತು ಮಾನವ, ಗಾಜಿನಮೃಗ ಸಂಕುಲ, ತವರೂರಿಗೆ ಸುದೀರ್ಘಯಾನ,
ಅನುಪಮ	-	ಆರತಿ ಎತ್ತಿರೆ
ಎಸ್. ಅನಂತನಾರಾಯಣ	-	ಅಂಬಲೀಪುರದ ಕುಂಬಾರ, ರೂಪರಾಣಿ ಕಾಂತಿಮತಿ, ಪಯಣದ ಹಾದಿಯಲ್ಲಿ
ಆ್ಯಂಡರ್ ಸೆನ್ನ	-	ಚಕ್ರವರ್ತಿಯ ಹೊಸ ಬಟ್ಟೆಗಳು
ಆನಂದ	-	ಬೇವು-ಬೆಲ್ಲ, ರಾಬಿನ್‌ಕ್ರೂಸೋ ಕಥೆ, ಮಾಟಗಾತಿ, ಸ್ವಪ್ನಜೀವಿ, ದಹನ ಚಿತ್ರ, ಪಕ್ಷಿಗಾನ
ಆರಾರ್ಕೆ	-	ಪ್ರಸಿದ್ಧ ಪುರುಷರ ಪ್ರಣಯ ಪ್ರಸಂಗಗಳು
ಆನವಟ್ಟಿ ರಾಮರಾವ್	-	ಗೋವು, ಕುದುರೆ, ಜೇಡರ ಹುಳು, ಸೂರ್ಯ
ಕಮಲಾ ರಾಮಾಸ್ವಾಮಿ	-	ದೃಷ್ಟಿದಾನ, ಗುರು ಕಲಿಸಿದ ಪಾಠ, ಮೂರು ಪ್ರಪಂಚಗಳು, ಸೂರ್ಯಗ್ರಹಣ ಹೇಗಾಯಿತು, ಗುಲಾಬಿ ರಿಬ್ಬನ್, ಡಯಾಜೆನಿಸ್ ಮತ್ತು ಗುಲಾಮ, ಮಕ್ಕಳ ಕಥೆಗಳು, ಆಮಂತ್ರಣವಿಲ್ಲದ ಅತಿಥಿಗಳು.
ಕಾರ್ಕೆರ ಹೆಚ್.ಕೆ	-	ಸಂಧಿ ಪ್ರಕಾರ, ಲಗ್ನ, ಕಾಲಚಕ್ರ, ಪುರುಷ, ರಕ್ತ ಸಂಬಂಧ
ಕುಲಕರ್ಣಿ ಬಿಂದುಮಾಧವ	-	ಬಲಿಪೀಠ, ಬನವಾಸಿ, ಕೆರೆಗೆದಾರ.
ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ	-	ಕನ್ನಡ ಮೇಘಸಂದೇಶ
ಕುವೆಂಪು	-	ಕಾನೂರು ಸುಬ್ಬಮ್ಮ ಹೆಗ್ಗಡಿತಿ, ನನ್ನ ದೇವರು, ಮಲೆನಾಡಿನ ಚಿತ್ರಗಳು, ಸಂನ್ಯಾಸ ಮತ್ತು ಇತರ ಕಥೆಗಳು, ನನ್ನ ಗೋಪಾಲ, ಬಿರುಗಾಳಿ, ಬೆರಳ್‌ಗೆ ಕೊರಳ್, ಮೂರು ನಾಟಕಗಳು (ಮಹಾರಾತ್ರಿ, ಶ್ಮಶಾನ, ಕುರುಕ್ಷೇತ್ರ, ಜಲಗಾರ) ಯಮನ ಸೋಲು, ವಾಲ್ಮೀಕಿ ಭಾಗ್ಯ, ರಕ್ತಾಕ್ಷಿ, ಶೂದ್ರ ತಪಸ್ವಿ ಬಲಿದಾನ, ಕಾವ್ಯವಿಹಾರ, ತಪೋನಂದನ, ನಿರಂಕುಶಮತಿಗಳಾಗಿ, ಬಾಪೂಜಿಗೆ ಬಾಷ್ಪಾಂಜಲಿ, ಸಾಹಿತ್ಯ ಪ್ರಚಾರ, ಅಗ್ನಿಹಂಸ, ಕಥನ ಕವನಗಳು, ಕಲಾಸುಂದರಿ, ಕಿಂಕಿಣಿ, ಕೃತ್ತಿಕೆ, ಕೊಳಲು, ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ, ಚಿತ್ರಾಂಗದಾ, ಜೇನಾಗುವಾ, ನನ್ನ ಮನೆ, ನವಿಲು, ಪಕ್ಷಿಕಾಶಿ, ಪ್ರೇಮಕಾಶ್ಮೀರ, ಪಾಂಚಜನ್ಯ, ಬೊಮ್ಮನಹಳ್ಳಿಯ ಕಿಂದರಿಜೋಗಿ, ಮಕ್ಕಳ ಸಾಹಿತ್ಯ (ಕಿಂದರಿಜೋಗಿ,

		ಹಾಳೂರು, ನನ್ನ ಮನೆ, ಮರಿವಿಜ್ಞಾನಿ, ಮೇಘಪುರ, ನನ್ನ ಗೋಪಾಲ), ಮರಿ ವಿಜ್ಞಾನಿ, ಮೇಘಪುರ, ಶ್ರೀ ಸ್ವಾತಂತ್ರ್ಯೋದಯ ಪ್ರಗಾಥಾ, ಷೋಡಶಿ, ಹಾಳೂರು, ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ರಾಮಾಯಣ ದರ್ಶನಂ, ಮೋಡಣ್ಣನ ತಮ್ಮ, ಕಾನೂರು ಹೆಗ್ಗಡಿತಿ.
ಕೂಡಲ ಚಿದಂಬರಂ	-	ಈಸೋಪನ ನೀತಿ ಕಥೆಗಳು ೧, ೨, ೩, ೪, ೫ (ಮಕ್ಕಳಿಗೆ), ಅಣ್ಣ ತಂಗಿ (ಮಕ್ಕಳಿಗೆ), ರಾಜಕುಮಾರಿಯ ಸೋಲು (ಮಕ್ಕಳಿಗೆ), ಗೋಖಲೆ - ನನ್ನ ರಾಜಕೀಯ ಗುರು, ಎವರೆಸ್ಟ್ ವೀರ - (ಅನು), ತೇನ್‌ಸಿಂಗನ ಕಥೆ - (ಅನು), ಮಹಾದೇವ ಗೋವಿಂದ ರಾನಡೆ, ದಾದಾಭಾಯಿ ನವರೋಜಿ, ಚಿದಂಬರಂ ನೆನಪುಗಳು ಮತ್ತು ಅವರ ಜೀವನ ಚರಿತ್ರೆ.
ಎಸ್. ವಿ. ಕೃಷ್ಣಮೂರ್ತಿರಾವ್	-	ಲೂಯಿ ಪಾಶ್ಚರ್
ಎ.ಆರ್. ಕೃಷ್ಣಸ್ವಾಮಿ	-	ನಿಬಂಧ ಮಾಲಾ - II ಠಾಕೂರ್
ಹೆಚ್. ಎಸ್. ಕೃಷ್ಣಯ್ಯಂಗಾರ್	-	ಗಾಂಧಿ, ನೆಹರು, ಸುಭಾಷ್ ಚಂದ್ರಬೋಸ್, ವಲ್ಲಭಬಾಯಿ ಪಟೇಲ್ ಸ್ವಾತಂತ್ರ್ಯ ತಂದುಕೊಟ್ಟ ವ್ಯಕ್ತಿಗಳು.
ಕೃಷ್ಣಮೂರ್ತಿ	-	ಧ್ವನ್ಯಾಲೋಕ ಆ್ಯಂಡ್ ಇಟ್ಸ್ ಕ್ರಿಟಿಕ್ಸ್
ಸಿ.ಕೃಷ್ಣ	-	ಗೌರಿಯ ಮದುವೆ, ದೇವಿ ಚೌಧುರಾಣಿ, ಶಾಲೆಗಳಲ್ಲಿ ಕನ್ನಡ ಬೋಧನೆ, ನನ್ನ ಅಪ್ಸರೆ ಮತ್ತು ಮುಗುದೆಯರ ಪತ್ರಗಳು.
ಕೆ.ಕೃಷ್ಣಮೂರ್ತಿ	-	ಕನ್ನಡ ಉತ್ತರರಾಮ ಚರಿತ್ರೆ
ಎಸ್. ಕೃಷ್ಣಮೂರ್ತಿ	-	ಸಂಗೀತ ಕಲಾನಿಧಿ
ಟಿ.ಪಿ. ಕೈಲಾಸಂ	-	ಟೊಳ್ಳುಗಟ್ಟಿ, ಹೋಂ ರೂಲು, ಬಹಿಷ್ಕಾರ, ಗಂಡಸ್ಕತ್ರಿ, ನಮ್ಬ್ರಾಹ್ಮಣ್ಕೆ, ಬಂಡ್ವಾಳ್ವಿಲ್ಲದ್ಬಡಾಯಿ, ನಮ್‌ಕ್ಲಬ್ಬು , ಅಮ್ಮಾವ್ರ ಗಂಡ, ಸತ್ತವನ ಸಂತಾಪ, ಅನುಕೂಲಕ್ಕೊಬ್ಬಣ್ಣ , ಸೀಕರ್ಣೆ ಸಾವಿತ್ರಿ, ನಮ್‌ಕಂಪ್ನಿ, ತಾಳೀಕಟ್ಟೋಕ್ಕೂಲೀನೇ, ಪೋಲಿಕಿಟ್ಟಿ, ವೈದ್ಯನ ವ್ಯಾಧಿ, ಸೂಳೆ.
ಕೈವಾರ ರಾಜರಾವ್	-	ತಪ್ತಾರ್ತೈದು, ನವದಂಪತಿಗಳು
ಕೊರಟೆ ಶ್ರೀನಿವಾಸರಾವ್	-	ಚಾಲುಕ್ಯ ವಿಕ್ರಮ, ಕಾವ್ಯ ಸಮೀಕ್ಷೆ, ಮಮತೆಯ ಸುಳಿ
ಗಾಂಧೀಜಿ	-	ಗೀತೆಯ ಸಂದೇಶ, ಗೋಖಲೆ ನನ್ನ ರಾಜಕೀಯ ಗುರು, ಸತ್ಯ ಮತ್ತು ದೇವರು (ಸತ್ಯವೇ ದೇವರು), ಮೋಹನ ಮಾಲೆ , ನನ್ನ ಕನಸಿನ ಭಾರತ, ಆತ್ಮ ಸಂಯಮ
ಎಲ್. ಗುಂಡಪ್ಪ	-	ಚಟಾಕಿ, ಭಾರತಿಯವರ ಕವಿತೆಗಳು (ಸುಬ್ರಹ್ಮಣ್ಯ ಭಾರತಿ), ಗೊರೂರು ರಾಮಸ್ವಾಮಿ ಅಯ್ಯಂಗಾರ್ ಶಿವರಾತ್ರಿ, ಹಳ್ಳಿಯ ಬಾಳು, ಬೆಸ್ತರ ಕರಿಯ, ಸಾಹಿತ್ಯದ ಜೀವಾಳ, ವರೋಪಚಾರ,
ಗೋವಿಂದ ಪೈ	-	ನಂದಾದೀಪ, ಹೃದಯರಂಗ, ಗಿಳಿವಿಂಡು, ವಿಟಂಕ, ಇಂಗಡಲು, ಗೊಲ್ಗೊಥಾ ಮತ್ತು ವೈಶಾಖಿ, ಚಿತ್ರಭಾನು, ಹೆಬ್ಬೆರಳು, ಶ್ರೀ ಕೃಷ್ಣ ಚರಿತ್ರೆ, ಗೋವಿಂದ ಪೈ ಅವರ ಕೆಲವು ಪತ್ರಗಳು, ಕನ್ನಡದ ಮೊರೆ

(ಭಾಷಣಗಳು, ಲೇಖನಗಳು), ತಾಯಿ ಮತ್ತು ಸೋ ನಾಟಕಗಳು, ಗೋವಿಂದ ಪೈ ಅವರ ಲೇಖನಗಳು ಮತ್ತು ಪ್ರಬಂಧಗಳು, ಗೀತಾಂಜಲಿ

ಗೋಪಾಲಕೃಷ್ಣ ಪೈ - ತಿರುವು

ಗೋಪಾಲಕೃಷ್ಣ ಅಡಿಗ - ಭೂಗರ್ಭಯಾತ್ರೆ, ಕಟ್ಟುವೆವು ನಾವು, ಭಾವತರಂಗ, ದೆವ್ವದ ಕಥೆಗಳು, ಪರ್ಷಿಯಾ ದೇಶದ ವೀರರು, ರುಸ್ತುಮನ ಕಥೆ

ಗ್ರಿಮ್ ಸಹೋದರರು - ಆರು ಹಂಸಗಳು, ಗಾದೆಗಳು, ಚಂದ್ರನನ್ನು ತಂದರು, ಮನೆಯ ಸಮಾನವಿಲ್ಲ, ಪುಟ್ಟ ರಾಕ್ಷಸ, ಗುಜ್ಜಾರಿ, ಶೆಟ್ಟಿಯ ಕುಣಿತ

ಗೌರಿಕುಪ್ಪುಸ್ವಾಮಿ ಮತ್ತು ಹರಿಹರನ್ - ಪುರಂದರದಾಸರ ಕೀರ್ತನೆಗಳು

ಜೆ.. ಥಾಯಿ - ವೈವಿಧ್ಯದಲ್ಲಿ ಏಕತೆ

ಚದುರಂಗ - ವೈಶಾಖ

ಚಿತ್ರ ರಾಮಚಂದ್ರನ್ - ಭೇಷ್ ಭಲೇ ಭೇಷ್

ಚೆಕಾವ್ - ಮದುವಣಗಿತ್ತಿ

ಚಂದ್ರಶೇಖರ ಮತ್ತು ಬಿ.ವಿ. ಸುಬ್ಬರಾವ್ - ಹಾಲು ಅದರ ಉತ್ಪನ್ನಗಳು

ಜವಾಹರಲಾಲ್ ನೆಹರು - ಭಾರತ ದರ್ಶನ, ಪತ್ರಗುಚ್ಛ, ಹಳೆಯ ಪತ್ರಗಳು

ಜರಾಸಂದ - ಕರ್ಮಚಾರಿ

ಜನಾರ್ಧನ ಗುರ್ಕಾರ್ - ಕಂಬದ ಹುಚ್ಚು, ಗಂಗಾವತಾರ, ಕಾಂತೆಯರ ಕನಸು, ದಂಬನ ನಾಯಿ, ಪರಾವಲಂಬಿ, ಬೆಂಜಮಿನ್ ಫ್ರಾಂಕ್ಲಿನ್, ಕೈಮಾಂಸ

ಜಯಲಕ್ಷ್ಮಿ - ದೀಪಾವಳಿ ಇತರ ಕಥೆಗಳು, ಸರೋಜ ನಳಿನಿ

ಡಿ.ವಿ.ಜಿ - ಪರಶುರಾಮ, ತಿಲೋತ್ತಮ, ಕನಕಾಲುಕ, ಕನ್ನಡ ಮ್ಯಾಕ್‌ಬೆತ್, ಪ್ರಹಸನ ತ್ರಯೀ, ವಿದ್ಯಾರಣ್ಯ ವಿಜಯ, ಜೀವನ ಸೌಂದರ್ಯ ಮತ್ತು ಸಾಹಿತ್ಯ, ಬಾಳಿಗೊಂದು ನಂಬಿಕೆ, ಸಾಹಿತ್ಯ ಶಕ್ತಿ, ಸಂಸ್ಕೃತಿ, ಕಾವ್ಯ ಸ್ವಾರಸ್ಯ, ದಿವಾನ್ ರಂಗಾಚಾರ್ಲು, ಗೋಪಾಲ ಕೃಷ್ಣ ಗೋಖಲೆ, ವಿದ್ಯಾರಣ್ಯರ ಸಮಕಾಲೀನರು, ಜ್ಞಾಪಕ ಚಿತ್ರಶಾಲೆ (೧-೮ ಒಟ್ಟು), ಸಾಹಿತಿ ಸಜ್ಜನ, ಸಾರ್ವಜನಿಕರು, ಕಲೋಪಾಸಕರು, ಸಾಹಿತ್ಯೋಪಾಸಕರು, ಮೈಸೂರಿನ ಧರ್ಮಸಂಪ್ರದಾಯಸ್ಥರು, ಹಲವರು ಸಾರ್ವಜನಿಕರು, ಹೃದಯ ಸಂಪನ್ನರು, ಸಂಕೀರ್ಣ ಸ್ಮೃತಿ ಸಂಪುಟ, ಜಾಕ್‌ಕೇಟ್, ಸ್ವತಂತ್ರ ಭಾರತ, ಜ್ಞಾಪಕ ಚಿತ್ರಶಾಲೆ (ಆಯ್ದ ೧೪ ಲೇಖನಗಳು), ಹಕ್ಕಿಯ ಪಯಣ, ರಾಜ್ಯಾಂಗ ತತ್ತ್ವಗಳು, ರಾಜಕೀಯ ಪ್ರಸಂಗಗಳು ೧-೨, ರಾಜ್ಯಶಾಸ್ತ್ರ ೧, ರಾಜ್ಯಶಾಸ್ತ್ರ ೨: ರಾಜ್ಯ ಕುಟುಂಬ, ವೃತ್ತಪತ್ರಿಕೆ, ಈ ಸೋಪನಿಷತ್ತು, ಪುರುಷಸೂಕ್ತ ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ, ದೇವರು, ಋತು, ಸತ್ಯ, ಧರ್ಮ, ನಿವೇದನ, ಉಮರನ ಒಸಗೆ, ಮಂಕುತಿಮ್ಮನ ಕಗ್ಗ-I, ಮಂಕು ತಿಮ್ಮನ ಕಗ್ಗ - II, ಮರಳು ಮನಿಯನ ಕಗ್ಗ -I, ಮರಳು ಮನಿಯನ - II, ಶ್ರೀರಾಮ ಪರೀಕ್ಷಣಂ,

		ಅನ್ತಃಪುರಗೀತೆ, ಗೀತ ಶಾಕುಂನ್ತಲ, ಶೃಂಗಾರ ಮಂಗಳಂ, ಕೇತಕೀವನ, ಇಂದ್ರವಜ್ರ, ಬೆಕ್ಕೋಜಿ, ವಸಂತ ಕುಸುಮಾಂಜಲಿ, ಮಹಾಚುನಾವಣೆ, ನವ್ಯ ಸಾಹಿತ್ಯ ನಿರ್ಮಾಣ, ವಿಚಿತ್ರ ಚಾ ಪಾತ್ರೆ, ವಿಕ್ರಮ ಪೀಠ - ೧, ವಿಕ್ರಮ ಪೀಠ - ೨, Chennakka, Deeper Horigon.
ದಾಮೋದರ ಮುಖ್ಯೋಪಾಧ್ಯಾಯ	-	ಶುಕ್ಲವಸನಾ ಸುಂದರಿ
ದೇವಕಿ ಮೂರ್ತಿ	-	ಯುರೋ ಅಮೇರಿಕದ ಇಣುಕು ನೋಟ, ಉಪಾಸನೆ, ಶಿಶಿರ ವಸಂತ, ಚಂಡ ಮಾರುತ, ಸೆರೆ, ಒಡಕು ದೋಣಿ, ಆಹುತಿ, ಬಿರುಕು, ಅವನ ನೆರಳು, ನಿರೀಕ್ಷೆ, ಬಂದಿ
ಕೆ. ನರಸಿಂಹ ಶಾಸ್ತ್ರಿ	-	ಸೊಬ್ರಾಹ ರುಸ್ತುಂ, ಕನ್ನಡ ಹಿತೋಪದೇಶ, ಕನ್ನಡ ಪಂಚತಂತ್ರ
ಡಿ.ಎಲ್. ನರಸಿಂಹಾಚಾರ್	-	ಸಿದ್ಧರಾಮ ಚರಿತ್ರೆ ಸಂಗ್ರಹ,
ಎಸ್. ಜಿ. ನರಸಿಂಹಾಚಾರ್	-	ಅಲ್ಲಾವುದ್ದೀನ್ ಅಧ್ಭುತ ದೀಪ
ಆರ್. ಎಲ್. ನರಸಿಂಹಯ್ಯ	-	ಜಗತ್ತುಗಳ ಹುಟ್ಟು ಸಾವು
ಕೆ.ಎಸ್. ನರಸಿಂಹಸ್ವಾಮಿ	-	ಆಯ್ದ ಕವನಗಳು, ಉಂಗುರ, ದೀಪದ ಮಲ್ಲ, ಮನೆಯಿಂದ ಮನೆಗೆ, ಶಿಲಾಲತೆ, ತೆರೆದ ಬಾಗಿಲು, ಇರುವಂತಿಗೆ, ಉಪವನ, ದಮಯಂತಿ, ಪ್ರಪಂಚದ ಬಾಲ್ಯದಲ್ಲಿ, ಪತ್ರಗುಚ್ಛ, ದ ಬುದ್ಧಸ್ಮೈಲ್
ಹಕ್ಲ್‌ಬರಿಫಾನ್	-	ಮಾರ್ಕ್ ಟೆಯ್ನ್
ಕೆ.ವಿ. ನರಸಿಂಹಭಟ್ಟ	-	ವೇದಾಂತ ಪರಿಭಾಷೆ
ಎಸ್. ನರೇನ್	-	ಡೀಪರ್ ಹಾರಿಜೋನ್
ನಾ. ಡಿಸೋಜ	-	ದುರ್ಗವೆಂಖವ್ಯೂಹ
ಆರ್.ಕೆ. ನಾರಾಯಣ್	-	ಮಹಾತ್ಮರ ಬರವಿಗಾಗಿ
ನೀತಿ ಬೋಧಕ	-	ಅರಸನೂ ಮತ್ತು ಬೇವಿನ ಬೀಜವು, ಉಪಾಧ್ಯಾಯ ಮತ್ತು ವಿದ್ಯಾರ್ಥಿ ತೆನಾಲಿ ರಾಮಕೃಷ್ಣ ಮತ್ತು ಕಳ್ಳರು, ಅಸೂಯೆಯುಳ್ಳ ಬ್ರಾಹ್ಮಣ, ಇಬ್ಬರು ವರ್ತಕರು ಮತ್ತು ನ್ಯಾಯಾಧಿಪತಿ, ಇಬ್ಬರೂ ಲೋಭಿಗಳು, ಬ್ರಾಹ್ಮಣ ಹುಲಿ ಮತ್ತು ಜಿಂಕೆ, ತೆನಾಲಿ ರಾಮಕೃಷ್ಣ ಮತ್ತು ಅರಸನ ಸೇವಕರು.
ನ್ಯಾಷನಲ್ ಬುಕ್‌ಟ್ರಸ್ಟ್	-	ಮಾನವನ ಐಹಿಕಾಭ್ಯುದಯ, ಪ್ರಪಂಚದ ಬಾಲ್ಯದಲ್ಲಿ - ವೆರಿಯರ್, ಎಲ್ವಿನ್, ಸುಖಸಾಧನೆ - ಕಸೆಲ್, ನಂಜರಾಜ ಅರಸ, ಹೊಸಲ ಬಳಿ, ತ್ರಿಶಂಕುವಿನ ಮಕ್ಕಳು.
ಎಸ್. ವಿ. ಪರಮೇಶ್ವರ ಭಟ್ಟ	-	ಕನ್ನಡ ಋತುಸಂಹಾರ.
ವಾಲ್ಟನ್	-	ಹೆನ್ರಿ ಡೇವಿಡ್ ಥೋರೂ
ಎಂ.ಎನ್. ಪರ್ವತೆ	-	ಬಾಲಗಂಗಾಧರ ತಿಲಕ್
ಎನ್.ಜಿ. ಪಟವರ್ಧನ್	-	ಮಾನಸ

ಪು.ತಿ.ನರಸಿಂಹಾಚಾರ್	-	ಗೋಕುಲ ನಿರ್ಗಮನ, ರಥಸಪ್ತಮಿ ಮತ್ತು ಇತರ ಚಿತ್ರಗಳು, ಮಲೆ ದೇಗುಲ, ಸಿರಿಬಾಯಿನುಡಿ, ಗಣೇಶದರ್ಶನ, ಈಚಲ ಮರದ ಕೆಳಗೆ, ವಿಕಟಕವಿ ವಿಜಯ, ಧ್ವಜ ರಕ್ಷಣೆ, ಶಬರಿ, ರಾಮಾಚಾರಿಯ ನೆನಪು, ಅಹಲ್ಯೆ, ದೋಣಿಯ ಬನದ ಮತ್ತು ಕವಿ, ಮಾಂದಳಿರು, ಶಾರದಯಾಮಿನಿ, ಹಣತೆ
ಎಂ.ಎಸ್.ಪುಟ್ಟಣ್ಣ	-	ಅವರಿಲ್ಲದೂಟ, ಮುಸುಗು ತೆಗೆಯೇ ಮಾಯಾಂಗನೆ, ಮಾಡಿ ದ್ದುಣ್ಣೋ ಮಹರಾಯ, ಸುಮತಿ ಮದನ ಕುಮಾರನ ಚರಿತ್ರೆ, ಕುಣಿಗಲ ರಾಮಶಾಸ್ತ್ರಿಗಳ ಚರಿತ್ರೆ, ನೀತಿ ಚಿಂತಾಮಣಿ ೧-೧೫ ಭಾಗಗಳು, ಪೇಟೆ ಮಾತೇನಜ್ಜಿ ಚಿತ್ರದುರ್ಗದ ಪಾಳೆಯಗಾರರು - ೧, ಚಿತ್ರದುರ್ಗದ ಪಾಳೆಯಗಾರರು - ೨,೩,೪, ಸಂಧಿ ಪ್ರಕಾಶ, ಲಗ್ನ ಕಾಲಚಕ್ರ, ಬೆಂದಕಾಳೂರು, ಲಲಿತಸಹಸ್ರನಾಮ, ವಿವೇಕಾನಂದರ ನುಡಿಸಂದೇಶ.
ನಾ.ಪ್ರಭಾಕರ್	-	ತ.ರಾ.ಸು. ಜೀವನ, ಮದಕರಿ ನಾಯಕ, ಶ್ರೀಶಂಕರಾಚಾರ್ಯರು.
ಪ್ರೇಮ ರಾಜ್ ಸಂಪಿಗೆ	-	ತೂಗುಮನ,
ಆರ್.ಕೆ. ಪ್ರಭು	-	ಇವರ ಬಾಪು
ಪಂಕಜ	-	ಕಾವೇರಿಯ ಆರ್ತರವ, ಆ ವಿಷಯಗಳಿಗೆ, ಈವಾನ್ ರಷ್ಯಾದ ದೊರೆ, ಮಲಯ ಮಾರುತ, ಯಮುನೆ ಬಾ ಇಲ್ಲಿ?, ಮೋಹಿಣಿ, ವೀಣಾ! ಓ ವೀಣಾ!.
ಬರ್ಟೆಂಡ್ ರಸ್ಸೆಲ್	-	ಸುಖಸಾಧನೆ
ಬಲದೇವ ಉಪಾಧ್ಯಾಯ	-	ಸಂಸ್ಕೃತ ಸಾಹಿತ್ಯದ ಇತಿಹಾಸ, ಭಾರತೀಯ ದರ್ಶನ
ಬಾಣಿ ರಾಯ್	-	ನನ್ನ ಆಸೆಯ ಕಣ್ಣು
ಬಾಲಸುಬ್ರಮಣ್ಯ	-	ವೇದಾಂತಸಾರ, ಅರಿಸ್ಟಾಟಲನ ಕಾವ್ಯಮೀಮಾಂಸೆ, ಕಲೆಗಳು ಮತ್ತು ಮಾನವ, ಕಾದಂಬರಿ - ಅರ್ನೆಸ್ಟ್ ಹೆಮಿಂಗ್‌ವೆ, ಸದಾನಂದ ಯೋಗೀಂದ್ರರ ವೇದಾಂತ ಸಾರ
ಬಿರೇನ್ ದಾಸ್	-	ಇನ್ನೂ ದೂರದ ದಾರಿ, ಮಾಯಾ ಅಥವಾ ಬವುರಾಣಿ
ಡಾ.ಬಿ.ಜಿ.ಎಲ್.ಸ್ವಾಮಿ	-	ತಮಿಳು ಕಲೆಗಳ ನಡುವೆ, ಅಮೇರಿಕದಲ್ಲಿ ನಾನು, ಪಂಚಕಲಶ ಗೋಪುರ, ಹಸುರು ಹೊನ್ನು, ಕಾಲೇಜುರಂಗ, ಕಾಲೇಜು ತರಂಗ, ಮೈಸೂರು ಡೈರಿ, ಫಲಶ್ರುತಿ, ದೌರ್ಗಂಧಿಕಾಪಹರಣ, ಬಿ.ಜಿ.ಎಲ್.ಸ್ವಾಮಿ ಜೀವನದ ಘಟನೆಗಳು
ಬೇಂದ್ರೆ	-	ಉಯ್ಯಾಲೆ
ಬಂಕಿಂಚಂದ್ರ	-	ಆನಂದಮಠ, ಇಂದಿರಾ ಯುಗಳಾಂಗುರೀಯ - ರಾಧಾರಾಣಿ, ರಜನೀ, ಶ್ರೀ ಕೃಷ್ಣ ಚರಿತ್ರೆ, ದೇವೀ ಚೌಧುರಾಣಿ, ವಿಷವೃಕ್ಷ

ಭವಾನಿ ಭಟ್ಟಾಚಾರ್ಯ	–	ಹಸಿವೋ ಹಸಿವು, ಹುಲಿಯ ಬೆನ್ನೇರಿದಾಗ, ಬಂಗಾರ ಲಕ್ಷ್ಮಿ, ಮೋಹಿನಿ ಸಾಹಿತ್ಯ ನೆರಳು, ಡ್ರೀಮ್ಸ್ ಇನ್ ಹವಾಯ್ 1978, ಚಿನ್ನ ಎಂಬ ದೇವತೆ,
ಭಾರತೀ ಪ್ರಿಯ	–	ರುದ್ರವೀಣೆ
ಶ್ರೀಮತಿ ಭಾರತಿ	–	ರಾಮಾನುಜಚಾರ್ಯ, ಭಾರತೀಸುತ, ವೈದ್ಯನ ಮಗಳು
ಶ್ರೀಮತಿ ಭಾರತಿ ಕೇಶವ	–	ಮರೀಚಿಕೆ
ಭೂಪಾಲಂ ಚಂದ್ರಶೇಖರಯ್ಯ	–	ವಿಶ್ವವಿಜೇತನ ಸಿಂಹಾಸನ ರೋಹನ
ಕೆ.ಜಿ. ಮಲ್ಯ	–	ಆಯುರ್ವೇದದ ಕಥೆ, ಸೋಮನಾಥ ಚರಿತ್ರೆ, ರಾಮಾಸ್ವಮೇದಮ್
ಆರ್.ಪಿ. ಮಸನಿ	–	ದಾದಾಭಾಯಿ ನವರೋಜಿ
ಮಧ್ಯಸ್ಥ	–	ಬಿಳಿಹುಲಿ
ಮಹಾದೇವ	–	ಮುದ್ರಾರಾಕ್ಷಸ ನಾಟಕ ಕಥೆ
ಸ.ಚ. ಮಹದೇವ ನಾಯಕ್	–	ಸಂಪಿಗೆ ಅರಳಿವೆ, ನಾನೆದ್ದು ನೆನೆದೇನು, ಜಾನಪದ ರಸಗಂಗೆ, ಹಳ್ಳಿಯ ಹಾಡುಗಳು
ಮಾಣಿಕ್ ಬ್ಯಾನರ್ಜಿ	–	ಬೊಂಬೆಯ ಕುಣಿತದ ಕಥಾಪ್ರಸಂಗ
ಮುದ್ದಣ್ಣ	–	ಶ್ರೀ ರಾಮಾಶ್ವಮೇಧಂ
ಎ.ಪಿ.ಎಸ್. ಮೂರ್ತಿ	–	೨೮ ಭಾರತ ರತ್ನ ಪ್ರಶಸ್ತಿ ವಿಜೇತರು, ಯುವಜನಾಂಗಕ್ಕೆ ವಿವೇಕಾನಂದರ ಸಂದೇಶ, ಲಲಿತ ಸಹಸ್ರನಾಮ
ಎ.ಎನ್.ಮೂರ್ತಿರಾವ್	–	ಅಲೆಯುವ ಮನ, ಹಗಲುಗನಸುಗಳು, ಸಂಯುಕ್ತ ಆಷಾಡಭೂತಿ, ಯೋಧನ ಪುನರಾಗಮನ, ಶ್ರೀ ಮಾಸ್ತಿಯವರ ಕಥೆಗಳು, ಚಿತ್ರಗಳು ಮತು ಪತ್ರಗಳು, ಹವಳದ ದ್ವೀಪ, ಮೋಲಿಯೇರನ ೨ ನಾಟಕಗಳು, ತೆನ್ನಾಲಿ ರಾಮ, ಪಾಶ್ಚಾತ್ಯ ಸಣ್ಣ ಕಥೆಗಳು, ಮಿನುಗು ಮಿಂಚು, ಸಂಯುಕ್ತ ಸಂಸ್ಥಾನಗಳ ಸಾಹಿತ್ಯ
ಮೂರ್ತಿ	–	ಮಕ್ಕಳ ನೀತಿ ಪಾಠಗಳು ೧,೨,೩,೪, ಸರ್ವಜ್ಞನ ವಚನಗಳು
ಡಾ.ಬಿ.ಆರ್. ಮಂಜುನಾಥ್	–	ಬೆಂದಕಾಳೂರು, ನಾದ್ಯಾವ್ರುನ್ನೋಡ್ ಬೇಕು, ಬಿಸಿಲ್ಗುದುರೆ
ಯೋಗಾನರಸಿಂಹನ್	–	ಸುಖಸಾಧನೆ - ಬರ್‌ಟ್ರೆಂಡ್ ರಸೆಲ್
ಯಾತ್ರ	–	ಪದ್ದು ವೆದ್ದೇ, ರತ್ನದ ಕಥೆಗಳು, ಪ್ರಾಣಿಗಳು ಕೆಲವಿನ ನಡೆವಳಿಕೆ, ಮನುಷ್ಯ ಜಾತಿಗಳು, ಭೂನಿಧಿ, ಬಾಣ ಬಿರುಸುಗಳು, ಮಹಿಷ ಮಂಡಲ ಇತಿಹಾಸ, ನೀಲ ಮಣಿಗಳು, ಹರ್ಷಕೋಶ ೧,೨,೩,೪,೫ ಭಾಗಗಳು, ವಿದೇಶಗಳ ಜಾನಪದ ಕಥೆಗಳು ೧,೨,೩,೪ ಭಾಗಗಳು,
ಯಮುನಾಚಾರ್ಯ	–	ವಾಲ್ಡನ್ - ಹೆನ್ರಿ ಡೆವಿಡ್ ಥೋರೂ
ರಮೇಶಚಂದ್ರ ದತ್ತ	–	ಸಂಸಾರ, ಸಮಾಜ, ಮಹಾರಾಷ್ಟ್ರ ಜೀವನ ಪ್ರಭಾತ, ರಜಪೂತ ಜೀವನ ಸಂಧ್ಯಾ,

ರವೀಂದ್ರನಾಥ ಠಾಕೂರ್	–	ನೌಕಾಘಾತ, ಮನೆಜಗತ್ತು, ಗೋರಾ, ವಿನೋದಿನಿ, ಯೋಗಾ ಯೋಗಾ, ರವೀಂದ್ರ ಕಥಾಮಂಜರಿ - ೧,೨,೩, ಚಿನ್ನದ ದೋಣಿ, ನನ್ನ ಬಾಲ್ಯದ ದಿನಗಳು, ಅಂಚೆಯ ಮನೆ, ಬಲಿದಾನ ರಕ್ತ ಕರವೀರ, ರಾಜಾರಾಣಿ, ನರ್ತಕಿಯ ಪೂಜೆ, ಸಾಹಿತ್ಯ , ಬಾಲಸಾಹಿತ್ಯ, ಎರಡು ಸಾಂಕೇತಿಕ ನಾಟಕಗಳು, ಇಪ್ಪತ್ತೊಂದು ಕಥೆಗಳು.
ಕೆ.ವಿ. ರಮೇಶ್	–	ದ ಸ್ಪ್ಲೆಂಡರ್ ದಟ್ ವಾಸ್ ಕರ್ನಾಟಕ
ವಿ.ರಾಘವನ್	–	ಆನ್ ಕಾಲಿದಾಸ
ರಾಘವ	–	ಹಾವಾಡಿಗ, ಹೂವಾಡಿಗಿತ್ತಿ, ಕೋಡಂಗಿ,
ಎಸ್.ಆರ್. ರಾಮಸ್ವಾಮಿ	–	ಮಹಾಭಾರತದ ಬೆಳವಣಿಗೆ
ಎಸ್. ರಾಮಚಂದ್ರ ಶಾಸ್ತ್ರಿ	–	ಶ್ರೀ ಶಂಕರಾಚಾರ್ಯರು
ಎಸ್.ಕೆ. ರಾಮಚಂದ್ರ ರಾವ್	–	ಸಮ್ಸ್ಕಾರ, ಡೆವೆಲಪ್‌ಮೆಂಟ್ ಆಫ್ ಸೈಕಾಲಾಜಿಕಲ್ ಥಾಟ್ ಇನ್ ಇಂಡಿಯನ್, ದ ಐಡಿಯ ಆಫ್ ಸರ್ವೋದಯ, ಟಿಬೆಟ್ಟಿನ ಯೋಗಿ ಮಿಲರೇಪ, ಬೋಧಿಯ ಬೆಳಕಿನಲ್ಲಿ, ಶ್ರೀಮಧ್ವಾಚಾರ್ಯರು.
ರಾಘವೇಂದ್ರಯ್ಯ	–	ಚ. ವಾಸುದೇವಯ್ಯನವರು
ಎಂ. ರಾಮರಾವ್	–	ಅಮೇರಿಕನ್ - ಹೆನ್ರಿ ಜೇಮ್ಸ್
ಎಸ್. ರಾಮರತ್ನಮ್	–	ಪ್ರಹಾಸನ ಇನ್ ಸಾಂಸ್ಕ್ರಿತ್ ಲಿಟರೇಚರ್
ರಾಜೇಶ್ವರಿ ನರಸಿಂಹಮೂರ್ತಿ	–	ಬೆಳದಿಂಗಳ ರಾತ್ರಿ, ಗುಲಾಬಿ ಹೂ
ಎ.ಎಸ್.ರಾಮಕೃಷ್ಣ	–	ಹುಟ್ಟೂರಿನ ಮೋಡ, ಹಾಸ್ಯಲಹರೀ
ರಂಗ	–	ಬದುಕು ಜಟಕಾ ಬಂಡಿ
ರಂ.ಶ್ರೀ. ಮುಗಳಿ	–	ಕನ್ನಡ ಸಾಹಿತ್ಯದ ಇತಿಹಾಸ, ನಮ್ಮ ಕವಿ
ಎಸ್.ವಿ.ರಂಗಣ್ಣ	–	ಶೈಲಿ - ೧, ಶೈಲಿ - ೨, ಶೈಲಿ - ೩, ರಂಗಬಿನ್ನಪ
ರಂಗನಾಥ ಶರ್ಮ	–	ಅಮರಕೋಶ - ೧, ಅಮರಕೋಶ ೧,೨,೩, ಸಂದರ್ಭ ಸೂಕ್ತಿ ಲೌಕಿಕ ನ್ಯಾಯಗಳು
ಲಕ್ಷ್ಮೀ ನರಸಿಂಹಶಾಸ್ತ್ರಿ	–	ಷೇಕ್ಸ್‌ಪಿಯರ್ ನಾಟಕ ಕಥೆಗಳು
ಹೆಚ್. ಆರ್. ಲೀಲಾವತಿ	–	ಚಿತ್ತಾರ
ಲೀಲಾ ಮಜುಂದಾರ್	–	ನಮ್ಮ ಕವಿ
ಲೂಯಿ ಫಿಷರ್	–	ಮಹಾತ್ಮಗಾಂಧಿ - ಅವರ ಜೀವನ ಚರಿತ್ರೆ, ಮಹಾತ್ಮಗಾಂಧಿ - ಅವರ ಸಂದೇಶ
ವಿಶಾಲಾಕ್ಷಿ	–	ಮೂಕಪ್ರೇಮ
ವಿಭೂತಿ ಭೂಷಣ	–	ಮಹಾಯಾತ್ರಿಕ, ಅಪರಾಜಿತೆ
ವಿಜಯಲಕ್ಷ್ಮಿ ಶ್ರೀಕಂಠನ್	–	ರಾಮನ ಕಥೆ
ವಿ.ಕೃ ಗೋಕಾಕ್	–	ಉಗಮ, ನವ್ಯ ಕವಿತೆಗಳು, ಹಿಗ್ಗು
ಕೆ.ವಾಸುದೇವಾಚಾರ್ಯ	–	ನೆನಪುಗಳು, ವಾಗ್ಗೇಯಕಾರ ವಾಸುದೇವಾಚಾರ್ಯ, ನಾ ಕಂಡ ಕಲಾವಿದರು

ಚ. ವಾಸುದೇವಯ್ಯ	-	ಆರ್ಯಕೀರ್ತಿ, ಛತ್ರಪತಿ ಶಿವಾಜಿ, ಭೀಷ್ಮ ಚರಿತ್ರೆ, ಜವಹರಲಾಲ್ ನೆಹರು
ಬಿ.ಎಲ್. ವೇಣು	-	ಪ್ರೇಮ ಮದುವೆ ಮತ್ತು ಶೀಲ, ಪ್ರೇಮಜಾಲ, ಪ್ರೀತಿ ವಾತ್ಸಲ್ಯ, ಅಜೇಯ, ಪರಾಜಿತ,
ವಿದ್ಯಾ ಮುರುಳೀಧರ	-	ಹೌದೇನು, ಗ್ರೀಮ್ ಸಹೋದರರು, ಮುದ್ದು ಪಾಪುಗೆ ಮುತ್ತಿನಂಥ
ವೇಣುಗೋಪಾಲ ಕಾಸರಗೋಡು	-	ಮಣ್ಣಿನ ಬೊಂಬೆ, ಆಹುತಿ, ಏಳು
ಟಿ.ಎಸ್. ವೆಂಕಣ್ಣಯ್ಯ	-	ಪ್ರಾಚೀನ ಸಾಹಿತ್ಯ, ಕಾದಂಬರಿ ಸಂಗ್ರಹ, ಬಸವರಾಜ ದೇವರ ರಗಳೆ
ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ	-	ಗಜಶಾಸ್ತ್ರ ಶಬ್ದ ಕೋಶ,
ವೃಂದಾನವನಲಾಲ್ ವರ್ಮ	-	ರಾಮಗಢದ ರಾಣಿ, ಝಾನ್ಸಿಯ ರಾಣಿ, ಶರ್ವಾಣಿ, ಕಾವೇರಿಯ ಆರ್ತರವ, ವೀಣಾ, ಓ ವೀಣಾ!
ಶರಶ್ಚಂದ್ರ	-	ಶುಭದಾ, ಹಳ್ಳಿಯ ಸಮಾಜ
ವಿ.ವಿ. ಶರ್ಮಾ	-	ಚಿಕುತ್ಸುಕ ಕಾಂಟ್ರಿಬುಷನ್ ಟು ಅದ್ವೈತ
ಎಸ್.ಜಿ. ಶಾಸ್ತ್ರಿ	-	ಇದ್ದರೂ ಇರಬಹುದು
ಆರ್.ಶಾಂತ	-	ಬಂಗಾಲಿ ಕಾದಂಬರಿ - ವಿಷವೃಕ್ಷ
ಡಾ.ಪಿ.ಶಿವರಾಮ್ ರೈ	-	ಬಣ್ಣದ ಚಿಟ್ಟೆ, ಪ್ರವೀಣನ ಪ್ರವಾಸ, ಆಮಂತ್ರಣವಿಲ್ಲದ ಅತಿಥಿಗಳು, ಕೀಟಗಳ ಸಮ್ಮೇಳನ
ಡಾ.ಎಂ.ಶಿವಮೂರ್ತಿ	-	ದಿವ್ಯ ಪ್ರಕಾಶ
ಶಿವಸ್ವಾಮಿ	-	ಪರಿನಿರ್ವಾಣ
ಶೇಷ ನಾರಾಯಣ	-	ಮೂಲಾನಕ್ಷತ್ರ, ರಾಜಮೋಹನ
ವಿ.ಪಿ. ಶ್ರೀನಿವಾಸಮೂರ್ತಿ	-	ಅಮೆರಿಕದ ಜನತೆಯ ಆರ್ಥಿಕ ನಿರ್ವಹಣೆ - ಗರ್
ತೀ.ನಂ.ಶ್ರೀಕಂಠಯ್ಯ	-	ಕಾವ್ಯ ಸಮೀಕ್ಷೆ, ಬಿಡಿಮುತ್ತು, ರಾಕ್ಷಸನ ಮುದ್ರಿಕೆ, ಗದಾಯುದ್ಧ ಸಂಗ್ರಹ, ನಂಬಿಯಣ್ಣನ ರಗಳೆ, ಹರಿಹರ ಕವಿಯ ನಂಬಿಯಣ್ಣನ ರಗಳೆ, ಆಧುನಿಕ ಭಾವಗೀತೆಗಳು
ಬಿ.ಎಂ. ಶ್ರೀಕಂಠಯ್ಯ	-	ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ - ೧,೨, ಇಂಗ್ಲೀಷ್ ಗೀತೆಗಳು, ಪಾರಸಿಕರು, ಗದಾಯುದ್ಧ ನಾಟಕಂ, ಹೊಂಗನಸುಗಳು, ಅಶ್ವತ್ಥಾಮನ್, ಕನ್ನಡ ಕೈಪಿಡಿ, ಕನ್ನಡ ಬಾವುಟ
ಸಿ.ವಿ. ಶ್ರೀನಿವಾಸ ಮೂರ್ತಿ	-	ಎಲಿಮೆಂಟ್ಸ್ ಆಫ್ ಸೋಷಿಯಲ್ ಸೈನ್ಸ್, ಎಲಿಮೆಂಟ್ಸ್ ಆಫ್ ಲಾಜಿಕ್ ಆಫ್ ಸೈನ್ಟಿಫಿಕ್ ಮೆತಡ್
ಶ್ರೀಪತಿ	-	ಶ್ರೀಪತಿಯ ಕಥೆಗಳು
ಕೆ.ಶಂಕರ	-	ಪ್ರೇಮ ಪ್ರಕರಣ, ವಿವಾಹ ವಿಚ್ಛೇದ, ರಂಗಭೂಮಿ
ಕೆ.ಶಂಕರಪಿಳ್ಳೆ	-	ಎರಡು ಬಳ್ಳಿ, ಕೆಂಪು ಮೀನು,
ಸದಾಶಿವರಾವ್	-	ವರುಣ
ಸಾಹಿತ್ಯ ಅಕಾಡೆಮಿ	-	ಮೋಲಿಯೇರನ ಎರಡು ನಾಟಕಗಳು, ವಳ್ಳತ್ತೋಳ ಕವಿತೆಗಳು ಕೆಂಪು ಮೀನು, ಬಾಲಸಾಹಿತ್ಯ - ಠಾಕೂರ್, ನಿಬಂಧ ಮಾಲಾ Iಠಾಕೂರ್, ನೂರೊಂದು ಕವನ - ಠಾಕೂರ್, ನಾರಿ, ಸ್ಮೃತಿ

		ಚಿತ್ರಗಳು, ಕನ್ನಡ ಸಾಹಿತ್ಯದ ಇತಿಹಾಸ, ವಾಲ್ಡನ್ - ಥೋರೂ, ಹುಲ್ಲಿನ ದಳಗಳು - ವ್ಹಿಟ್ಮನ್, ಮೀಡಿಯ - ಯೂರಿಪಿಡಿಸ್, ೨೩ ಹಿಂದಿ ಕಥೆಗಳು, ತೆಲುಗು ಏಕಾಂತ ನಾಟಕಗಳು, ಭಾರತೀಯ ಸಮಕಾಲೀನ ಸಾಹಿತ್ಯ, ಸಾರ್ಥವಾಹ
ಸೇವ ನಮಿರಾಜಮಲ್ಲ	-	ಭ್ರಮಾಧೀನ
ಹೆಚ್.ವಿ.ಸಾವಿತ್ರಮ್ಮ	-	ನಿರಾಶ್ರಿತೆ , ಮರುಮದುವೆ, ಸರಿದ ಬೆರಳು, ವಿಮುಕ್ತಿ ಲಕ್ಷ್ಮಿ ಪ್ರತೀಕ್ಷೆ, ಸೀತೆ-ರಾಮ-ರಾವಣ, ಸ್ಮರಭಸ್ಮ, ಶಶಿಲೇಖಾ, ನೀಲನೇತ್ರ, ಮದುವಣಗಿತ್ತಿ, ಮಹಾದೇವನ ಜಟಾ ಜೂಟಾದಲ್ಲಿ, ಅಜ್ಜಿಯ ಕಥೆಗಳು - ೧,೨, ತಾಯಿಯ ಹರಕೆ
ವಿ. ಸೀತಾರಾಮಯ್ಯ	-	ಸೊಬ್ರಾಡ್ ರುಸ್ತುಂ, ಮೋಬಿ ಡಿಕ್ - ಹರ್ಮನ್ ಮೆಲ್‌ವಿಲ್
ಎಂ. ವಿ. ಸೀತಾರಾಮಯ್ಯ	-	ಕೈಕೋಲು, ಏಳು ಇಪ್ಪಾರಿನ ಮನೆ - ಹಾಥಾರ್ನ್
ಕೆ.ಎಂ.ಸೀತಾರಾಮಯ್ಯ	-	ಗ್ರೀಕ್ ವೀರರು, ಗ್ರೀಕ್ ಪುರಾಣ ಕಥೆಗಳು
ಸುಧಾಮೂರ್ತಿ	-	ಅತಿರಕ್ತೆ, ಮಹಾಶ್ವೇತೆ
ತ.ರಾ.ಸುಬ್ಬರಾವ್	-	ಬಿಡುಗಡೆಯ ಬೇಡಿ, ಚಂದವಳ್ಳಿಯ ತೋಟ, ರಕ್ತತರ್ಪಣ, ದುರ್ಗಾಸ್ತಮಾನ, ಮಸಣದ ಹೂ, ಸಿಡಿಲ ಮೊಗ್ಗು, ಶಿಲ್ಪಶ್ರೀ, ವಿಷ್ಣುವರ್ಧನ, ಶಾಂತಲಾ, ರತ್ನ ಸಿಂಹಾಸನ, ಕೇದಿಗೆಯವನ, ಕಣ್ಣು ತೆರೆಯಿತು, ನಾಗರಹಾವು, ಎರಡು ಹೆಣ್ಣು-ಒಂದು ಗಂಡು, ಸರ್ಪ ಮತ್ಸರ (೧,೨,೩), ಬಂಗಾರಿ, ಆಕಸ್ಮಿಕ, ಅಪರಾಧಿ, ಪರಿಣಾಮ
ಎಲ್.ಜಿ. ಸುಮಿತ್ರ	-	ಕಾವ್ಯ ಕಾವೇರಿ
ಕೆ.ವಿ.ಸುಬ್ಬಣ್ಣ	-	ಹೂವು ಚೆಲ್ಲಿದ ಹಾದಿಯಲ್ಲಿ
ಜೆ.ಪಿ. ಸಕ್ಸೇನಾ	-	ಫ್ಲಾಶೆಸ್ ಆಫ್ ವಿಸ್ಡಮ್
ಸೈಯದ್ ಹಫಿಸುದ್ದಿನ್	-	ಸೋ ಐ ಬಿಕಮ್ ಎ ಟೀಚರ್
ಸೈಯದ್ ಅಮಾನುದ್ದಿನ್	-	ದ ಫರ್ಬಿಡ್ಡೆನ್ ಫ್ರೂಟ್, ದ ಚಿಲ್ಡ್ರನ್ ಆಫ್ ಹಿರೋಶಿಮಾ, ಹಾರ್ಟ್‌ಕ್ರೇನ್ಸ್ ಮಿಸ್ಟಿಕಲ್ ಕ್ವೆಸ್ಟ್ ಆ್ಯಂಡ್ ಅದರ್ ಎಸ್ಸೇಯ್ಸ್
ಸಂತೋಷ್ ಕುಮಾರ್ ಗುಲ್ವಾಡಿ	-	ಶಿಲಾಬಾಲಿಕೆ, ನಾನು ಹೃದಯ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡೆ
ಪಿ. ಸಾಂಬಮೂರ್ತಿ	-	ಕರ್ಣಾಟಕ ಸಂಗೀತ ರತ್ನಗಳು
ಕು.ಶಿ.ಹರಿದಾಸಭಟ್ಟ	-	ಅರ್ಥಶಾಸ್ತ್ರ
ಜಿ.ಹನುಮಂತರಾವ್	-	ಋಗ್ವೇದ ಸೂಕ್ತಗಳು, ವಿಜ್ಞಾನ
ಡಾ. ಹಾಮಾ ನಾಯಕ್	-	ಸಪ್ತಕ, ಸೊಡರು, ಸನಾದಿ, ಸಂಕುಲಾ
ಹಿರಿಯಣ್ಣ ಹೆಬ್ಬಾರ್	-	ಭಾನುಮತಿ ಕಲ್ಯಾಣ (ಯಕ್ಷಗಾನ)
M. Hiriyanna	-	Art experience, Sanskrit studies, The quest after perfection, popular essays in Indian philosophy, The mission of philosophy, The mission of philosophy, Reviews, Indian philosophical studies – I, Indian Philosophical Studies – II, Indian conception of

values, Isavasyopanisad, kenopanised, kathakopanishad [with the comentary of sri Shankaracharya], Brhadaranyakopanisad.

Henry Devid thoro - Waldon

ಹೊಯಿಸಳ - ಅದಕ್ಕೆ ಆ ಹೆಸರು, ಅನ್ಪು-ಬಾಟ, ಅಭ್ಯಂಕು, ಆನೆ ಇರುವೆ, ಖೈದಿಗಳ ಕಷ್ಟ, ರುಕ್ಕಿಲಿ ರಂಗಿಲಿ, ಗಂಟೆಗೋಪುರ, ನಿಶ್ಚಲದಾಸ, ಪುಟ್ಟರಸು, ಪುಟ್ಟು ತಮ್ಮ ಯಾರು ?, ಪೋರಿ, ಪಟಾಕ್ಷಿ, ರೈಟ್ ಸಹೋದರರು, ಬದುಕುವ ಮಂತ್ರ, ಮಸೀದಿಯನ್ನು ಎಲ್ಲಿ ಕಟ್ಟಿದರು ? , ರಾಜನ ಬುದ್ಧಿವಂತಿಕೆ, ವೀರ ಕುಮಾರ, ಶುಭಾಂಗ, ಹೂವಿನ ಹಾಸಿಗೆ, ಅಕ್ಕಸ್ತಾಲಿಯ ಆಸೆ, ಹರಕೆ, ಸಕ್ಕರೆ ಗೊಂಬೆ, ವರಪ್ಪು ಯಾರು, ಚಂದುಮಾಮ, ಕಳ್ಳಸುಳ್ಳಮಳ್ಳ, ಕೋಲು ಕುದುರೆ, ಪ್ರಸಾದ, ಅರಸನ ಬೇನೆ, ನಾಯಿಕೊಡೆ, ಬಲಮಗ್ಗಲು, ಮರಿಗಳ ಕೂಗು, ಕುದಿಕುಡಿಕೆ, ಬಂಗಾರದ ಪೆಟ್ಟಿಗೆ, ದೇಶವೇ ಅವರ ತಾಯಿ, ಹೇಗಿರಬೇಕು, ಪುಸ್ತಕದಂಗಡಿ.

ಕೆ.ಎಸ್.ಉಮಾಪತಿ - ಸಾರ್ವಜನಿಕ ಗ್ರಂಥಾಲಯ ಕಾಯಕಲ್ಪ, ಶಾಲಾ ಗ್ರಂಥಾಲಯಗಳು, ಕಾಲೇಜು ಗ್ರಂಥಾಲಯಗಳು,

ಚಿ.ಉದಯಶಂಕರ - ಆಯ್ದ ಕವನಗಳು

ವಿಮಲಮಿತ್ರ - ಮಿಥುನಲಗ್ನ, ಸಾಹೇಬ್-ಬೀಬಿ ಮತ್ತು ಗುಲಾಮ್

೨೦೦೨ನೇ ಇಸವಿಯಲ್ಲಿ ಮಕ್ಕಳಿಗಾಗಿ ಪ್ರಕಟವಾದ ಕೃತಿಗಳು - ಜಡಭರತ ಮಹರ್ಷಿ, ಅಭಿಮನ್ಯು, ಕರ್ನಾಟಕದ ವೀರ ರಮಣಿಯರು, ಸಮರ್ಥ ರಾಮದಾಸ ಸ್ವಾಮಿಗಳು, ಚಿತ್ತೂರು ರಾಣಿ ಪದ್ಮಿನಿ, ಚಾವುಂಡರಾಯ, ಶ್ರೀ ಕೃಷ್ಣದೇವರಾಯ, ನೂರ್‌ಜಹಾನ್ ಬೇಗಂ, ಅರೋಗ್ಯ ವಿಧಾನ ಪ್ರಕಾಶಿಕೆ, ಮಹಾಭಾರತದ ಕಥೆಗಳು, ಮಾಲಂಗಿ ಮಡು, ಧರ್ಮಾನುಗ್ರಹ, ರತ್ನಸಿಂಹಾಸನ, ಗುರುದಕ್ಷಿಣೆ, ಬಾಲ್ಯ ಎಲ್ಲಿದೆ, ಕಾಮನಬಿಲ್ಲು, ಪರಿಸರ, ಡೊಂಬರಚೆನ್ನೆ, ನೇಗಿಲ ಮಹಿಮೆ, ಹುತ್ತರಿ ಹಾಡು, ಜೋಗುಳ, ರಾಗಿ ಬೀಸುವ ಹಾಡು, ಶ್ರೀ ರಾಮನ ಜನನ, ವಿವಾಹ, ವನವಾಸ, ಸೀತಾಪಹರಣ.

ಪರಾಮರ್ಶನ ಗ್ರಂಥಗಳು

೧. ಅಣ್ಣಯ್ಯ ಗೌಡ. ಹೆಚ್.ಎಸ್., ರಷ್ಯಾದ ಹತ್ತು ಸಣ್ಣ ಕಥೆಗಳು, ಕಾವ್ಯ, ೧೯೮೭.

೨. ಕೂಡಲಿ ಚಿದಂಬರಂ (ಲೇ) ಕನ್ನಡದಲ್ಲಿ ಗ್ರಂಥೋದ್ಯಮ ಅಥವಾ ಪ್ರಕಾಶನ ಕರ್ಮವೀರ, ದೀಪಾವಳಿ ಸಂಚಿಕೆ. ೧೯೫೮.

೩. ಕರ್ನಾಟಕ ಪುಸ್ತಕ ನೀತಿ, ಕನ್ನಡ ಪುಸ್ತಕ ಪ್ರಾಧಿಕಾರ , ೨೦೦೮.

೪. ಕುವೆಂಪು, ಪಂಚ ಮಂತ್ರ ಮತ್ತು ಸಪ್ತ ಸೂತ್ರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫. ಕುವೆಂಪು, ಬೊಮ್ಮನಹಳ್ಳಿಯ ಕಿಂದರಿಜೋಗಿ, ೧೯೨೮. ಉದಯ ರವಿ ಪ್ರಕಾಶನ, ೧೯೮೯.

೬. ಕ.ಶಂಕರ, ಪ್ರೇಮ ಪ್ರಕರಣ, ಕಾವ್ಯಾಲಯ, ಮೈಸೂರು, ೧೯೫೫.

೭. ಚಂದ್ರಿಕಾ.ಪಿ. (ಸಂ), ಪುಸ್ತಕ ಲೋಕದ ಅನನ್ಯರು, ಕನ್ನಡ ಕವಿ ಕಾವ್ಯಮಾಲೆ, ಶಾರದಾ ಮಂದಿರ ಅಭಿನವ, ೨೦೦೮.

೮. ತೀ.ನಂ.ಶ್ರೀಕಂಠಯ್ಯ, ಬಿಡಿ ಮುತ್ತು, ಕಾವ್ಯಾಲಯ, ಮೈಸೂರು, ೧೯೭೦.

೯. ನಾಗರಾಜ ರಾಯ. ತಾ.ಶ್ರೀ., ಲೇಖನ, ಕಾವ್ಯಾಲಯದ ಕಾರಣ ಪುರುಷ, ಅಪ್ರಕಟಿತ ಲೇಖನ

೧೦. ನರಸಣ್ಣ ಹೆಚ್., ಮುದ್ರಣ ಸಮೀಕ್ಷೆ, ಮೈಸೂರು ವಿಶ್ವವಿದ್ಯಾನಿಲಯ, ೧೯೬೦.

೧೧. ನಾಡಿಗ ಕೃಷ್ಣಮೂರ್ತಿ. (ಪ್ರ.ಸಂ), ಪತ್ರಿಕೋದ್ಯಮ ಪ್ರಥಮ ವಾರ್ಷಿಕೆ ಸಂಚಿಕೆ, ಮೈಸೂರು ವಿಶ್ವವಿದ್ಯಾನಿಲಯ, ೧೯೫೪.

೧೨. ಪು.ತಿ.ನರಸಿಂಹಾಚಾರ್, ದೋಣಿಯ ಬಿನದ, ಮತ್ತು ಕವಿ, ಕಾವ್ಯಾಲಯ, ಮೈಸೂರು ೧೯೪೩.

೧೩. ಪುಟ್ಟಣ್ಣ, ಎಂ.ಎಸ್., ನೀತಿ ಚಿಂತಾಮಣಿ, ಭಾಗ-೧, ೧೯೭೧ ಕಾವ್ಯಾಲಯ ಮೈಸೂರು, ೧೯೮೧.

೧೪. ಪುಟ್ಟಣ್ಣ, ಎಂ.ಎಸ್., ಸುಮತಿ ಮದನ ಕುಮಾರ ಚರಿತೆ, ಕಾವ್ಯಾಲಯ ಮೈಸೂರು. ೧೯೪೯.

೧೫. ಪುಟ್ಟಣ್ಣ ಎಂ.ಎಸ್., ಪೇಟೆ ಮಾತೇನಜ್ಜಿ? ಕಾವ್ಯಾಲಯ ಮೈಸೂರು, ೧೯೫೬.

೧೬. ಭಾರತಿ ದೇವಿ. ಪಿ. (ಸಂ), ಪುಸ್ತಕ ಲೋಕದ ಅನನ್ಯರು, ಡಿ.ವಿ.ಕೆ. ಮೂರ್ತಿ, ಅಭಿನವ, ೨೦೦೮.

೧೭. ಮಾದವ ಎನ್. ರಟ್ಟಿಹಳ್ಳಿ, ಕನ್ನಡ ಗ್ರಂಥೋದ್ಯಮ – ಒಂದು ಐತಿಹಾಸಿಕ ಅಧ್ಯಯನ, ಸಿ.ವಿ.ಜಿ ಪಬ್ಲಿಕೇಶನ್ಸ್ ಬೆಂಗಳೂರು, ೨೦೦೫.

೧೮. ವಿವಿಧ ಲೇಖಕರು, ಅಕ್ಷರ ಲೋಕದ ಅನನ್ಯರು, ಅಕ್ಷರ ಪ್ರಕಾಶನ, ಅಭಿನವ, ೨೦೦೮.

೧೯, ಶ್ರೀಧರ ಹೆಗಡೆ ಭದ್ರನ್ (ಸಂ), ಪುಸ್ತಕ ಲೋಕದ ಅನನ್ಯರು ಮನೋಹರ ಗ್ರಂಥ ಮಾಲೆ, ಅಭಿನವ, ೨೦೦೮.

೨೦. ಶ್ರೀಧರ ಹೆಗಡೆ ಭದ್ರನ್ (ಸಂ), ಪುಸ್ತಕ ಲೋಕದ ಅನನ್ಯರು ಮಿಂಚಿನ ಬಳ್ಳಿ ಗ್ರಂಥ ಮಾಲೆ, ಅಭಿನವ, ೨೦೦೮.

೨೧. ಶಿವಾರೆಡ್ಡಿ ಕೆ.ಸಿ. (ಸಂ), ಕುವೆಂಪು ಸಮಗ್ರ ಗದ್ಯ, ಸಂಪುಟ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೨೨. ಶೇಷಾದ್ರಿ ಸಿ.ಕೆ., ಸಹಸ್ರ ಗ್ರಂಥ ಪುರುಷ, ಕೂಡಲಿ ಚಿದಂಬರಂ, ಬೆಂಗಳೂರು.

೨೩. ಹಾ.ಮಾ.ನಾಯಕ್. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯ, ೧೯೭೯.

೨೪. ಹೊರೆಯಾಲ ದೊರೆಸ್ವಾಮಿ (ಸಂ), ಪುಸ್ತಕ ಲೋಕದ ಅನನ್ಯರು ಕಾವ್ಯಾಲಯ : ಪ್ರಕಾಶಕರು, ಅಭಿನವ, ೨೦೦೮.

ಆಕರಗಳು :

೧. ಕಾವ್ಯಾಲಯದ ಪ್ರಕಟಣೆಗಳು

೨. ಲೇಖಕರೊಂದಿಗೆ ನಡೆಸಿದ ಪತ್ರ ವ್ಯವಹಾರ

೩. ಕಲಾವಿದರಿಂದ ರಚಿಸಿಕೊಂಡ ಕಲಾಕೃತಿಗಳು

೪. ಇತರ ಪುಸ್ತಕ ವ್ಯಾಪಾರಿಗಳೊಂದಿಗಿನ ಪತ್ರವ್ಯವಹಾರ

೫. ರಾಜ್ಯ, ಅಂತರ ರಾಷ್ಟ್ರೀಯ ಮಟ್ಟದ ಲೇಖಕರೊಂದಿಗಿನ ಪತ್ರಗಳು

೬. ವೈಯಕ್ತಿಕ ಟಿಪ್ಪಣಿ.

೭. ಪುಸ್ತಕೋದ್ಯಮಕ್ಕೆ ಸಂಬಂಧಿಸಿರುವ ಲೇಖನಗಳು.

ಪತ್ರಿಕೆಗಳು :

೧. ಕೂಡಲಿ ಚಿದಂಬರಂ, (ಅ) ಕನ್ನಡ ಪ್ರಕಟಣೋದ್ಯಮ ಅಥವಾ ಪ್ರಕಾಶನ, ಕರ್ಮವೀರ ದೀಪಾವಳಿ ವಿಶೇಷಾಂಕ, ೧೯೫೮